
ತಿರುಮಲೆ ತಿರುಪತಿ ದೇವಸ್ಥಾನಗಳು
ಸಪ್ತಗಿರಿ
ಆಧ್ಯಾತ್ಮಿಕ ಸಚಿತ್ರ ಮಾಸಪತ್ರಿಕೆ
ನವೆಂಬರ್ 2025 ಬೆಲೆ ರೂ. 20/-
SAPTHAGIRI(KANNADA)
SPIRITUAL ILLUSTRATED MONTHLY
Volume:05, Issue:4, Pages:56
November - 2025, Price Rs. 20/-
ತಿರುಚಾನೂರು
ಶ್ರೀ ಪದ್ಮಾವತಿ ಅಮ್ಮನವರ ಪಂಚಮೀ ತೀರ್ಥ
25-11-2025







24-09-2025 ತಿರುಮಲೆಯಲ್ಲಿ ವಾರ್ಷಿಕ ಬ್ರಹ್ಮೋತ್ಸವಗಳಲ್ಲಿ ದೊಡ್ಡಶೇಷ ವಾಹನ ಸೇವೆಯಲ್ಲಿ ಪಾಲ್ಗೊಂಡ ಭಾರತದ ಉಪರಾಷ್ಟ್ರಪತಿ ಗೌ॥ ಶ್ರೀ. ಸಿ.ಪಿ. ರಾಧಾಕೃಷ್ಣನ್ ರವರು ಆಂಧ್ರಪ್ರದೇಶದ ಮುಖ್ಯಮಂತ್ರಿಗಳಾದ ಗೌ॥ ಶ್ರೀ ನಾರಾಚಂದ್ರಬಾಬು ನಾಯುಡು ರವರು



25-09-2025 ತಿರುಮಲೆಯಲ್ಲಿ ಸ್ವಾಮಿಯ ದರ್ಶನದ ನಂತರ ಭಾರತದ ಉಪರಾಷ್ಟ್ರಪತಿ ಗೌ॥ ಶ್ರೀ. ಸಿ.ಪಿ. ರಾಧಾಕೃಷ್ಣನ್ ರವರಿಗೆ ಚಿತ್ರಪಟವನ್ನು ನೀಡುತ್ತಿರುವ ಆಂಧ್ರಪ್ರದೇಶದ ಮುಖ್ಯಮಂತ್ರಿಗಳಾದ ಗೌ॥ ಶ್ರೀ ನಾರಾಚಂದ್ರಬಾಬು ನಾಯುಡು ರವರು ಹಾಗೂ ತಿ.ತಿ.ದೇ. ಆಡಳಿತ ಮಂಡಳಿಯ ಅಧ್ಯಕ್ಷರು ಶ್ರೀ ಬಿ.ಆರ್. ನಾಯುಡು ರವರು ತಿ.ತಿ.ದೇ., ಕಾರ್ಯನಿರ್ವಹಣಾಧಿಕಾರಿ ಶ್ರೀ ಅನಿಲ್‌ಕುಮಾರ್ ಸಿಂಘಾಲ್ ಐ.ಎ.ಎಸ್., ರವರು



24-09-2025 ರಂದು ತಿರುಮಲೆ ಸ್ವಾಮಿಯವರ ವಾರ್ಷಿಕ ಬ್ರಹ್ಮೋತ್ಸವಗಳ ಸಂದರ್ಭವಾಗಿ ಸ್ವಾಮಿಯವರಿಗೆ ಆಂಧ್ರಪ್ರದೇಶದ ರಾಜ್ಯದ ವತಿಯಿಂದ ಸ್ವಾಮಿಯವರಿಗೆ ರೇಷ್ಮೆವಸ್ತ್ರಗಳನ್ನು ಸಮರ್ಪಿಸುತ್ತಿರುವ ರಾಜ್ಯದ ಮುಖ್ಯಮಂತ್ರಿಗಳಾದ ಗೌ॥ ಶ್ರೀ ನಾರಾಚಂದ್ರಬಾಬು ನಾಯುಡು ರವರು. ಇವರಿಗೆ ಸ್ವಾಮಿಯವರ ಪ್ರಸಾದಗಳನ್ನು, ಚಿತ್ರಪಟವನ್ನು ನೀಡುತ್ತಿರುವ ತಿ.ತಿ.ದೇ., ಆಡಳಿತ ಮಂಡಳಿಯ ಅಧ್ಯಕ್ಷರು ಶ್ರೀ ಬಿ.ಆರ್. ನಾಯುಡು ರವರು ಮತ್ತು ತಿ.ತಿ.ದೇ., ಕಾರ್ಯನಿರ್ವಹಣಾಧಿಕಾರಿ ಶ್ರೀ ಅನಿಲ್‌ಕುಮಾರ್ ಸಿಂಘಾಲ್, ಐ.ಎ.ಎಸ್., ರವರು ನಂತರ ಮುಖ್ಯ ಮಂತ್ರಿಗಳು ತಿ.ತಿ.ದೇವಸ್ಥಾನಗಳ 2026 ರ ನೂತನ ಕ್ಯಾಲೆಂಡರ್ ಮತ್ತು ಡೈರಿಗಳನ್ನು ಆವಿಷ್ಕರಿಸುತ್ತಿರುವ ದೃಶ್ಯಮಾಲಿಕೆ.

# ಭಗವದ್ಗೀತೆ



ಅಥಚೇತ್ತ್ವಂ ಧರ್ಮ್ಯಮಿಮಂ ಸಂಗ್ರಾಮಂ ನ ಕರಿಷ್ಯಸಿ ।
ತತಃ ಸ್ವಧರ್ಮಂ ಕೀರ್ತಿಂ ಚ ಹಿತ್ವಾ  ಪಾಪಮವಾಪ್ಸ್ಯಸಿ ॥

(ಶ್ರೀಮದ್ಭಗವದ್ಗೀತೆ  ಅಧ್ಯಾಯ - 2, ಶ್ಲೋಕ -33)

**ಆದರೂ ನೀನು ಧರ್ಮಸಾಧನವಾದ ಈ ಯುದ್ಧವನ್ನು ಮಾಡದೆ ಹೋದರೆ ನಿನ್ನ ಸ್ವದೇಶಕ್ಕೂ ಕೀರ್ತಿಗೂ  ಎರವಾಗಿ ಪಾಪವನ್ನಷ್ಟೆ ಪಡೆಯುವೆ.**

---

**ಮಾನಾತೀತಪ್ರಥಿತವಿಭವಾಂ ಮಂಗಳಂ ಮಂಗಳಾನಾಂ**
**ವಕ್ಷಃ ಪೀಠೀಂ ಮಧುವಿಜಯಿನೋ ಭೂಷಯಂತೀಂ ಸ್ವಕಾಂತ್ಯಾ ।**
**ಪ್ರತ್ಯಕ್ಷಾನುಶ್ರವಿಕ ಮಹಿಮಪ್ರಾರ್ಥಿನೀನಾಂ ಪ್ರಜಾನಾಂ**
**ಶ್ರೇಯೋಮೂರ್ತಿಂ  ಶ್ರಿಯಮಶರಣಸ್ತ್ವಾಂ ಶರಣ್ಯಾಂ ಪ್ರಪದ್ಯೇ ॥ 1॥**

**ಆವಿರ್ಭಾವಃ ಕಲಶಜಲಧಾವಧ್ವರೇ ವಾಽಪಿ  ಯಸ್ಯಾಃ**
**ಸ್ಥಾನಂ ಯಸ್ಯಾಃ ಸರಸಿಜವನಂ ವಿಷ್ಣುವಕ್ಷಃಸ್ಥಲಂ ವಾ ।**
**ಭೂಮಾ ಯಸ್ಯಾ ಭುವನಮಖಿಲಂ ದೇವಿ ದಿವ್ಯಂ ಪದಂ ವಾ**
**ಸ್ತೋಕಪ್ರಜ್ಞೈರನವಧಿಗುಣಾ ಸ್ತೂಯಸೇ ಸಾ ಕಥಂ ತ್ವಂ ॥2॥**

- ಶ್ರೀಸ್ತುತಿಃ





# ತಿರುಚಾನೂರು, ಶ್ರೀ ಪದ್ಮಾವತಿ ಅಮ್ಮನವರ ಬ್ರಹ್ಮೋತ್ಸವಗಳು

## 17-11-2025 ರಿಂದ 25-11-2025 ರ ವರೆಗೆ

| ದಿನಾಂಕ | ವಾರ | ಹಗಲು ಉತ್ಸವ | ರಾತ್ರಿ ಉತ್ಸವ |
|---|---|---|---|
| 17-11-2025 | ಸೋಮವಾರ | ತಿರುಚ್ಚಿ ಉತ್ಸವ, ಧ್ವಜಾರೋಹಣ | ಚಿಕ್ಕಶೇಷವಾಹನ |
| 18-11-2025 | ಮಂಗಳವಾರ | ದೊಡ್ಡಶೇಷವಾಹನ | ಹಂಸವಾಹನ |
| 19-11-2025 | ಬುಧವಾರ | ಮುತ್ತಿನಚಪ್ಪರವಾಹನ | ಸಿಂಹವಾಹನ |
| 20-11-2025 | ಗುರುವಾರ | ಕಲ್ಪವೃಕ್ಷವಾಹನ | ಹನುಮದ್ವಾಹನ |
| 21-11-2025 | ಶುಕ್ರವಾರ | ಪಲ್ಲಕಿಯಲ್ಲಿ ಉತ್ಸವ ಸಾ॥ ವಸಂತೋತ್ಸವ | ಗಜವಾಹನ |
| 22-11-2025 | ಶನಿವಾರ | ಸರ್ವಭೂಪಾಲವಾಹನ, ಸ್ವರ್ಣ ರಥೋತ್ಸವ | ಗರುಡವಾಹನ |
| 23-11-2025 | ಭಾನುವಾರ | ಸೂರ್ಯಪ್ರಭವಾಹನ | ಚಂದ್ರಪ್ರಭವಾಹನ |
| 24-11-2025 | ಸೋಮವಾರ | ರಥೋತ್ಸವ | ಅಶ್ವವಾಹನ |
| 25-11-2025 | ಮಂಗಳವಾರ | ಪಲ್ಲಕಿ ತಿರುಚ್ಚಿ ಉತ್ಸವ,ತೀರ್ಥವಾರಿ, ಅವಭೃಥ, ಚಕ್ರಸ್ನಾನ, ಪಂಚಮೀ ತೀರ್ಥ | ತಿರುಚ್ಚಿ ಉತ್ಸವ, ಧ್ವಜಾವರೋಹಣ |

ತಿರುಮಲೆ ತಿರುಪತಿ ದೇವಸ್ಥಾನಗಳು ಆಧ್ಯಾತ್ಮಿಕ ಸಚಿತ್ರ ಮಾಸಪತ್ರಿಕೆ

# ಸಪ್ತಗಿರಿ

ಶ್ರೀವಿಶ್ವಾವಸು ನಾಮ ಸಂವತ್ಸರ ಕಾರ್ತಿಕ - ಮಾರ್ಗಶಿರ ಮಾಸ ಸಂಚಿಕೆ

ಸಂಪುಟ : 05 ನವೆಂಬರ್ - 2025 ಸಂಚಿಕೆ : 04



ವೆಂಕಟಾದ್ರಿ ಸಮಂ ಸ್ಥಾನಂ ಬ್ರಹ್ಮಾಂಡೇ ನಾಸ್ತಿ ಕಿಂಚನ
ವೇಂಕಟೇಶ ಸಮೋ ದೇವೋ ನ ಭೂತೋ ನ ಭವಿಷ್ಯತಿ

**ಗೌರವ ಸಂಪಾದಕರು**
ಶ್ರೀ ಅನಿಲ್‌ಕುಮಾರ್ ಸಿಂಘಾಲ್, ಐ.ಎ.ಎಸ್.,
ಕಾರ್ಯನಿರ್ವಹಣಾಧಿಕಾರಿ,
ತಿ.ತಿ.ದೇ.,ತಿರುಪತಿ.

**ಪ್ರಕಾಶಕರು,ಸಂಪಾದಕರು,**
**ಪ್ರಧಾನ ಸಂಪಾದಕರು** (ಎಫ್.ಎ.ಸಿ)
ಡಾ॥ವಿ.ಜಿ.ಚೊಕ್ಕಲಿಂಗಂ,ಎಮ್.ಎ.ಪಿಎಚ್.ಡಿ.,

**ಮುದ್ರಣ**
ಶ್ರೀ ಆರ್.ವಿ. ವಿಜಯ್‌ಕುಮಾರ್,ಬಿ.ಎ. ಬಿ.ಇಡಿ
ಉಪಕಾರ್ಯನಿರ್ವಹಣಾಧಿಕಾರಿ,
ತಿ.ತಿ.ದೇ.,ಮುದ್ರಣಾಲಯ ಮತ್ತು ಪ್ರಕಾಶನ,
ತಿರುಪತಿ.

**ಡಿ.ಟಿ.ಪಿ.**
ಪ್ರಧಾನ ಸಂಪಾದಕರ -ಕಾರ್ಯಾಲಯ ತಿ.ತಿ.ದೇ.ತಿರುಪತಿ.

**ಛಾಯಗ್ರಹಣ**
ಶ್ರೀ ಪಿ.ಎನ್.ಶೇಖರ್, ಪ್ರಧಾನ ಛಾಯಗ್ರಹಣ,ತಿ.ತಿ.ದೇ.
ಶ್ರೀ ಬಿ.ವೆಂಕಟರಮಣ, ಸಹಾಯ ಛಾಯಗ್ರಹಣ ತಿ.ತಿ.ದೇ.

**ಲೇಖನ / ಚಂದಾ ಮಿಕ್ಕ ವಿವರಗಳಿಗೆ**
ಪ್ರಧಾನ ಸಂಪಾದಕರು, ಸಪ್ತಗಿರಿ ಕಾರ್ಯಾಲಯ,
ತಿ.ತಿ.ದೇ.,ಪ್ರೆಸ್, 2 ನೇ ಅಂತಸ್ತು, ಕೆ.ಟಿ.ರಸ್ತೆ.
ತಿರುಪತಿ - 517 507
ಕಾರ್ಯಾಲಯ : 0877 - 2264543
: 0877 - 2264359
ಪ್ರಧಾನ ಸಂಪಾದಕರು : 0877 - 2264363

ಬಿಡಿ ಪ್ರತಿ ರೂ. 20/-
ವಾರ್ಷಿಕ ಚಂದಾ ರೂ. 240/-
ಆಜೀವ ಚಂದಾ ರೂ. 2400/- (12 ವರ್ಷಗಳು)
ವಿದೇಶಿ ವಾರ್ಷಿಕ ಚಂದಾ ರೂ. 1030/-

ಸಲಹೆ/ದೂರುಗಳಿಗೆ ಟೋಲ್ ಫ್ರೀ ಸಂಖ್ಯೆ :
**1800-425-4141**
ಸಲಹೆ/ಸೂಚನೆ/ದೂರುಗಳಿಗಾಗಿ
sapthagiri.helpdesk@tirumala.org
24x7 ಕೆಲಸ ಮಾಡುವ ದೂರವಾಣಿ ಸಂಖ್ಯೆ
0877 - 2277777, 2233333

ಸಪ್ತಗಿರಿ ಮಾಸಪತ್ರಿಕೆಯನ್ನು ವೀಕ್ಷಕರು
**www.tirumala.org**
ಮೂಲಕ ಓದಬಹುದು.

ಸಪ್ತಗಿರಿಯಲ್ಲಿ ಪ್ರಕಟವಾಗುವ ಲೇಖನಗಳಲ್ಲಿನ ಅಭಿಪ್ರಾಯಗಳು ಸಂಪಾದಕವರ್ಗದ, ಪತ್ರಿಕೆಯ, ಅಭಿಪ್ರಾಯಗಳೇ ಆಗಿರಬೇಕು ಎಂದಿಲ್ಲ. - ಸಂಪಾದಕ

## ವಿಷಯಸೂಚಿಕೆ

| | | |
|---|---|---|
| ಸಂಪಾದಕೀಯ | | 06 |
| ಅಂಗಳದ ಮಂಗಳೆಗೆ ಕಲ್ಯಾಣೋತ್ಸವ | - ಶ್ರೀಮತಿ. ಎಸ್. ರೋಹಿಣಿಶರ್ಮಾ | 07 |
| ವ್ಯೂಹ ಲಕ್ಷ್ಮೀ | - ಶ್ರೀಮತಿ. ಕೆ. ವಿ. ಪದ್ಮಾವತಿ | 10 |
| ಒಡೆದ ಮಡಿಕೆಯಲ್ಲಿ ಮೊಸರನ್ನ ಮಣ್ಣಿನ ಹೂವಿನಲ್ಲಿ ಪರಿಮಳ ಶ್ರದ್ಧೆಯ ಮಹಿಮೆ | - ಪ್ರಣವ | 14 |
| ಶ್ರೀ ಪದ್ಮನಾಭತೀರ್ಥರಿಗೆ ಆರಾಧನೆಯ ಪ್ರಯುಕ್ತ ನಮನ | - ಡಾ॥ ರೂಪಶ್ರೀ ಶಶಿಕಾಂತ್ | 16 |
| ಕನಕದಾಸರು ಕಂಡ ಕೃಷ್ಣ ಪರಮಾತ್ಮ | - ಡಾ॥ ಸಿ.ಎಸ್. ಊರ್ಮಿಳಾ | 18 |
| ಹುಲ್ಲಹಳ್ಳಿಯ ವರದರಾಜಸ್ವಾಮಿ | - ಕೆಂಗೇರಿ ಚಕ್ರಪಾಣಿ | 22 |
| ಶ್ರೀ ವೆಂಕಟೇಶ್ವರ ಸ್ವಾಮಿಯವರ ಆಲಯ | - ದಿ॥ ಜಿ. ಎನ್. ಶ್ರೀನಿವಾಸನ್ | 24 |
| ಧಾತ್ರಿಯೊಂದಿಗೆ ಧಾರ್ಮಿಕ ಥಳಕು ಏಕೆ? | - ಹನುಮಂತ ಮ. ದೇಶಕುಲಕರ್ಣಿ | 31 |
| ತಿರುಮಂಗೈ ಆಳ್ವಾರ್ | - ಡಾ॥ ಎನ್.ಕೆ. ರಾಮಶೇಷನ್ | 32 |
| ಶ್ರೀ ವೆಂಕಟಾಚಲ ಮಹಾತ್ಮ್ಯೆ | - ಶ್ರೀಮತಿ ಎನ್. ಪಾರ್ವತಿ | 34 |
| ಆಳ್ವಾರುಗಳು ಕಂಡ ತಿರುವೇಂಗಡ | - ಎಂ.ಆರ್. ನರಸಿಂಹನ್ | 36 |
| ತಿರುಮಲೆ ಕಾಲಮಾನಾಚರಣೆಗಳು | - ಶ್ರೀಮತಿ | 38 |
| ಜಾಗೃತ ಪವಿತ್ರ ನರಸಿಂಹ ಕ್ಷೇತ್ರ ಯಾದಗಿರಿ | - ಡಾ॥ ಸುಮನಬದರೀನಾಥ್ | 40 |
| ಅಷ್ಟಲಕ್ಷ್ಮೀಯರ ಆರಾಧನೆ | - ಜಿ.ಎಸ್. ಆರ್. ಎಸ್. ಶ್ರೀವಲ್ಲಿ | 42 |
| ರಾಶಿಫಲಗಳು | - ಶ್ರೀಮಾತಾ ಅನುಗ್ರಹ | 46 |
| ನಿಮ್ಮ ಸಂದೇಹಗಳಿಗೆ ನಮ್ಮ ಉತ್ತರಗಳು | - ಡಾ॥ ಅನಸೂಯ ಎಸ್. ರಾಜೀವ್ | 47 |
| ನೀತಿಕಥೆ - ನಿಜವಾದ ದಾನಿ ಎಂದರೆ ಯಾರು? | - ಎ.ಆರ್. ರಘುರಾಮ | 48 |
| ಚಿತ್ರಕಥೆ - ಚಿನ್ನದ ಮಳೆ | - ಜಿ.ಪಿ. | 52 |

**ಮುಖಚಿತ್ರ** - ಶ್ರೀ ಪದ್ಮಾವತಿ ಅಮ್ಮನವರ ಪಂಚಮಿತೀರ್ಥ, ತಿರುಚಾನೂರು

**ಹಿಂಬದಿಚಿತ್ರ** - ಶ್ರೀ ಪದ್ಮಾವತಿ ಅಮ್ಮನವರ ಪುಷ್ಪಯಾಗ, ತಿರುಚಾನೂರು

## ಸಂಪಾದಕೀಯ..............................

# ಜಗನ್ಮಾತೆ! ವಂದನೆಗಳು!!

“ಪದ್ಮಾಲಂಕೃತ ಪಾಣಿಪಲ್ಲವಯುಗಾಂ ಪದ್ಮಾಸನಸ್ಥಾಂ ಶ್ರಿಯಮ್ ।
ವಾತ್ಸಲ್ಯಾದಿ ಗುಣೋಜ್ಜ್ವಲಾಂ ಭಗವತೀಂ ವಂದೇ ಜಗನ್ಮಾತರಮ್॥

ಈ ಮಹರ್ಷಿಗಳು ಈ ಪ್ರಪಂಚವನ್ನು ಐಶ್ವರ್ಯಮಯವಾಗಿ ಸಿರಿಸಂಪತ್ತುಗಳೊಂದಿಗೆ ಇರುವ ದಿವ್ಯತ್ವವನ್ನು ಲಕ್ಷ್ಮೀದೇವತೆಯ ಸ್ವರೂಪವೆಂದು ದರ್ಶಿಸಿದರು. ಜಗತ್ತಿನಕಾರಕನಾದ ಈಶ್ವರನ ಶಕ್ತಿಯೇ ‘ಲಕ್ಷ್ಮಿ’ ಮಹಾಲಕ್ಷ್ಮಿ ಎಂದರೆ ಕೇವಲ ಧನರೂಪಿಣಿಯೇ ಅಲ್ಲದೇ, ಶುದ್ಧ ಸತ್ತ್ವಸ್ವರೂಪಿಣಿಯೂ ಹೌದು! ಮಂಗಳಕರವಾದ ಎಲ್ಲಾ ಗುಣಗಳಿಗೂ ಸಾಕಾರ ರೂಪಿಣಿ! ಈ ಮಾತೆಗೆ ಪದ್ಮ ಎಂಬ ಹೆಸರಿನ ಪದ್ಮಕ್ಕೆ, ಅರಳುವ ಗುಣವಿರುತ್ತದೆ. ಪದ್ಮವು ವಿಕಸಿಸಿದ ಜ್ಞಾನಕ್ಕೆ ಐಶ್ವರ್ಯಕ್ಕೆ ಚಿಹ್ನೆಯಾಗಿದೆ. ವಿಷ್ಣುವಿನ ಹೃದಯಕಮಲದಲ್ಲಿ ಲಕ್ಷ್ಮೀದೇವಿಯು ನೆಲೆಗೊಂಡಿದ್ದಾಳೆಂದು ನಮ್ಮ ಶಾಸ್ತ್ರಗಳೆಲ್ಲಾ ಸಾರಿ ಹೇಳುತ್ತಿವೆ. ಅಂದರೆ “ಶ್ರೀ ಮಹಾವಿಷ್ಣುವಿನ ಸಂಕಲ್ಪ ಶಕ್ತಿಯೇ ಐಶ್ವರ್ಯವಾಗಿ ವ್ಯಾಪಿಸಿದೆ” ಎಂದರ್ಥ !!

ಜಗತ್ತಿನ ಎಲ್ಲಾ ಮಾತೆಯರಿಗೂ ಮಾತೆಯಾದ ಶ್ರೀ ಪದ್ಮಾವತಿ ಅಮ್ಮನವರ ಬ್ರಹ್ಮೋತ್ಸವಗಳು ಕಾರ್ತೀಕಮಾಸದಲ್ಲಿ ಬರುತ್ತವೆ. ಸಾಮಾನ್ಯವಾಗಿ ನಮ್ಮ ಪುರಾಣ ವಾಙ್ಮಯದಲ್ಲಿ ಹನ್ನೆರಡು ತಿಂಗಳಿಗೆ ಪ್ರತ್ಯೇಕವಾದ ಮಹಿಮೆಗಳನ್ನು ತಿಳಿಸುವ ಪುರಾಣಗಳಲ್ಲಿ ಪ್ರಸಿದ್ಧವಾದುದು - “ಕಾರ್ತೀಕ ಪುರಾಣ ಮಾಘ ಪುರಾಣಗಳು” ಅಂತಹ ಕಾರ್ತೀಕ ಮಾಸದಲ್ಲಿ ನಡೆಯುವ ಅಮ್ಮನವರ ಬ್ರಹ್ಮೋತ್ಸವಗಳು ಅತ್ಯಂತ ವೈಭವದಿಂದ ನಡೆಯುತ್ತವೆ. ಅಮ್ಮನವರಿಗೆ ನಡೆಯುವ ವಿವಿಧ ವಾಹನ ಸೇವೆಗಳಲ್ಲಿ ಮುಖ್ಯವಾದುದು ‘ಗಜವಾಹನ’ ಗಜವು ಸ್ಥಿರತೆಗೆ, ಆಧ್ಯಾತ್ಮಿಕ ಬಲಕ್ಕೆ ಸಂಕೇತವಾಗಿದೆ. ಅಮ್ಮನವರು ಗಜವಾಹನದ ಮೇಲೆ ಮೆರವಣಿಗೆ ಬರುವುದರ ಮುಖಾಂತರ ಭಕ್ತರಿಗೆ ಅಚಂಚಲವಾದ ಭಕ್ತಿ, ಧೈರ್ಯ ಎಲ್ಲವನ್ನು ಪ್ರಸಾದಿಸುತ್ತಾಳೆ.

ಕಾರ್ತೀಕ ಶುದ್ಧ ಪಂಚಮಿಯಂದು ಜಗನ್ಮಾತೆ ಶ್ರೀ ಅಲುಮೇಲುಮಂಗಮ್ಮಳ ಜನ್ಮದಿನ ಅಂದರೆ ಆ ತಾಯಿಯು ಅವತರಿಸಿದ ದಿನ. ಆ ದಿನ ತಿರುಮಲೆಯ ಶ್ರೀನಿವಾಸನು ಅಲುಮೇಲುಮಂಗಮ್ಮಳ ಹುಟ್ಟಿದ ಹಬ್ಬದ ಕಾಣಿಕೆಯಾಗಿ- ಸೀರೆ, ಕುಪ್ಪಸ, ಚಂದನ, ಅರಿಶಿನ ಕುಂಕುಮ, ತುಳಸಿ, ಪ್ರಸಾದಗಳನ್ನು ಉಡುಗರೆಯಾಗಿ ಕಳುಹಿಸುತ್ತಾನೆ. ಅಂದೇ ಅಮ್ಮನವರ ಬ್ರಹ್ಮೋತ್ಸವಗಳಲ್ಲಿ ನಡೆಯುವ ಅತ್ಯಂತ ಮುಖ್ಯವಾದ **‘ಪಂಚಮೀತೀರ್ಥ’** ಎಂಬ ಉತ್ಸವ! ಇದು ಪದ್ಮ ಸರೋವರದಲ್ಲಿ ನಡೆಯುವ ವಿಶೇಷವಾದ ಕಾರ್ಯಕ್ರಮ! ಸರೋವರದ ತೀರದಲ್ಲಿ ಅಮ್ಮನವರಿಗೆ, ಚಕ್ರತ್ತಾಳ್ವಾರರಿಗೆ ತಿರುಮಂಜನವನ್ನು ನಿರ್ವಹಿಸಿ, ಪದ್ಮಪುಷ್ಕರಿಣಿಯಲ್ಲಿ ಸುದರ್ಶನ ದೇವರಿಗೆ ಚಕ್ರಸ್ನಾನವನ್ನು ನೆರವೇರಿಸುತ್ತಾರೆ. ಇದು ಅಮ್ಮನವರ ಬ್ರಹ್ಮೋತ್ಸವಗಳಲ್ಲಿ ಪ್ರಮುಖವಾದ ಹಂತವೆಂದು ಭಾವಿಸಲಾಗುತ್ತದೆ. ಇದನ್ನು ವೀಕ್ಷಿಸುವುದಕ್ಕೆ ಲಕ್ಷಾಂತರ ಭಕ್ತರು ಹಾಜರಾಗಿ, ತೀರ್ಥ ಸ್ನಾನವನ್ನು ಮಾಡಿ, ಅಮ್ಮನವರ ಕೃಪೆಗೆ ಪಾತ್ರರಾಗುತ್ತಾರೆ.

ಕಾರ್ತೀಕವೆಂದರೆ ಹರಿಹರರ ಪ್ರತೀಕ! ಹಾಗೇ ಅವರಿಬ್ಬರಿಗೂ ಅತ್ಯಂತ ಪ್ರಿಯವಾದ ಮಾಸ! ಇವರಲ್ಲಿ ಹರನಿಗೆ ತಿರುಪತಿಯ ಕಪಿಲೇಶ್ವರಾಲಯದಲ್ಲಿ ನಡೆಯುವ ಲಕ್ಷಬಿಲ್ವಾರ್ಚನೆ ಅತ್ಯಂತ ನಯನ ಮನೋಹರವಾದುದಾಗಿದೆ. ಇನ್ನು ಶಿವನ ಪುತ್ರನಾದ ಕುಮಾರಸ್ವಾಮಿಗೆ ನಡೆಯುವ ಸ್ಕಂದಷಷ್ಠಿ ಉತ್ಸವವೂ ಅತ್ಯಂತ ಸುಂದರವಾಗಿರುತ್ತದೆ ಹಾಗೇ ಪುಣ್ಯಪ್ರದವೂ ಹೌದು! ಇವೇ ಅಲ್ಲದೇ ತಿರುಮಲೆಯ ಶ್ರೀ ಹರಿಯ ಸನ್ನಿಧಿಯಲ್ಲಿ ನೆರವೇರಿಸುವ ಕೈಶಿಕದ್ವಾದಶಿ ವಿಶೇಷವಾದುದಾಗಿದೆ. ಈ ಸಂದರ್ಭದಲ್ಲಿ ಶ್ರೀನಿವಾಸನ ಉತ್ಸವ ಮೂರ್ತಿಗಳಲ್ಲಿ ಒಂದಾದ ಉಗ್ರ ಶ್ರೀನಿವಾಸ ಮೂರ್ತಿಯನ್ನು ಸೂರ್ಯೋದಯಕ್ಕೂ ಮುನ್ನವೇ ತಿರುಮಲೆಯ ಸನ್ನಿಧಿಯ ಬೀದಿಗಳಲ್ಲಿ ಮೆರವಣಿಗೆ ಮಾಡಿಸಿ ಸ್ವಾಮಿಯ ಸನ್ನಿಧಿಯಲ್ಲಿ ಇರಿಸುವುದು ವಿಶೇಷವಾಗಿದೆ ಮತ್ತು ಶ್ರೀನಿವಾಸನ ಸನ್ನಿಧಿಯಲ್ಲಿ ಕಾರ್ತೀಕ ಹುಣ್ಣಿಮೆಯಂದು ನಡೆಸುವ ದೀಪೋತ್ಸವ, ಜ್ವಾಲಾತೋರಣಗಳು ಮುಕ್ತಿ ಪ್ರದಾಯವಾದುವು.

ಈ ತಿಂಗಳಿನಲ್ಲೇ ತಿರುಮಲೆ ತಿರುಪತಿ ದೇವಸ್ಥಾನದ ಆಲಯವಾದ ನಾರಾಯಣವನ, ಶ್ರೀಕಲ್ಯಾಣವೆಂಕಟೇಶ್ವರಾಲಯಗಳಲ್ಲಿ ನಡೆಯುವ ತೆಪ್ಪೋತ್ಸವ, ನಗರಿಯ ಶ್ರೀ ಕರಿಯಮಾಣಿಕ್ಯ ಸ್ವಾಮಿಯವರ ಪವಿತ್ರೋತ್ಸವ, ನಾಗಲಾಪುರದ ಶ್ರೀವೇದ ನಾರಾಯಣ ಸ್ವಾಮಿಯವರ ಪವಿತ್ರೋತ್ಸವ, ಶ್ರೀಪದ್ಮಾವತೀ ಅಮ್ಮನವರಿಗೇ ನಡೆಯುವ ಪುಷ್ಪಯಾಗದಂತಹ ಉತ್ಸವಗಳಲ್ಲಿ ಭಾಗಿಗಳಾಗೋಣ! ಜಗನ್ಮಾತಾಪಿತರಾದ ಶ್ರೀಶ್ರೀನಿವಾಸ ಪದ್ಮಾವತಿಯರ ಕೃಪೆಗೆ ಪಾತ್ರರಾಗೋಣ !!

“ಓಂ ನಮೋ ವೇಂಕಟೇಶಾಯ”

# ಅಂಗಳದ ಮಂಗಳೆಗೆ ಕಲ್ಯಾಣೋತ್ಸವ



– ಶ್ರೀಮತಿ ಎಸ್. ರೋಹಿಣಿ ಶರ್ಮಾ
94815 03218

ನಂಬಿಕೆಯ ಸಂಸ್ಕೃತಿ ನಮ್ಮದು. ದೇವರು, ಧರ್ಮ, ಪುಣ್ಯ ಇಹ-ಪರಗಳೆಂಬ ನಂಬಿಕೆಯ ತಳಹದಿಯ ಮೇಲೆ ರೂಪುಗೊಂಡ ಈ ಸಂಸ್ಕೃತಿಯಲ್ಲಿ ಪೂಜೆಗಳನ್ನು ಹಬ್ಬಗಳ ಮುಖಾಂತರ ಆಚರಿಸುತ್ತಾ ಬಂದಿದ್ದೇವೆ. ಆದ್ದರಿಂದಲೇ ನಮ್ಮ ದೇಶ ಹಬ್ಬಗಳ ತವರೂರು ಎಂದೇ ಪ್ರಸಿದ್ಧ. ಇದು ಜೀವನದಲ್ಲಿ ಹೊಸ ಭರವಸೆಗಳನ್ನು ಹುಟ್ಟು ಹಾಕುತ್ತಾ ಹೋಗುತ್ತದೆ. ಹಬ್ಬಗಳ ಸಾಲುಸಾಲೇ ಇರುವ ಕಾರ್ತಿಕ ಮಾಸವು ಸಂವತ್ಸರದ ಎಂಟನೇ ತಿಂಗಳಲ್ಲಿ ಬರುತ್ತದೆ. ಚಂದ್ರನು ಕೃತ್ತಿಕಾ ನಕ್ಷತ್ರದಲ್ಲಿರುವುದರಿಂದ ಈ ಮಾಸವನ್ನು ಕಾರ್ತಿಕ ಮಾಸವೆಂದು ಕರೆಯುತ್ತೇವೆ.

ದ್ವಾದಶ ಮೂರ್ತಿಗಳಲ್ಲಿ ಕೊನೆಯವನೇ ಕಾರ್ತೀಕ. ಈ ಮಾಸವು ಭಗವಾನ್ ಶಿವ ಮತ್ತು ವಿಷ್ಣು ದೇವರಿಗೆ ಸಂಬಂಧಪಟ್ಟಿದ್ದಾಗಿದೆ. ಶುಕ್ಲ ಪಾಡ್ಯದಿಂದ ದ್ವಾದಶಿಯ ತನಕ ಒಟ್ಟು ಹನ್ನೆರಡು ದಿನಗಳ ಕಾಲ ದ್ವಾದಶ ಮೂರ್ತಿಗಳ ಜೊತೆಗೆ ತುಳಸಿಯ ಸನ್ನಿಧಿಯಲ್ಲಿ ಲಕ್ಷ್ಮೀನಾರಾಯಣ ಮತ್ತು ವಿಷ್ಣುವಿನ ಪತ್ನಿ ತುಳಸಿಯನ್ನು ಪೂಜಿಸುತ್ತಾರೆ. ಕಾರ್ತೀಕ ಮಾಸವನ್ನು ಚಾತುರ್ಮಾಸ್ಯದ ಕೊನೆಯ ತಿಂಗಳು ಎಂದು ಪರಿಗಣಿಸಲಾಗಿದೆ. ಕಾರ್ತೀಕ ಸೋಮವಾರ ಶಿವಭಕ್ತರು ಉಪವಾಸ ವ್ರತಮಾಡುವವರೂ ಇದ್ದಾರೆ. **"ಉತ್ಥಾನ ದ್ವಾದಶಿ"** ಯಂದು ತುಳಸಿ ವಿವಾಹವನ್ನು ವಿಜೃಂಭಣೆಯಿಂದ ಮಾಡುವವರೂ ಇದ್ದಾರೆ. ಈ ಮಾಸದಲ್ಲಿ ಪ್ರತಿದಿನ ದೇವಸ್ಥಾನಗಳಲ್ಲಿ ದೀಪ ಬೆಳಗುವುದು ದಾನ ಕೊಡುವುದೇ ಮುಂತಾದ ಆಚರಣೆಗಳಿವೆ. ಉತ್ಥಾನ ದ್ವಾದಶಿ ಈ ಮಾಸದ ಬಹಳ ವಿಶೇಷ ದಿನವಾಗಿದೆ.

## ತುಳಸಿಯ ಹುಟ್ಟು – ಮಹಿಮೆ :

ಶ್ರೀ ತುಳಸಿ ಕೇವಲ ಒಂದು ಸಸ್ಯವಲ್ಲ. ಭಾರತೀಯರ ಆಧ್ಯಾತ್ಮಿಕ ವೈದ್ಯಕೀಯ ಚಿಂತನೆಗಳೊಂದಿಗೆ ತುಳಸಿಯನ್ನು ಕುರಿತಂತೆ ನಮ್ಮ ಪುರಾಣಗಳಲ್ಲಿ ಹಲವಾರು ಕಥೆಗಳು ಮತ್ತು ಮಾಹಿತಿಗಳಿವೆ. ಲ್ಯಾಮಿನೇಸಿ ಕುಟುಂಬಕ್ಕೆ ಸೇರಿದ ಈ ತುಳಸಿಯ ಸಸ್ಯ ಶಾಸ್ತ್ರದಲ್ಲಿ ಓಸಿಮಮ್ ಎಂದು ಗುರುತಿಸಲ್ಪಟ್ಟಿದೆ. ತುಳಸಿಯಲ್ಲಿ ಹಲವಾರು ಪ್ರಭೇದಗಳಿದ್ದರೂ ವಿಷ್ಣು ತುಳಸಿ, ಶ್ರೀಕೃಷ್ಣ ತುಳಸಿ, ಶ್ರೀ ತುಳಸಿ ಮುಖ್ಯವಾದದ್ದು.

ದೇವಾನುದೇವತೆಗಳು, ಋಷಿಮುನಿಗಳು ಸಂತರು ಯತಿಗಳು ಮನೆಯ ಗೃಹಿಣಿಯರು ಶುಚೀಭೂತರಾಗಿ ಪುಷ್ಪ-ಮಂಗಲ ದ್ರವ್ಯಗಳಿಂದ ಈ ತುಳಸಿಯನ್ನು ದೇವೀ ಸ್ವರೂಪಳೆಂದು ಆರಾಧಿಸುತ್ತಾರೆ. ತುಳಸಿಯಲ್ಲಿ ಅಡಿಯಿಂದ ಮುಡಿಯವರೆಗೂ ಸರ್ವ ದೇವತೆಗಳೂ ನೆಲಸಿದ್ದಾರೆ. ತುಳಸಿಗೆ ಸಮಾನರಾದವರು ಯಾರು ಇಲ್ಲ ಎಂಬ ವಿಶೇಷತೆಯಿಂದ ತುಲನೆ ಮಾಡಲು ಬಾರದ ತುಳಸಿ ಎಂದು ಗೌರವಕ್ಕೆ ಪಾತ್ರಳಾಗಿದ್ದಾಳೆ.







ಯನ್ಮೂಲೇ
ಸರ್ವತೀರ್ಥಾನಿ
ಯನ್ಮಧ್ಯೇ
ಸರ್ವದೇವತಾ।
ಯದಗ್ರೇ
ಸರ್ವವೇದಾಶ್ಚ
ತುಳಸಿ ತ್ವಾಂ ನಮಾಮ್ಯಹಮ್॥

ಮನೆಯ ಮುಂದೆ ತುಳಸಿಯನ್ನು ಕಟ್ಟೆಯಲ್ಲಿ ಬೆಳಸಿ ಬೃಂದಾವನವೆಂದು ಪ್ರತಿನಿತ್ಯ ಗೃಹಿಣಿಯರು ಭಕ್ತಿಯಿಂದ ನಮಸ್ಕರಿಸುತ್ತಾರೆ. ಈ ರೀತಿ ತುಳಸಿಯನ್ನು ನಿತ್ಯ ಪೂಜಿಸುವುದರಿಂದ ಆರೋಗ್ಯ. ಪರಿಸರ ಶುದ್ಧಿಯೊಂದಿಗೆ ಮಾನಸಿಕ ನೆಮ್ಮದಿಯೂ ಸಿಗುತ್ತದೆ.

**ತುಳಸಿ ಹುಟ್ಟು ಅಷ್ಟೇ ಆಕಸ್ಮಿಕ :**

ಜಲಂಧರನೆಂಬ ರಾಕ್ಷಸನ ಹೆಂಡತಿ ವೃಂದಾ. ಆಕೆ ವಿಷ್ಣುವಿನ ಪರಮಭಕ್ತೆ, ಮಹಾಪತಿವ್ರತೆ ಕೂಡ. ಜಲಂಧರನು ದೇವತೆಗಳಿಗೆ ಬಹಳ ಕಿರುಕುಳ ಕೊಡುತ್ತಿದ್ದ. ವೃಂದೆಯ ಪಾತಿವ್ರತ್ಯವು ಆತನಿಗೆ ವರವಾಗಿತು. ದೇವತೆಗಳು ವಿಷ್ಣುವಿಗೆ ಮೊರೆ ಹೋದಾಗ ಯುದ್ಧದಲ್ಲಿ ಜಲಂಧರನು ಮರಣ ಹೊಂದುತ್ತಾನೆ.

ವಿಷ್ಣು ಜಲಂಧರನ ವೇಷಧರಿಸಿ ವೃಂದೆಯ ಪಾತಿವ್ರತ್ಯಕ್ಕೆ ಭಂಗ ತರುತ್ತಾನೆ. ಇದರಿಂದ ನೊಂದ ವೃಂದೆ ಪತಿಯೊಂದಿಗೆ ಚಿತೆಯೇರಿ ಮರಣ ಹೊಂದಿ ಬೂದಿಯಾಗುತ್ತಾಳೆ. ಮುಂದೆ ಈ ವೃಂದೆ ತುಳಸಿಯಾಗಿ ಪಾರ್ವತಿದೇವಿ ಸೃಷ್ಟಿಸಿದ ಬೃಂದಾವನದಲ್ಲಿ ಹುಟ್ಟಿದಳಂತೆ. ಅನಂತರ ಅವಳು ರುಕ್ಮಿಣಿಯಾಗಿ ಜನ್ಮ ತಳೆದು ಕಾರ್ತೀಕ ಶುದ್ಧ ದ್ವಾದಶಿಯಂದು ಕೃಷ್ಣನನ್ನು ಮದುವೆ ಆದಳೆಂದು ಪ್ರತೀತಿಯಿದೆ.

ಸ್ಕಾಂದ ಪುರಾಣದಲ್ಲಿ ದೇವತೆಗಳು, ದಾನವರು ಕ್ಷೀರ ಸಾಗರವನ್ನು ಕಡೆದಾಗ ಕೊನೆಯಲ್ಲಿ ಅಮೃತ ಕಲಶ ಉದ್ಭವವಾಗುತ್ತದೆ. ಇದನ್ನು ಕೈಗೆತ್ತಿಕೊಂಡು ವಿಷ್ಣುವಿನ ಕಣ್ಣಲ್ಲಿ ಆನಂದಭಾಷ್ಪವೇ ಸುರಿಯಿತು. ಇದರ ಒಂದು ಹನಿ ಭೂಮಿಗೆ ಬಿದ್ದಾಗ ಅಲ್ಲೊಂದು ಗಿಡ ಹುಟ್ಟಿತು. ಅದೇ ತುಳಸಿ ಆಯಿತೆಂಬ ಸುಂದರ ಕಲ್ಪನೆ ಕೂಡ ಇದೆ. ಆ ತುಳಸಿಯೇ ವೃಂದಾ ಎನ್ನುವ ನಂಬಿಕೆಯಿದೆ.

**ಉತ್ಥಾನ ದ್ವಾದಶಿ :**

ಚಾತುರ್ಮಾಸ್ಯದಲ್ಲಿ ಮಲಗಿದ ಮಹಾವಿಷ್ಣುವು ನಿದ್ದೆಯಿಂದ ಏಳುವ ದಿನವೇ ಉತ್ಥಾನದ್ವಾದಶಿ ಇದನ್ನು ತುಳಸಿ ವಿವಾಹ, ಪ್ರಭೋದಿನಿ ಏಕಾದಶಿ ಎಂದೂ ಕರೆಯುತ್ತಾರೆ. ತುಳಸಿ ವಿವಾಹವು ಅತ್ಯಂತ ಸಾಂಪ್ರದಾಯಿಕ ಹಬ್ಬಗಳಲ್ಲಿ ಒಂದಾಗಿದೆ. ಈ ಹಬ್ಬವು ವೃಂದಾಳ ರೂಪವಾದ ತುಳಸಿಗೂ ವಿಷ್ಣುವಿನ ಸಾಲಗ್ರಾಮಕ್ಕೂ ವಿವಾಹ ನಡೆಯುತ್ತದೆ.

ತುಳಸಿ ವಿವಾಹವು ಕಾರ್ತಿಕ ಮಾಸದ ಶುಕ್ಲಪಕ್ಷದ ಹನ್ನೆರಡನೇ ದಿನ ಅಂದರೆ ದ್ವಾದಶಿಯಂದು ನಡೆಯುತ್ತದೆ. ಇಲ್ಲಿಂದ ಮುಂದೆ ವಿವಾಹಗಳು ನಡೆಯುತ್ತವೆ ಎಂಬ ಪ್ರತೀತಿಯಿದೆ. ಈ ದಿನದಂದು ತುಳಸಿ ಮುಂದೆ ಪೂಜೆ ಮಾಡುವುದರಿಂದ ವಿಷ್ಣು ಮತ್ತು ಲಕ್ಷ್ಮಿಯರ ಅನುಗ್ರಹವಾಗುತ್ತದೆ ಎಂದು ನಂಬಲಾಗಿದೆ. ಅಂದು ತುಳಸಿಕಟ್ಟೆಗೆ ಸಾಯಂಕಾಲ ಜಲಪ್ರೋಕ್ಷಣೆ ಮಾಡಿ, ರಂಗೋಲಿ ಹಾಕಿ ತಳಿರು ತೋರಣಗಳಿಂದ ಅಲಂಕರಿಸುತ್ತಾರೆ. ಲಕ್ಷ್ಮಿ, ಸರಸ್ವತಿ, ಪಾರ್ವತಿಯರ ಪ್ರತೀಕವಾಗಿ ನೆಲ್ಲಿ, ಅಗಸೆ, ಹುಣಸೆ ರೆಂಬೆಗಳನ್ನು ನೆಡುವರಲ್ಲದೆ ದೀಪ ಜ್ಞಾನದ ಸಂಕೇತವಾಗಿ ಮಣ್ಣಿನ ಹಣತೆಯಿಂದ ದೀಪ ಹಚ್ಚಿ,

ಕೋಸಂಬರಿ, ಅವಲಕ್ಕಿ, ರಸಾಯನ ನೈವೇದ್ಯ ಮಾಡು ತ್ತಾರೆ.

**ಓಂ ಶ್ರೀ ತುಳಸಿ ಶಿವಪ್ರಿಯಾ ಮಹಾಕೃಪಾ**
**ವಿಷ್ಣುಮಯಂ ಪ್ರಣಾಮ್ಯಹಂ ಹರಿಪಾದಂಚ ಬಂಧನಮ್॥**

ಎಂಬ ತುಳಸಿ ವಿವಾಹಮಂತ್ರದೊಂದಿಗೆ ಶ್ರೀವಿಷ್ಣು ಸಹಸ್ರನಾಮ. ಅಷ್ಟಾಕ್ಷರೀ ಮಂತ್ರ ಅಥವಾ ಓಂ ತುಳಸಿ ಕೃಷ್ಣ ವಾಸುದೇವಾಯ ನಮಃ ಎಂಬ ವಿಶೇಷವಾದ ಮಂತ್ರ ಗಳನ್ನು ಜಪಿಸುತ್ತಾರೆ.

ಪ್ರತಿಯೊಬ್ಬರ ಮನೆಯ ಮುಂದಿರುವ ತುಳಸಿ ವೃಂದಾವನವು ಆಯಾ ಮನೆಯ ಗೃಹಿಣಿಯರೊಂದಿಗೆ ಅನನ್ಯ ಬಾಂಧವ್ಯವಿದೆ. ತುಳಸಿ ದರ್ಶನ, ಸ್ಪರ್ಶನ, ವಂದನ ಮತ್ತು ಜಲಪ್ರೋಕ್ಷಣಾದಿಗಳಿಂದ ಪಾಪ ಪರಿಹಾರವೂ, ರೋಗನಿವಾರಕವೂ, ಆಯುರ್ ವೃದ್ಧಿಯೂ, ಸಂತಾನ ಭಾಗ್ಯವೂ, ಸುಖ ಸಮೃದ್ಧಿಯೂ ಲಭಿಸುತ್ತದೆ ಎಂದು ನಂಬ ಲಾಗಿದೆ.

ಆರವತ್ತೆಂಟು ವನೌಷಧಿಗಳಲ್ಲಿ ತುಳಸಿಗೆ ಮೊದಲ ಸ್ಥಾನ. ಸಾಲಿಗ್ರಾಮ ತೀರ್ಥಕ್ಕೆ ತುಳಸಿಯೇ ಪ್ರಧಾನ. ಹೆಣ್ಣು ಮಕ್ಕಳು ಮುಟ್ಟಾಗಿ ನಾಲ್ಕನೆಯ ದಿನ ಶುದ್ಧಾರಾಗಲು ತುಳಸಿ ತೀರ್ಥವನ್ನೇ ಸೇವಿಸುತ್ತಾರೆ. ಅಂತೆಯೇ ಬಾಣಂ ಮುಗಿಸು ವುದು ಕೂಡ ತುಳಸಿ ಮುಂದೆಯೇ ಸರಿ. ವಿವಾಹ ಸಮಯ ದಲ್ಲಿ ವಧು ತುಳಸಿ ಪೂಜೆ ಮಾಡಿದ ನಂತರವೇ ವಿವಾಹ ಮಂಟಪಕ್ಕೆ ಪ್ರವೇಶಿಸುವುದು. ಇಷ್ಟೇ ಅಲ್ಲ. ಇತ್ತೀಚೆಗೆ ಜನ ಜೀವನವನ್ನೇ ದಂಗುಬಡಿಸಿದ ಭೀಕರ ರೋಗ ಕರೋನಾ ಪೀಡಿತರೂ ಕೂಡ ತುಳಸಿ ಎಲೆಗಳನ್ನು ಸೇವಿಸುತ್ತಿದ್ದರು ಅಥವಾ ತುಳಸಿ ತೀರ್ಥವನ್ನು ಕುಡಿಯುತ್ತಿದ್ದರು. ಸಾಲಿ ಗ್ರಾಮದ ಮೇಲಿಟ್ಟ ತುಳಸಿದಳಗಳನ್ನು ಸೇವಿಸುವ ಸಾಕಷ್ಟು ಸನಾತನಿಗಳೂ ಇದ್ದಾರೆ.

ತುಳಸಿಯನ್ನು ಮನ ಬಂದಂತೆ ಕೊಯ್ಯಬಾರದು ಅಶುಚಿಯಾದ ಕೈಗಳಿಂದ ಸ್ಪರ್ಶಿಸಬಾರದು. ಸಾಯಂಕಾಲ ಕೀಳುವಂತಿಲ್ಲ. ತುಳಸಿ ಗಿಡಗಳನ್ನು ಮನೆಯ ಉತ್ತರ ಅಥವಾ ಈಶಾನ್ಯ ದಿಕ್ಕುಗಳಲ್ಲಿ ಬೆಳಸಿದರೆ ಶ್ರೇಷ್ಠ. ಮಾನವನ ಬದುಕಿನೊಂದಿಗೆ ಹಾಸು ಹೊಕ್ಕಿರುವ ಈ ತುಳಸಿಯ ಹಿರಿಮೆ-ಗರಿಮೆಗಳು ಅರಿತಷ್ಟೂ ಕಡಿಮೆ-ಬರೆದಷ್ಟೂ ಕಡಿಮೆ.





## ಲಕ್ಷ ಕುಂಕುಮಾರ್ಚನೆ

ಅಮ್ಮನವರಿಗೆ ಪ್ರತೀವರ್ಷವೂ ನಡೆಯುವ ವಾರ್ಷಿಕ ಬ್ರಹ್ಮೋತ್ಸವಕ್ಕೆ ಮೊದಲು ಅತ್ಯಂತ ವೈಭವದಿಂದ ಲಕ್ಷ ಕುಂಕುಮಾರ್ಚನೆ ನಡೆಯುತ್ತದೆ. ಶತಸಹಸ್ರನಾಮಗಳಿಂದ, ಅಷ್ಟೋತ್ತರ ಶತನಾಮಗಳಿಂದ, ವೇದಮಂತ್ರಗಳಿಂದ ಅರ್ಚ ಕರು ಪ್ರತೀ ಕುಂಕುಮದ ಬಿಂದುವಿನಲ್ಲಿ ಅಮ್ಮನವರ ಪ್ರಾಶಸ್ತ್ಯ ವನ್ನು ತಿಳಿಯ ಪಡಿಸುತ್ತಾ ನಡೆಸುವಂತಹಾ ವೈಭವದ ಆಚರಣೆ ಇದಾಗಿದೆ. ಸ್ತ್ರೀಯರ ಸೌಭಾಗ್ಯದ ಚಿಹ್ನೆ ಕುಂಕುಮ ವೆಂದು ಪ್ರತ್ಯೇಕವಾಗಿ ಹೇಳಬೇಕಾಗಿಲ್ಲ. ಅಂತಹಾ ಪರಮ ಪವಿತ್ರವಾದ ಸೌಭಾಗ್ಯವನ್ನು ಅಮ್ಮನವರಿಗೆ ಅರ್ಪಿಸಿ,ಆ ತಾಯಿ ಪ್ರತಿ ಘಳಿಗೆಯಲ್ಲೂ ಪ್ರಶಾಂತವಾಗಿ ಇದ್ದರೆ, ಬ್ರಹ್ಮೋತ್ಸ ವಗಳು ನಿರ್ವಿಘ್ನವಾಗಿ,ಆನಂದದಾಯಕವಾಗಿ ನೆರವೇರು ತ್ತದೆಂದು ಹಿರಿಯರ ನಂಬಿಕೆ. ಇದರಲ್ಲೂ ಅನೇಕ ಭಕ್ತರು ಪಾಲ್ಗೊಂಡು ತಮ್ಮ ಸೌಭಾಗ್ಯವನ್ನು ಕಾಪಾಡಬೇಕೆಂದು ಆ ತಾಯಿಯನ್ನು ಬೇಡಿಕೊಂಡು ಕಟಾಕ್ಷ ಸಿದ್ಧಿಯನ್ನು ಪಡೆಯು ತ್ತಾರೆ.

# ವ್ಯೂಹ ಲಕ್ಷ್ಮೀ



**ಶ್ರೀಮತಿ ಕೆ.ವಿ. ಪದ್ಮಾವತಿ**
**97437 22327**

ಮಹಾಲಕ್ಷ್ಮಿಯ ಅಷ್ಟ ರೂಪಗಳಾದ ಧನಲಕ್ಷ್ಮಿ, ಧಾನ್ಯ ಲಕ್ಷ್ಮಿ, ವಿಜಯಲಕ್ಷ್ಮಿ, ಸಂತಾನ ಲಕ್ಷ್ಮೀ, ಶ್ರೀಲಕ್ಷ್ಮಿ,ಜಯಲಕ್ಷ್ಮೀ, ಮಹಾ ಲಕ್ಷ್ಮೀ, ಭಾಗ್ಯಲಕ್ಷ್ಮೀ ಹೀಗೆ ಲಕ್ಷ್ಮಿಯ ಎಂಟು ರೂಪಗಳ ಹೆಸರನ್ನು ಕೇಳಿದ್ದೇವೆ. ಹಾಗಾದರೆ ವ್ಯೂಹಲಕ್ಷ್ಮೀ ಯಾರು? ಇವಳ ಶಕ್ತಿ ಏನು? ಇವುಗಳನ್ನು ತಿಳಿಯಲು, ಭೂ ವೈಕುಂಠಕ್ಷೇತ್ರಕ್ಕೆ ಹೋಗಬೇಕು. ಕಲಿಯುಗದ ಭೂವೈಕುಂಠ ಎಂದರೆ ತಿರುಪತಿಯ ವರಹಸ್ವಾಮಿ ಸನ್ನಿಧಿಗೆ ಹೋಗಿ ಸ್ವಾಮಿಯ ದರ್ಶನ ಮಾಡಿದವರಿಗೆಲ್ಲಾ ವ್ಯೂಹ ಲಕ್ಷ್ಮಿಯ ಕರುಣೆ ಮತ್ತು ಅಪಾರ ಅನುಗ್ರಹ ದೊರೆಯುತ್ತದೆ. ಮನುಷ್ಯನಿಗೆ ಬರುವ ಎಲ್ಲಾ ಕಷ್ಟ ಕಾರ್ಪಣ್ಯಗಳ ನಿವಾರಣೆ ಮಾಡುವ ದೇವರು ಎಂದರೆ ತಿರುಪತಿ ವೆಂಕಟೇಶ್ವರ-ಶ್ರೀನಿವಾಸ-ತಿಮ್ಮಪ್ಪ ಎಂದು ಭಕ್ತರ ಮನದಲ್ಲಿ ನೆಲೆಯೂರಿದೆ ಹಲವಾರು ನಾಮಗಳ ಪುಣ್ಯಕ್ಷೇತ್ರ ತಿರುಪತಿ. ಶ್ರೀಸಾಮಾನ್ಯರ ಜೀವನದಲ್ಲಿ ಬರುವ ವಿವಾಹ ಸಂತಾನ ಮನೆ ಸಂಪತ್ತು ಹಣಕಾಸು ಆರೋಗ್ಯ ಜಮೀನು ಅಧಿಕಾರ ಇನ್ನೂ ಹಲವು ಬೇಡಿಕೆಗಳಲ್ಲಿ ಇಂಥದೊಂದು ಬೇಕೆಂದು ಸಂಕಲ್ಪ ಮಾಡಿ, ವಿಘ್ನಗಳು ಬರದಂತೆ ನಿರ್ವಿಘ್ನವಾಗಿ ನಡೆಸಿಕೊಡು ತಂದೆ ಶ್ರೀಹರಿ ಎಂದು ಪ್ರಾರ್ಥಿಸಿದರೆ ತಿಮ್ಮಪ್ಪ ಪೂರೈಸಿದ ಉದಾಹರಣೆಗಳೂ ಎಷ್ಟೋ ಇವೆ.

ಒಮ್ಮೆ ಕ್ಷೇತ್ರಕ್ಕೆ ಹೋಗಿ ತಿಮ್ಮಪ್ಪನ ದರ್ಶನ ಮಾಡಿ ಬಂದರೆ ಬೆಟ್ಟದಂಥ ಕಷ್ಟವು ಮಂಜಿನಂತೆ ಕರಗುತ್ತದೆ ಎಂದು ನಂಬಿ ನಡುವೆ ಭಕ್ತಮಹಾಶಯರ ದೃಢ ವಿಶ್ವಾಸವಾಗಿದೆ. ಭಕ್ತರು ಪ್ರಾರ್ಥಿಸಿದ ಪ್ರಾಥನೆ ಅಥವಾ ಬೇಡಿಕೆಯನ್ನು ಅಲೈಸಿ ಅದನ್ನು ಮೊಟ್ಟ ಮೊದಲು ಶ್ರೀನಿವಾಸನಿಗೆ ಕಿವಿಯಲ್ಲಿ ಹೇಳಿ ತಿಳಿಸುವುದು ಯಾರೆಂದರೆ ಅವಳೇ **"ವ್ಯೂಹಲಕ್ಷ್ಮಿ"**.

ಇವಳು ಶ್ರೀಕಾಂತನ ಶ್ರೀರಮಣನ ಪತ್ನಿ ಮಹಾಲಕ್ಷ್ಮಿ ಎಲ್ಲರ ಮೇಲೂ ಈ ತಾಯಿಯ ಕೃಪಾಕಟಾಕ್ಷ ಇರುತ್ತದೆ. ಈ ವ್ಯೂಹಲಕ್ಷ್ಮಿ ಎಲ್ಲಿಂದ ಬಂದಳು ಎಂದರೆ, ಹಿಂದೆ ಭೃಗು ಮಹರ್ಷಿಗಳು ತಮ್ಮ ಕಾಲಿನಿಂದ ಶ್ರೀ ಹರಿಯ ಎದೆಗೆ ಒದ್ದರು ಎಂಬ ಕಾರಣದಿಂದ ಸಿಟ್ಟುಗೊಂಡು ಧರೆಗಿಳಿದ ಶ್ರೀಲಕ್ಷ್ಮೀಯು ಕೊಲ್ಲಾಪುರದಲ್ಲಿ ನೆಲೆಸಿದಳು. ದೇವಶಿಲ್ಪಿ ವಿಶ್ವಕರ್ಮ ಮಣಿ ದ್ವೀಪ ಮಾದರಿಯಲ್ಲಿ ಲಕ್ಷ್ಮಿಗೆ ಸುಂದರವಾದ ದೇವಾಲಯವನ್ನು ನಿರ್ಮಿಸಿಕೊಟ್ಟನು. ಮಹಾಲಕ್ಷ್ಮಿ ಕೋಲಾಸುರನನ್ನು ಸಂಹರಿಸಿ ಕೊಲ್ಲಾಪುರದಲ್ಲಿ ಮಹಾಲಕ್ಷ್ಮಿಯಾಗಿ ನೆಲೆಸಿದಳು ಆದರೆ **"ವ್ಯೂಹಲಕ್ಷ್ಮೀ"** ಎಲ್ಲಿಂದ ಬಂದಳು? ಇದು ನಡೆದ ಕೆಲವು ದಿನಗಳಲ್ಲಿ ವೈಕುಂಠದಲ್ಲಿದ್ದ ವಿಷ್ಣು ಮಾನವ ಶರೀರ ಧಾರಿಯಾಗಿ ಧರೆಗಿಳಿದನು. ಭೂಮಿಗಿಳಿದ ದಿನ ಅವನ ಹೆಸರು **"ಶ್ರೀನಿವಾಸ"** ಎಂದಾಯಿತು. ಹಿಂದಿನ ನೆನಪುಗಳು ಮರೆತು ಹೋಗಿತ್ತು.

ತ್ರೇತಾಯುಗದಲ್ಲಿದ್ದ ವೇದವತಿ ಮಹಾವಿಷ್ಣುವನ್ನೇ ತನ್ನ ಪತಿಯಾಗಿ ಪಡೆಯಬೇಕೆಂಬ ಇಚ್ಛೆಯಿಂದ ಬಹಳ ಕಾಲ ತಪಸ್ಸು ಮಾಡಿದ್ದಳು. ತಪಸ್ಸಿನ ಫಲವಾಗಿ ಭೂ ಲೋಕದಲ್ಲಿ ಪದ್ಮಸರೋವರದ ಕಮಲದ ಹೂವಿನ ಮೇಲೆ ಅವತರಿಸಿದ ಮಗು. ಮಕ್ಕಳಿಗಾಗಿ ಪ್ರಾರ್ಥಿಸಿದ್ದ ಆಕಾಶರಾಜನಿಗೆ ದೊರೆತಳು. ಪದ್ಮಸರೋವರದಲ್ಲಿ ಸಿಕ್ಕ ಮಗುವಿಗೆ ಪದ್ಮಾವತಿ ಎಂದು ಹೆಸರಿಟ್ಟನು. ಭೂಲೋಕದಲ್ಲಿ ಅವತರಿಸಿದ ಶ್ರೀನಿವಾಸನು ಪದ್ಮಾವತಿಯನ್ನು ವಿವಾಹವಾಗಿ ತನ್ನ ಅವತಾರದ ಉದ್ದೇಶದ ಅರ್ಧ ಕೆಲಸ ಪೂರ್ಣ ಮಾಡಿದನು.

ಇನ್ನು ತನ್ನ ಹೃದಯ ಕಮಲನಿವಾಸಿನಿ ಶ್ರೀಲಕ್ಷ್ಮೀಯನ್ನು ಹುಡುಕಿಕೊಂಡು ಹೊರಟಾಗ ಲಕ್ಷ್ಮೀಕೊಲ್ಲಾಪುರದಲ್ಲಿ ನೆಲೆಸಿದ್ದಾಳೆ ಎಂದು ತಿಳಿದು ಅಲ್ಲಿಗೆ ಬಂದನು. ಲಕ್ಷ್ಮಿಗಾಗಿ ಹುಡುಕುತ್ತಿದ್ದ ಅವನಿಗೆ ಕೊಲ್ಲಾಪುರದಲ್ಲಿ ಸಕಲ ತೀರ್ಥ ಸರೋವರ-ನದಿಗಳು ಋಷಿಮುನಿಗಳು ಕಂಡರೂ ಲಕ್ಷ್ಮೀ ಮಾತ್ರ ಕಾಣ ಸಿಗಲಿಲ್ಲ. ಕಾರಣ ಅಲ್ಲಿ ನೆಲೆಸಿದ್ದ ಮಹಾಲಕ್ಷ್ಮಿ ಶಾಂತರೂಪ ಲಕ್ಷ್ಮಿ ಆಗಿರಲಿಲ್ಲ. ಭೃಗುಮಹರ್ಷಿಗಳ ಕಾರಣಕ್ಕೆ ಬಂದ ಕೋಪ ಮತ್ತು ಕೊಲ್ಲಾಪುರಕ್ಕೆ ಬಂದು ರಾಕ್ಷಸನನ್ನು ಸಂಹಾರ ಮಾಡಿ ರಜೋಗುಣದವಳಾಗಿ ರೌದ್ರ ಸ್ವರೂಪದಲ್ಲಿದ್ದಳು. ಇದ್ದರಿಂದ ಶ್ರೀನಿವಾಸನಿಗೆ ಲಕ್ಷ್ಮಿ ಸಿಗಲಿಲ್ಲ. ಶ್ರೀನಿವಾಸನು ಲಕ್ಷ್ಮಿಯನ್ನು ಒಲಿಸಿ ಕೊಳ್ಳಲು ಅಲ್ಲಿಯೇ ಬಹಳ ಕಾಲ ತಪಸ್ಸಿನಲ್ಲಿ ಕಳೆದನು. ಆದರೂ ದರ್ಶನ ಸಿಗಲಿಲ್ಲ.

ಆಗ ಆಕಾಶವಾಣಿ ಕೇಳಿಸಿತು. ಇಲ್ಲಿ ಕುಳಿತರೆ ಮಾತೆ ಸಿಗುವುದಿಲ್ಲ ಬೆಟ್ಟಕ್ಕೆ ಹೋಗಿ ಕುಳಿತು ತಪಸ್ಸು ಮಾಡು ಎಂಬ ವಾಣಿ ಕೇಳಿಸಿತು. ಬೆಟ್ಟದತ್ತ ಹೊರಟ ಶ್ರೀನಿವಾಸ ಶುಕ ಮಹರ್ಷಿಗಳ ಆಶ್ರಮಕ್ಕೆ ಬಂದನು. ಅವರ ಆದೇಶದಂತೆ ಆಶ್ರಮದ ಸಮೀಪಕ್ಕೆ ದೊಡ್ಡ ಸರೋವರ ತೋಡಿ ಅದರಲ್ಲಿ ದೇವ ಲೋಕದಿಂದ ತಂದ ಸಾವಿರಾರು ಕಮಲದ ಪುಷ್ಪವನ್ನು ತಂದು ಇಟ್ಟು ಅದು 12 ವರ್ಷಗಳ ಕಾಲ ಬಾಡದಂತೆ ಕಾಪಾಡಲು ಸೂರ್ಯನನ್ನು ಪ್ರಾರ್ಥಿಸಿ ಸೂರ್ಯನ ಕಿರಣ ಬೀಳದಂತೆ ಮಾಡಿ ತಪಸ್ಸು ಮಾಡಲು ಕುಳಿತನು. 12 ವರ್ಷಗಳ

ಕಾಲ ಕಠಿಣ ತಪಸ್ಸು ಮಾಡಿದನು. ಅದೇ ಸಮಯಕ್ಕೆ ಭೃಗು ಮಹರ್ಷಿಗಳು ಬಂದು ದೇವಿಯಲ್ಲಿ ಕ್ಷಮೆ ಬೇಡಿದರು. ಲಕ್ಷ್ಮಿ ಅವರೆಲ್ಲರ ಕರೆಗೆ ಕರಗಿ ಕಾರ್ತಿಕ ಶುದ್ಧ ಪಂಚಮಿ ದಿನ ಶುದ್ಧ ಸತ್ವ ಸ್ವರೂಪದಲ್ಲಿ ಸರೋವರದಲ್ಲಿನ ಕಮಲ ಪುಷ್ಪದ ಮೇಲೆ ಆವಿರ್ಭವಿಸಿದಳು.

ಮಾತೆಯ ದರ್ಶನ ಪಡೆದ ದೇವಾನುದೇವತೆಗಳು ಹರ್ಷಗೊಂಡರು. ಶುಕಮಹರ್ಷಿಗಳು ದೇವಿಯನ್ನು ಪ್ರಾರ್ಥಿಸಿ, ತಾಯಿ ಈ ಆಶ್ರಮದಲ್ಲೇ ನೆಲೆ ನಿಲ್ಲು ಎಂದು ವಿನಂತಿಸಿದರು. ಲಕ್ಷ್ಮಿ ಒಪ್ಪಿ ಅಲ್ಲಿ ನೆಲೆಸಿದಳು. ಪದ್ಮದಲ್ಲಿ ನೆಲೆಸಿದ್ದರಿಂದ ಅವಳ ಹೆಸರು ಅಲಮೇಲ್‌ಮಂಗಾದೇವಿ ಎಂದಾಯಿತು. ಕಮಲ ಅಂದರೆ ಪದ್ಮ-ಮೇಲ್ ಅಂದರೆ ಪದ್ಮದ ಮೇಲೆ ಮಂಗ್ ಅಂದರೆ ದೇವಿ ಶುಕಪುರದಲ್ಲಿ ಆವಿರ್ಭಸಿದ ಕಾರಣ ಶುಕಪುರ ಎಂಬ ಹೆಸರಿನ ಬದಲು ಅಲರ್ ಮೇಲ್ ಮಂಗಾಪುರ ಎಂದಾಯಿತು. ವೈಕುಂಠದಿಂದ ಬಂದ ಸಿರಿದೇವಿಯು ಶುದ್ಧ ಸತ್ವ ಸ್ವರೂಪದಲ್ಲಿ ಆವಿರ್ಭವಿಸಿ ವೀರ ಲಕ್ಷ್ಮಿ ಎನಿಸಿ ಸ್ವತಂತ್ರಳಾಗಿ ನೆಲೆಸಿದಳು.

ಇದಕ್ಕೆಲ್ಲ ಕಾರಣ ದೇವಿಗೆ ಶ್ರೀಹರಿಯಿಂದ ದೂರ ಇರಲು ಆಗಲಿಲ್ಲ. ಅಂದು ಕೋಪದಿಂದ ವೈಕುಂಠ ಬಿಟ್ಟು ಭೂಲೋಕಕ್ಕೆ ಬರುವ ಮುನ್ನ, ಭೃಗುಮಹರ್ಷಿಗಳು ಇದ್ದಂತೆ ಶ್ರೀಹರಿಗೆ ನಾನು ಇಲ್ಲಿ ಇರುವುದಿಲ್ಲ ಎಂದು ಶ್ರೀಹರಿಯನ್ನು ಬಿಟ್ಟು ಹೋಗುವಾಗ ಇನ್ನು ಈ ರೂಪದಲ್ಲಿ ನಾನು ಬರುವುದಿಲ್ಲ ಬರುವುದಾದರೆ ಶುದ್ಧ ಸತ್ವ ಸ್ವರೂಪದಲ್ಲಿ ಬರುವೆ ಎಂದು ಶಪತ ಮಾಡಿ ಧರೆಗಿಳಿದಳು. ಅದೇ ರೀತಿ ಶುದ್ಧ ಸತ್ವ ಶಕ್ತಿ ರೂಪದಲ್ಲಿ ಬಂದು ವ್ಯೂಹಲಕ್ಷ್ಮಿಯಾಗಿ ತನ್ನ ಸ್ವಾಮಿಯ ವಕ್ಷಸ್ಥಳದಲ್ಲಿ ನೆಲೆಸಿದಳು.

ಈಗಾಗಲೇ ಶ್ರೀನಿವಾಸ ಮದುವೆಯಾಗಿ ಪತ್ನಿಯನ್ನು ಅಲ್ಲೇ ಬಿಟ್ಟು ಬಂದಿದ್ದ ಪದ್ಮಾವತಿ ಕಠಿಣ ತಪಸ್ಸು ಮಾಡುತ್ತಾ ಬಹಳ ಕಾಲ ಕಳೆದಿತ್ತು.

ಈಗ ಅವಳಿದ್ದಲ್ಲಿಗೆ ಶ್ರೀ ಲಕ್ಷ್ಮಿ ಸಹಿತ ನಾರಾಯಣ ಅಲ್ಲಿಗೆ ಬಂದುದನ್ನು ಕಂಡು ಆಕಾಶರಾಜನ ಮಗಳು ಪದ್ಮಾವತಿ ಕೋಪಗೊಂಡಳು. ಶ್ರೀನಿವಾಸನು ಅವನ ಹಿಂದಿನ ಜನ್ಮದ (ವೇದವತಿ) ಸ್ಮರಣೆಯನ್ನು ನೆನಪಿಗೆ ತಂದನು. ನಿಜವನ್ನು ತಿಳಿದ ಆಕೆ ಶಾಂತಳಾದಳು. ನಂತರ ಶ್ರೀಹರಿಯು ಪದ್ಮಾವತಿಗೆ ಭೂತಕಾರುಣ್ಯ ಸ್ವರೂಪವನ್ನು ಕೊಟ್ಟನು ಏಕೆಂದರೆ ತ್ರೇತಾಯುಗದಲ್ಲಿ ಸೀತಾಮಾತೆಯ ಜಾಗದಲ್ಲಿ ವೇದವತಿ ಇದ್ದು ಎಲ್ಲಾ ಕಷ್ಟಗಳನ್ನು ಸಹಿಸಿದ್ದಳು. ಅವಳ ಅಪೇಕ್ಷೆಯಂತೆ ಶ್ರೀಹರಿ ಮದುವೆಯಾದ ಪದ್ಮಾವತಿಯನ್ನು ಭೂತಕಾಲದ ಕಾರುಣ್ಯ ರೂಪದಲ್ಲಿ ತನ್ನ ವಕ್ಷಸ್ಥಳದಲ್ಲಿ ಸೇರಿಸಿಕೊಂಡನು.

ತಿರುಚಾನೂರಿನ ಪದ್ಮಸರೋವರದಲ್ಲಿ ಶುದ್ಧಸತ್ವ ಸ್ವರೂಪದಿಂದ ಶಕ್ತಿ ಸ್ವರೂಪಿಣಿಯಾಗಿ ಉದ್ಭವಿಸಿದ ಲಕ್ಷ್ಮಿಯು ಸ್ವಾಮಿಯ ವಕ್ಷಸ್ಥಳ ಸೇರುವ ಮೊದಲು ಸ್ವಾಮಿಯಿಂದ ಮಾತು ತೆಗೆದು ಕೊಂಡಳು.

ಸ್ವಾಮಿ ನಾನು ಈ ಕ್ಷೇತ್ರದಲ್ಲಿ ನಿಮಗಿಂತ ಮುಂದೆ ಕಾಣುವಂತೆ ನಿಮ್ಮ ವಕ್ಷಸ್ಥಳದಲ್ಲಿ ಗುಪ್ತವಾಗಿ ನೆಲೆಸುತ್ತೇನೆ. ನಿಮ್ಮನ್ನು ಪ್ರಾರ್ಥಿಸಿ ಬರುವ ಭಕ್ತರ ಕಷ್ಟ ಕಾರ್ಪಣ್ಯಗಳನ್ನು ನಾನು ಮೊದಲು ಕೇಳಿಸಿಕೊಂಡು ನಂತರ ನಿಮಗೆ ತಿಳಿಸುತ್ತೇನೆ ಎಂದು ಒಪ್ಪಿಗೆ ಪಡೆದು ಶ್ರೀನಿವಾಸನ ವಕ್ಷಸ್ಥಳದಲ್ಲಿ ಗುಪ್ತವಾಗಿ ಸೇರಿ ವ್ಯೂಹಲಕ್ಷ್ಮಿಯಾದಳು.



ಪುಣ್ಯ ಕ್ಷೇತ್ರಕ್ಕೆ ಬರುವ ಭಕ್ತರ ಕಷ್ಟಗಳನ್ನು ಮೊದಲು ತಾನು ಆಲಿಸಲು ಶ್ರೀನಿವಾಸನಿಗಿಂತ ಮುಂದೆ ನಿಂತು ಭಕ್ತರ ಬೇಡಿಕೆಗಳನ್ನು ಕೇಳಿ ನಂತರ ಶ್ರೀನಿವಾಸನಿಗೆ ತಿಳಿಸುತ್ತಾಳೆ. ಭಕ್ತರ ಕಷ್ಟಗಳನ್ನು ಆಲಿಸುತ್ತಿದ್ದಂತೆ ಆ ಭಕ್ತರಿಗೆ ವ್ಯೂಹಲಕ್ಷ್ಮಿ ಒಲಿದಿರುತ್ತಾಳೆ ವೆಂಕಟೇಶ್ವರ ಸ್ವಾಮಿಯ ವಿಗ್ರಹವನ್ನು ಎಲ್ಲಿಯೇ ನೋಡಲಿ ಆತನ ಎದೆ ಭಾವ ಮುಂದೆ ಬಂದಿರುತ್ತದೆ. ಅಲಂಕಾರವನ್ನು ಹಾಗೆ ಮಾಡಿರುತ್ತಾರೆ. ಶ್ರೀನಿವಾಸನ ವಕ್ಷಸ್ಥಳ ಉಬ್ಬಿದಂತೆ ಕಾಣಲು ಅಲ್ಲಿ ಶ್ರೀದೇವಿಯು ಶ್ರೀನಿವಾಸನಿಗಿಂತ ಮೊದಲೇ ಭಕ್ತರ ಕಷ್ಟ ಆಲಿಸಲು ''ವ್ಯೂಹಲಕ್ಷ್ಮಿ'' ಯಾಗಿ ನೆಲೆಸಿದ್ದಾಳೆ.



# ಹೆಜ್ಜೆಯ ಮೇಲೆ ಹೆಜ್ಜೆಯನ್ನಿಕ್ಕುತ್ತಾ ಬಾರಮ್ಮ ಲಕ್ಷ್ಮೀ ಬಾರಮ್ಮ

ಪುರಂದರದಾಸರು ತಮ್ಮ ಲಕ್ಷ್ಮೀ ದೇವಿಯ ಕುರಿತಾದ ದೇವರನಾಮ ಭಾಗ್ಯದ ಲಕ್ಷ್ಮಿ ಬಾರಮ್ಮ ಕೃತಿಯಲ್ಲಿ,

**ಹೆಜ್ಜೆಯ ಮೇಲೆ ಹೆಜ್ಜೆಯನಿಕ್ಕುತ**
**ಗೆಜ್ಜೆಕಾಲ್ಗಳ ಧ್ವನಿಯ ತೋರುತ**
**ಸಜ್ಜನ ಸಾಧು ಪೂಜೆಯ ವೇಳೆಗೆ**
**ಮಜ್ಜಿಗೆಯೊಳಗಿನ ಬೆಣ್ಣೆಯಂತೆ**

ಎಂದಿದ್ದಾರೆ. ಇಲ್ಲಿ ಒಂದು ಪ್ರಶ್ನೆ ಬರುತ್ತದೆ. **"ಹೆಜ್ಜೆಯ ಮೇಲೆ ಹೆಜ್ಜೆಯನ್ನು ಇಟ್ಟರೆ"** ಮುಂದೆ ಹೋಗುವುದು ಹೇಗೆ? ಲಕ್ಷ್ಮೀದೇವಿ ತನ್ನ ಹೆಜ್ಜೆಯ ಮೇಲೆ ಹೆಜ್ಜೆಯ ಇಡು ವುದಿಲ್ಲ. ಬದಲಾಗಿ ಪರಮಾತ್ಮನ ಅನುಸರಿಸಿ ಅವನು ಹೆಜ್ಜೆಯನು ಇಟ್ಟ ಕಡೆ ತನ್ನ ಹೆಜ್ಜೆಯನ್ನು ಇಟ್ಟು ಬರುತ್ತಾಳೆ. ಅರ್ಥಾತ್ ತಾನು ಬರಬೇಕಾದರೆ ಪರಮಾತ್ಮನ ಅನುಸರಿಸಿಯೇ ಬರುತ್ತಾಳೆ.

ನಾವು ಲಕ್ಷ್ಮೀದೇವಿಯ ಪೂಜಿಸುವಾಗ ಅವಳೊಬ್ಬಳ ಪೂಜಿಸದೆ ಪರಮಾತ್ಮನ ಸಹಿತವಾಗಿ ಪೂಜಿಸಬೇಕು. ಅವಳೊಬ್ಬಳನ್ನೇ ಪೂಜಿಸಬಾರದು.

ಬ್ರಹ್ಮವೈವರ್ತ ಪುರಾಣ ರೀತ್ಯ ಲಕ್ಷ್ಮೀದೇವಿ ಹೇಳುತ್ತಾಳೆ. ಯಾರು ಗುರುಗಳನ್ನು ತಂದೆತಾಯಿಯನ್ನು ಗೌರವದಿಂದ ಪೂಜಿಸುವುದಿಲ್ಲವೋ, ಪಿತೃದೇವತೆಗಳ ಅನುಗ್ರಹ ಪಡೆದಿಲ್ಲವೋ ಅವರ ಮನೆಗೆ ನಾನು ಬರುವುದಿಲ್ಲ. ಸುಳ್ಳು ಹೇಳುವವರು, ಸುಳ್ಳು ಸಾಕ್ಷಿ ಹೇಳುವವರು, ಸತ್ಕಾರ್ಯ ದೀಕ್ಷೆ ಇರುವುದಿಲ್ಲವೋ ಕನ್ಯೆಯನ್ನೂ ಅನ್ನವನ್ನೂ, ವೇದವನ್ನೂ ಮಾರಟ ಮಾಡಿ ಹಣ ಸಂಪಾದಿಸುವವರ ಮನೆಯಲ್ಲಿ ಲಕ್ಷ್ಮೀ ಬರುವುದಿಲ್ಲ.

ಮೂತ್ರ ವಿಸರ್ಜನೆ, ಮಲವಿಸರ್ಜನೆ ನಂತರ ಕೈಕಾಲು ತೊಳೆದುಕೊಳ್ಳದವರು ವಿವಾಹ ಮತ್ತು ಧರ್ಮಕಾರ್ಯಗಳನ್ನು ನಿಲ್ಲಿಸುವವರು ಅಲ್ಲಿಯೂ ಲಕ್ಷ್ಮೀ ನಿಲ್ಲುವುದಿಲ್ಲ. ಲಕ್ಷ್ಮೀದೇವಿಯು ಶ್ರೀ ಮನ್ನಾರಾಯಣನ ಅವತಾರ ಕಾಲದಲ್ಲಿ ತಾನೂ ಅವತಾರ ಮಾಡುತ್ತಾಳೆ.

ಲಕ್ಷ್ಮೀದೇವಿಯು ಸಮುದ್ರರಾಜನ ಪುತ್ರಿಯಾಗಿ ದೇವದಾನವರ ಸಮುದ್ರ ಮಥನ ಕಾಲದಲ್ಲಿ ಆವಿರ್ಭವಿಸಿದಳು ಮತ್ತು ಶ್ರೀಹರಿಯನ್ನು ವಿವಾಹವಾದಳು.

ಶ್ರೀ ಹರಿ ರಾಮಚಂದ್ರನಾದಾಗ ಜನಕ ರಾಜನ ಕುವರಿಯಾಗಿ ಸೀತಾಮಾತೆಯಾದವಳು ಕೃಷ್ಣಾವತಾರ ಕಾಲದಲ್ಲಿ ತನ್ನ ಶ್ರೀ ಭೂ ರೂಪದಿಂದ ರುಕ್ಮಿಣಿ ಸತ್ಯಭಾಮಳಾಗಿಯೂ, ಕೃಷ್ಣಪರಮಾತ್ಮನ ಮುಂದುವರಿದ ರೂಪವಾದ ಶ್ರೀನಿವಾಸನಾದಾಗ ಪದ್ಮಾವತಿಯಾಗಿಯೂ, ವರಾಹನಾಗಿದಾಗ ಭೂದೇವಿಯಾಗಿಯೂ ಪೃಥು ಮಹಾರಾಜನಾದಾಗ ಜಯಂತಿ ಎಂಬ ಹೆಸರಿನಿಂದಲೂ ಅವತರಿಸಿದ್ದಳು.

ಓಂ ನಮೋ ವೆಂಕಟೇಶಾಯನಮಃ

ತಿರುಮಲ ತಿರುಪತಿ ದೇವಸ್ಥಾನಗಳು,ತಿರುಪತಿ

# ಆಲಯ ದರ್ಶನ - ಪ್ಯಾಕೇಜ್ ಟೂರ್



ಆಂಧ್ರಪ್ರದೇಶ ಪ್ರವಾಸಾಭಿವೃದ್ಧಿ ಸಂಸ್ಥೆ, ಆಂಧ್ರಪ್ರದೇಶ ಸರ್ಕಾರ

## 1. ತಿರುಪತಿ ಸ್ಥಳೀಯ ಆಲಯ ಸಂದರ್ಶನ : (ಪ್ರತಿದಿನ)

(ಸಮಯ : ಬೆ: 6.00 ಗಂಟೆಯಿಂದ ಮ: 2.00 ಗಂಟೆಯವರೆಗೆ)

| ಶುಲ್ಕ | ಬಸ್ಸು ಆರಂಭವಾಗುವ ಸ್ಥಳ |
|---|---|
| ನಾನ್ ಎ.ಸಿ.ರೂ. 200/- | ಶ್ರೀನಿವಾಸಂ ಕಾಂಪ್ಲೆಕ್ಸ್ ಹಾಗೂ ವಿಷ್ಣುನಿವಾಸಂ, ತಿರುಪತಿ |

### ಸಂದರ್ಶಿಸುವ ಆಲಯಗಳು

1. ಶ್ರೀ ಪದ್ಮಾವತೀ ಅಮ್ಮನವರ ಆಲಯ - ತಿರುಚಾನೂರು
2. ಶ್ರೀ ಅಗಸ್ತ್ಯೇಶ್ವರ ಸ್ವಾಮಿಯವರ ಆಲಯ - ತೊಂಡವಾಡ
3. ಶ್ರೀ ಕಲ್ಯಾಣ ವೆಂಕಟೇಶ್ವರ ಸ್ವಾಮಿಯವರ ಆಲಯ - ಶ್ರೀನಿವಾಸಮಂಗಾಪುರ
4. ಶ್ರೀ ವಕುಲಮಾತೆ ಆಲಯ - ಪಾತಕಾಲ್ವ, ತಿರುಪತಿ
5. ಶ್ರೀ ಕಪಿಲೇಶ್ವರ ಸ್ವಾಮಿಯವರ ಆಲಯ - ತಿರುಪತಿ
6. ಶ್ರೀ ಗೋವಿಂದರಾಜಸ್ವಾಮಿಯವರ ಆಲಯ - ತಿರುಪತಿ, ಇಲ್ಲಿ ಭಕ್ತರನ್ನು ಇಳಿಸಲಾಗುತ್ತದೆ.

ಉತ್ತಮ ಪ್ರಯಾಣದ ಜೊತೆಗೆ ತರಬೇತಿ ಪಡೆದ ಮಾರ್ಗದರ್ಶಿಯ ಸೌಲಭ್ಯ ಇದೆ. ಸುಮಾರು 50 ಕಿ.ಮೀ. ಪ್ರಯಾಣ

## 2. ತಿರುಪತಿ ಸಮೀಪದಲ್ಲಿರುವ ಆಲಯಗಳ ಸಂದರ್ಶನ (ಪ್ರತಿದಿನ)

(ಸಮಯ : ಮೊದಲ ಪ್ರಯಾಣ ಬೆ : 8.30 ಗಂಟೆಗೆ- ಎರಡನೇ ಪ್ರಯಾಣ ಬೆ : 9.30 ಗಂಟೆಗೆ)

| ಶುಲ್ಕ | ಬಸ್ಸು ಆರಂಭವಾಗುವ ಸ್ಥಳ |
|---|---|
| ನಾನ್ ಎ.ಸಿ.ರೂ. 500/- | ಶ್ರೀನಿವಾಸಂ ಕಾಂಪ್ಲೆಕ್ಸ್ ಹಾಗೂ ವಿಷ್ಣುನಿವಾಸಂ, ತಿರುಪತಿ |

### ಸಂದರ್ಶಿಸಿಸುವ ಆಲಯಗಳು

1. ಶ್ರೀ ವೇಣುಗೋಪಾಲ ಸ್ವಾಮಿಯವರ ಆಲಯ - ಕಾರ್ವೇಟಿ ನಗರಂ
2. ಶ್ರೀ ವೇದನಾರಾಯಣ ಸ್ವಾಮಿಯವರ ಆಲಯ - ನಾಗುಲಾಪುರಂ
3. ಶ್ರೀ ಕಲ್ಯಾಣ ವೆಂಕಟೇಶ್ವರ ಸ್ವಾಮಿಯವರ ಆಲಯ - ನಾರಾಯಣವನಂ
4. ಶ್ರೀ ಪ್ರಸನ್ನ ವೆಂಕಟೇಶ್ವರ ಸ್ವಾಮಿಯವರ ಆಲಯ - ಅಪ್ಪಲಾಯಗುಂಟ
5. ಶ್ರೀ ಕರಿಯ ಮಾಣಿಕ್ಯ ಸ್ವಾಮಿಯವರ ಆಲಯ - ನಗರಿ
6. ಶ್ರೀ ಅನ್ನಪೂರ್ಣಾ ಸಮೇತ ಕಾಶಿವಿಶ್ವೇಶ್ವರ ಸ್ವಾಮಿಯವರ ಆಲಯ - ಬುಗ್ಗ
7. ಶ್ರೀ ಪಲ್ಲಿಕೊಂಡೇಶ್ವರ ಸ್ವಾಮಿಯವರ ಆಲಯ - ಸುರುಟುಪಲ್ಲಿ

ಉತ್ತಮ ಪ್ರಯಾಣದ ಜೊತೆಗೆ ತರಬೇತಿ ಪಡೆದ ಮಾರ್ಗದರ್ಶಿಯ ಸೌಲಭ್ಯ ಇದೆ. ಸುಮಾರು 250 ಕಿ.ಮೀ. ಪ್ರಯಾಣ

**1.ಕಾಣಿಪಾಕಂ - ಗೋಲ್ಡನ್ ಟೆಂಪಲ್ ಪ್ಯಾಕೇಜ್ ಟೂರ್ ಎ.ಸಿ. - ರೂ. 950/-**

(ಶ್ರೀನಿವಾಸಮಂಗಾಪುರಂ, ಕಾಣಿಪಾಕಂ,ಗೋಲ್ಡನ್‌ಟೆಂಪಲ್)

**2.ಕಾಣಿಪಾಕಂ - ತಿರುಪತಿ ಲೋಕಲ್ ಪ್ಯಾಕೇಜ್ ಟೂರ್ ಎ.ಸಿ. - ರೂ. 650/-**

(ಶ್ರೀ ಪದ್ಮಾವತಿ ಅಮ್ಮನವರ ದೇವಸ್ಥಾನ - ತಿರುಚಾನೂರು, ಶ್ರೀನಿವಾಸಮಂಗಾಪುರಂ,ಕಪಿಲತೀರ್ಥ, ಇಸ್ಕಾನ್ ಟೆಂಪಲ್, ಕಾಣಿಪಾಕಂ)

**3.ಶ್ರೀಕಾಳಹಸ್ತಿ - ತಿರುಪತಿ ಲೋಕಲ್ ಪ್ಯಾಕೇಜ್ ಟೂರ್ ಎ.ಸಿ. - ರೂ. 650/-**

(ಶ್ರೀ ಪದ್ಮಾವತಿ ಅಮ್ಮನವರ ದೇವಸ್ಥಾನ-ತಿರುಚಾನೂರು, ಶ್ರೀನಿವಾಸಮಂಗಾಪುರಂ, ಕಪಿಲತೀರ್ಥ, ಇಸ್ಕಾನ್ ಟೆಂಪಲ್, ಕಾಣಿಪಾಕಂ)

| ಟಿಕೆಟ್ಟು ಲಭ್ಯವಾಗುವ ಪ್ರದೇಶಗಳು ಮತ್ತು ಇತರ ವಿವರಗಳಿಗಾಗಿ ಸಂಪರ್ಕಿಸಿ :- | ಎ.ಪಿ. ಟೂರಿಜಮ್ ಇನ್‌ಫರ್‌ಮೇಷನ್ ಮತ್ತು ರಿಜರ್ವೇಷನ್ ಕಾರ್ಯಾಲಯ, ಶ್ರೀನಿವಾಸಂ ಕಾಂಪ್ಲೆಕ್ಸ್ ಮತ್ತು ವಿಷ್ಣುನಿವಾಸಂ ತಿರುಪತಿ. ದೂರವಾಣಿ - 0877 - 2289123, 9848007033 |
|---|---|





# ಒಡೆದ ಮಡಿಕೆಯಲ್ಲಿ ಮೊಸರನ್ನ ಮಣ್ಣಿನ ಹೂವಿನಲ್ಲಿ ಪರಿಮಳ ಶ್ರದ್ಧೆಯ ಮಹಿಮೆ

-ಪ್ರಣವ

ತಿರುಪತಿಯ ತಿಮ್ಮಪ್ಪ ಕೋಟ್ಯಾಂತರ ಕೋಟಿ ಆಸ್ತಿಗಳ ಒಡೆಯ. ಆದರೆ ವೆಂಕಟೇಶನಿಗೆ ಮಣ್ಣಿನ ಹೂವುಗಳು,ಒಡೆದ ಮಡಿಕೆಯ ಮೊಸರನ್ನು ಬಹಳ ಪ್ರಿಯವಾದದ್ದು. ತಿರುಮಲೆ ದೇವಸ್ಥಾನ ಕಟ್ಟಿಸಿದ್ದು ಪದ್ಮಾವತಿ ತಂದೆ ಆಕಾಶರಾಜನ ಸಹೋದರ ತೊಂಡಮಾನ ಚಕ್ರವರ್ತಿ. ಪದ್ಮಾವತಿ ಶ್ರೀನಿವಾಸನ ಪತ್ನಿ. ಇವರೆಲ್ಲ ಶ್ರೀನಿವಾಸನ ಬಂಧುಗಳು. ತೊಂಡಮಾನ ವೆಂಕಟೇಶನ ಮಹಾಭಕ್ತ. ಎಂತಹ ಭಕ್ತ ಎಂದರೆ ಒಂದು ಯುದ್ಧದಲ್ಲಿ ಚಕ್ರವರ್ತಿಗೆ ವೆಂಕಟೇಶ ಸಹಾಯ ಮಾಡಿ ನೀನು ಮಾಡುವ ಯುದ್ಧದಲ್ಲಿ ನಿನಗೆ ವಿಜಯ ಮಾಲೆ ಒಲಿಯಲಿ ಎಂದು ತನ್ನ ಶಂಖ ಚಕ್ರಗಳನ್ನೇ ಕೊಟ್ಟ ಸ್ವಾಮಿ. ಇದನ್ನು ತಿಳಿದ ಮತ್ತೊಬ್ಬ ಮಹಾನ್ ಭಕ್ತ ಹೊಸ ಶಂಖಚಕ್ರಗಳನ್ನು ಮಾಡಿಸಿ ಶ್ರೀನಿವಾಸನಿಗೆ ಅರ್ಪಿಸಿದನು.

ತೋಂಡಮಾನ ಚಕ್ರವರ್ತಿ ವೆಂಕಟೇಶ್ವರನ ಅರ್ಚನೆಗಾಗಿ ಪ್ರತಿದಿನ ಬಂಗಾರದ ಪುಷ್ಪಗಳನ್ನು ಮಾಡಿಸುತ್ತಿದ್ದನು,ಒಂದು ದಿನ ಅರ್ಚನೆ ಮಾಡಲು ಬಂದು ಬಾಗಿಲು ತೆಗೆದು ಸ್ವಾಮಿಯ ಪಾದದ ಕೆಳಗೆ ನೋಡಿದರೆ ಬಂಗಾರದ ಹೂಗಳ ಬದಲಾಗಿ ಮಣ್ಣಿನಿಂದ ಮಾಡಿದ ಹೂವುಗಳು ಇದ್ದವು. ಬಂಗಾರದ ಹೂವುಗಳು ನಿರ್ಮಾಲ್ಯದಲ್ಲಿ ಸೇರಿತ್ತು. ಇದು ಎಲ್ಲಿಂದ ಬಂದಿತು ಎಂದು ಹೂವನ್ನು ಕೈಯಲ್ಲಿ ಹಿಡಿದು ನೋಡಿದರೆ ಅವು ಸುಗಂಧ ಭರಿತ ಪರಿಮಳ ತುಂಬಿದ ಮಣ್ಣಿನ ಹೂವುಗಳಾಗಿತ್ತು. ಆಶ್ಚರ್ಯದಿಂದ ಸ್ವಾಮಿಯನ್ನೇ ಕೇಳುವೆ ಎಂದು ಸ್ವಾಮಿ ನಾನು ನಿಮ್ಮ ಪಾದಕ್ಕೆ ಅರ್ಚನೆ ಮಾಡಿದ ಬಂಗಾರದ ಹೂಗಳು ಇಲ್ಲಿ ಇರುತ್ತಿತ್ತು, ಆದರೆ ಇಂದು ಮಣ್ಣಿಂದ ಮಾಡಿದ ಹೂಗಳು ನಿಮ್ಮ ಪಾದದ ಕೆಳಗೆ ಇವೆ. ಅಲ್ಲದೆ ಗಿಡದಲ್ಲಿ ಬಿಡುವ ಹೂವಿಗೆ ಇರುವ ಸುವಾಸನೆಯಂತೆ ಮಣ್ಣಿನ ಹೂಗಳು ಸುಗಂಧಭರಿತವಾಗಿದೆ ಇದು ಹೇಗೆ? ಕೇಳಿದ. ಆದರೆ ಸ್ವಾಮಿಯದು ಮುಗುಳ್ನಗವೇ ಉತ್ತರವಾಗಿತ್ತು. ಇನ್ನೊಂದು ದಿನ ಹೇಳಬಹುದು ಎಂದು ಮತ್ತೆ ಒಂದಷ್ಟು ಕಾದು ನೋಡಿದನು.

ಚಕ್ರವರ್ತಿಗೆ ಆಶ್ಚರ್ಯವಾಗಿ ಈ ಸುಗಂಧದ ಹೂವು ಎಲ್ಲಿಂದ ಬರುತ್ತಿದೆ. ಯಾರು ಕೊಡುತ್ತಿದ್ದಾರೆ ಎಂದು ಯೋಚಿಸಿ ಪುನಃ ಶ್ರೀನಿವಾಸನಲ್ಲಿ ಕೈ ಮುಗಿದು ಸ್ವಾಮಿ ನನ್ನಿಂದಲೇ ಏನೋ ಲೋಪವಾಗಿದೆ ನಾನು ಮಾಡಿದ ಬಂಗಾರದ ಪುಷ್ಪಗಳ ಅರ್ಚನೆಗಳು ನಿರ್ಮಾಲ್ಯ ಸೇರಿದೆ. ಮಣ್ಣಿನ ಹೂಗಳು ನಿನ್ನ ಪಾದದ ಮೇಲೆ ಇರಲು ಬಲವಾದ ಕಾರಣ ಇರಬೇಕು. ದಯವಿಟ್ಟು ತಿಳಿಸು ಸ್ವಾಮಿ, ನನ್ನಿಂದ ಆದ ಅಪರಾಧವೇನು? ತಪ್ಪನ್ನು ಮನ್ನಿಸು ಎಂದು ಕೇಳಿದ. ಆಗ ಶ್ರೀನಿವಾಸ ಹೇಳಿದ ತೊಂಡಮಾನ್ ನಿನಗೆ ಬಂಗಾರದ ಹೂಗಳನ್ನು ಮಾಡಿಸಿ ಅರ್ಚನೆ ಮಾಡುವ ಶಕ್ತಿ ನಿನ್ನಂಥ ಚಕ್ರವರ್ತಿಗೆ ಮಾತ್ರ ಸಾಧ್ಯ ಎಂಬ ಗರ್ವ ನಿನ್ನ ಮನದಲ್ಲಿತ್ತು. ಅದಕ್ಕಾಗಿ ಈ ಘಟನೆ ನಡೆದಿದೆ. ನಿಜವಾದ ಭಕ್ತಿ ಎಂದರೆ ಏನು ಎಂದು ತಿಳಿಯಬೇಕಾದರೆ ಕುಂಬಾರ ಬಾಲಯ್ಯನ (ಪೊಟಯ್ಯ) ಮನೆಗೆ ಹೋಗು ಎಂದನು.

ಚಕ್ರವರ್ತಿಗೆ ಶ್ರೀನಿವಾಸನ ಮಾತು ಮನಸ್ಸಿಗೆ ನಾಟಿತು. ನನ್ನ ಭಕ್ತಿಯಲ್ಲಿ ದೋಷವು ನನಗೆ ಕಾಣದಂತೆ ಬಂದು ಬಿಟ್ಟಿದೆ. ಕುಂಬಾರ ಬಾಲಯ್ಯನನ್ನು ಹುಡುಕಿ ತಿಳಿಯಬೇಕು ಎಂದು ಸಾಧಾರಣ ಮನುಷ್ಯನಂತೆ ರಸ್ತೆಯಲ್ಲಿ ನಡೆದು ಹೊರಟನು. ಕುಂಬಾರನ ಮನೆ ಬಹಳ ದೂರ

ವಿತ್ತು ನಡೆದು ನಡೆದು ಸುಸ್ತಾಗಿ ಕುಂಬಾರ ಬಾಲಯ್ಯನ ಮನೆ ಮುಂದೆಯೇ ತೊಂಡಮಾನ ಚಕ್ರವರ್ತಿಗೆ ಆಯಾಸದಿಂದ ತಲೆಸುತ್ತಿ ಬಂದು ಬಿದ್ದುಬಿಟ್ಟನು. ಕುಂಬಾರ ಬಾಲಯ್ಯ ಚಕ್ರವರ್ತಿಯನ್ನು ಎಬ್ಬಿಸಿ ಶೈತ್ಯೋಪಚಾರ ಮಾಡಿ ಉಪಚರಿಸಿ ದಾಗ ಅವರ ಆಯಾಸ ಕಡಿಮೆಯಾಯಿತು. ಆಗ ಅಲ್ಲಿಗೆ ಸಾಕ್ಷಾತ್ ಶ್ರೀನಿವಾಸನೆ ಬಂದು ನಿಂತು ಇಬ್ಬರಿಗೂ ದರ್ಶನ ಕೊಟ್ಟು ಇವನೇ ನನ್ನ ನಿಜವಾದ ಭಕ್ತ ಕುಂಬಾರ ಬಾಲಯ್ಯ. ಮಣ್ಣಿನಲ್ಲೇ ಭಕ್ತಿಯಿಂದ ಹೂವು ಮಾಡಿ ಅರ್ಪಿಸುತ್ತಾನೆ. ಇವನ ಭಕ್ತಿಗೆ ನಾನು ಸೋತು ಹೋದೆ. ಅದರಿಂದಲೇ ಆ ಭಕ್ತಿಯ ಹೂಗಳು ನನ್ನ ಪಾದದ ಬುಡದಲ್ಲಿ ಇರುತ್ತಿತ್ತು. ನೀನು ಕೊಟ್ಟ ಬಂಗಾರದ ಹೂವು ನಿರ್ಮಾಲ್ಯದ ಜೊತೆ ಹೋಗುತ್ತಿತ್ತು ಎಂದು ಭಗವಂತ ನುಡಿದನು.

ಕುಂಬಾರ ಬಾಲಯ್ಯನಿಗೆ ಇವೆಲ್ಲವೂ ಕನಸಿನಂತೆ ಕಂಡಿತು. ಸಾಕ್ಷಾತ್ ಶ್ರೀನಿವಾಸನೆ ದರ್ಶನ ಕೊಟ್ಟಿದ್ದಾನೆ ಅಂದ ಮೇಲೆ ಅವನ ಆನಂದಕ್ಕೆ ಪಾರವೇ ಇರಲಿಲ್ಲ. ಅವನಿಗೆ ಏನು ಮಾಡಬೇಕು. ನನ್ನ ಮನೆಗೆ ಸಾಕ್ಷಾತ್ ಭಗವಂತನೇ ಬಂದಿದ್ದಾನೆ. ಅತಿಥಿ ಸತ್ಕಾರದಲ್ಲಿ ನಾನು ಏನು ಅವನಿಗೆ ಕೊಡಲಿ ಎಂದು ತಿಳಿಯಲಿಲ್ಲ. ತಕ್ಷಣವೇ ಅಲ್ಲೇ ಮೂಲೆಯ ಲ್ಲಿದ್ದ ಒಡೆದ ಮಣ್ಣಿನ ಕುಡಿಕೆಯನ್ನೇ ತೊಳೆದು, ಅನ್ನಕ್ಕೆ ಮೊಸರು ಹಾಕಿ ಕಲಸಿ ಅದನ್ನೇ ತಂದು ಭಗವಂತನಿಗೆ ಅರ್ಪಿ ಸಿದ. ಶ್ರೀನಿವಾಸ ಆ ಒಡೆದ ಮಡಿಕೆಯಲ್ಲೇ ಕೈಹಾಕಿ ಮೊಸರ ನ್ನದ ತುತ್ತನ್ನು ಸಂತೋಷವಾಗಿ ತಿಂದು ತೃಪ್ತಿಯಾಗಿ ತೇಗಿದ. ಅಂದಿನಿಂದ ಶ್ರೀನಿವಾಸನಿಗೆ ಮೊದಲ ಹಾಗೂ ಮುಂಜಾ ನೆಯ ನೈವೇದ್ಯ ಮಾಡುವುದು ಕುಂಬಾರ ಬಾಲಯ್ಯ ಕೊಟ್ಟ ಮಡಿಕೆಯಂತೆ ಒಡೆದ ಮಡಿಕೆಯಲ್ಲಿ ಮೊಸರನ್ನದ ನೈವೇದ್ಯ ಅರ್ಪಿಸುತ್ತಾರೆ.

ತೊಂಡಮಾನ ಚಕ್ರವರ್ತಿಗೆ ಅರಿವಾಯಿತು. ಶ್ರೀನಿ ವಾಸನಿಗೆ ಪ್ರತಿನಿತ್ಯವೂ ಮುಂಜಾನೆ ಒಡೆದ ಮಡಿಕೆಯಲ್ಲಿ ಹಾಕಿದ ಮೊಸರನ್ನ ನೈವೇದ್ಯ ಮಾಡಿ ಭಕ್ತರಿಗೂ ಅದನ್ನೇ ಪ್ರಸಾದ ಕೊಡುವುದು ಎಂಬ ಶಾಸನವನ್ನು ಜಾರಿಗೆ ತಂದ ನಂತೆ. (ಪುರಿಜಗನ್ನಾಥನಿಗೂ ಇವನ ಭಕ್ತ ಕರ್ಮಭಾಯಿ ಮುಂಜಾನೆ ಹೆಸರುಬೇಳೆ ಅಕ್ಕಿ, ಬೆಲ್ಲ, ತುಪ್ಪ ಹಾಕಿ ಮಾಡಿದ ಕಿಚಡಿ ತಿನ್ನಲು ಬೆಳಗಿನ ಜಾವವೇ ಕರ್ಮಭಾಯಿ ಮನೆಗೆ ಬರುತ್ತಿದ್ದ. ಆಕೆಯ ಮರಣದ ನಂತರ ಜಗನ್ನಾಥನ ಅಭಿ ಷೇಕದ ಮೊದಲ ನೈವೇದ್ಯ ಸಿಹಿಯಾದ ಕಿಚಡಿ ಆಗಲಿ ಎಂಬ ಜಗನ್ನಾಥನ ಇಚ್ಛೆಯಂತೆ ರಾಜನು ಅದೇ ಪದ್ಧತಿಯನ್ನು ರೂಢಿಗೆ ತಂದನು)ಇಂದಿಗೂ ಪ್ರತಿನಿತ್ಯ ಶ್ರೀನಿವಾಸನಿಗೆ ಮೊದಲ ನೈವೇದ್ಯ ಒಡೆದ ಮಡಿಕೆಯಲ್ಲಿ ಮೊಸರನ್ನ ನೈವೇದ್ಯ ಪದ್ಧತಿ ನಡೆಯುತ್ತಿದೆ. ಕುಂಬಾರನ ಭಕ್ತಿ ಎಂದೆಂದಿಗೂ ಅಚ್ಚ ಳಿಯದೇ ಉಳಿಯಬೇಕು ಎನ್ನುವುದೇ ತೊಂಡಮಾನ ಚಕ್ರ ವರ್ತಿಯ ಆಶಯವಾಗಿ ಅದನ್ನು ಶಾಸನವನ್ನಾಗಿ ಮಾಡಿದ.

ತೊಂಡಮಾನ ಭಗವಂತನ ನಿಷ್ಠಾವಂತ ಭಕ್ತನಾ ದರೂ ತಾನು ದೊಡ್ಡ ಚಕ್ರವರ್ತಿ, ಚಿನ್ನದ ಹೂವುಗಳನ್ನು ಭಗವಂತನಿಗೆ ಕೊಡುವ ಶಕ್ತಿ ತನಗೆ ಮಾತ್ರ ಇದೆ ಎಂಬ ಸಣ್ಣ ಅಹಂಕಾರದ ಒಂದು ಎಳೆ ಗೊತ್ತಿದ್ದು ಗೊತ್ತಿಲ್ಲದಂತೆ ನುಸುಳಿತ್ತು. ಆದ್ದರಿಂದ ಅಮೂಲ್ಯವಾದ ಸ್ವರ್ಣ ಹೂಗಳ ಹಾರವನ್ನು ಅರ್ಪಿಸಿದರೂ ಸುಮ್ಮನಿದ್ದ ಶ್ರೀನಿವಾಸ,ಬಡ ಕುಂಬಾರ ಮಣ್ಣಿನಿಂದ ಮಾಡಿದ ಹೂಗಳನ್ನು ಅರ್ಪಿಸಿದಾಗ, ಅದನ್ನು ಸ್ವೀಕರಿಸಿ ಮಣ್ಣಿನ ಹೂವುಗಳಿಗೆ ಸುಗಂಧವನ್ನು ಕೊಟ್ಟನು. ಭಗವಂತನಿಗೆ ಬೇಕಾದ್ದು ಕುಂಬಾರನಲ್ಲಿದ್ದ ಪ್ರೀತಿ, ಭಕ್ತಿ, ಶ್ರಮ ಮತ್ತು ನಿಷ್ಠೆ. ಇದಕ್ಕಾಗಿ ಭಗವಂತ ಅವನಿಗೆ ಸ್ಪಂದಿಸಿದ. ತೊಂಡಮಾನನ ಭಕ್ತಿಯೊಳಗೆ ಗರ್ವವು ಇರುವು ದನ್ನು ತಿಳಿಸಲೆಂದೇ ಕುಂಬಾರನ ಮನೆಯಲ್ಲಿ ಪ್ರತ್ಯಕ್ಷನಾದ ಭಗವಂತ, ಪ್ರೀತಿ ಮತ್ತು ಭಕ್ತಿಯಿಂದ ಒಡೆದ ಮಡಿಕೆಯಲ್ಲಿ ಕುಂಬಾರ ತಂದು ಕೊಟ್ಟ ಮೊಸರನ್ನವನ್ನು ಭೂರಿ ಭೋಜನ ದಂತೆ ಸವಿದನು. ಆಡಂಬರದ ಚಿನ್ನಕ್ಕಿಂತಲೂ ಭಕ್ತಿಯ ಪರಿಮಳವೆ ಹೆಚ್ಚು ಎಂಬುದನ್ನು ತೊಂಡಮಾನ ಚಕ್ರವರ್ತಿಗೆ ಭಗವಂತ ಈ ಮೂಲಕ ತೋರಿಸಿಕೊಟ್ಟನು.

**ವೆಂಕಟೇಶೋ ವಾಸುದೇವ**
**ಪ್ರದ್ಯುಮ್ನೋ ಅಮಿತ ವಿಕ್ರಮ**
**ಸಂಕರ್ಷಣೋ ಅನಿರುದ್ಧಶ್ಚ**
**ಶೇಷಾದ್ರಿ ಪತಿರವೇ ಚ ॥**

**ಜನಾರ್ಧನ ಪದ್ಮನಾಭೋ**
**ವೆಂಕಟಾಚಲ ವಾಸನಃ**
**ಸೃಷ್ಟಿಕರ್ತಾ ಜಗನ್ನಾಥೋ**
**ಮಾಧವೋ ಭಕ್ತ ವತ್ಸಲ**

**ಗೋವಿಂದೋ ಗೋಪತಿಃ ಕೃಷ್ಣ**
**ಕೇಶವೋ ಗರುಡ ಧ್ವಜ**
**ವರಾಹೋ ವಾಮನಶ್ಚೈವ**
**ನಾರಾಯಣ ಅಧೋಕ್ಷಜಃ**

**ವೆಂಕಟಾದ್ರಿಸಮಂ ಸ್ಥಾನಂ**
**ಬ್ರಹ್ಮಾಂಡೇ ನಾಸ್ತಿ ಕಿಂಚನ**
**ವೆಂಕಟೇಶ ಸಮೋದೇವೋ**
**ನ ಭೂತೋ ನ ಭವಿಷ್ಯತಿ**

**ಏತೇನ ಸತ್ಯವಾಕ್ಯೇನ**
**ಸರ್ವಾರ್ಥಾನ್ ಸಾಧಯಾಮ್ಯಹಂ!!!**



# ಶ್ರೀ ಪದ್ಮನಾಭತೀರ್ಥರಿಗೆ ಆರಾಧನೆಯ ಪ್ರಯುಕ್ತ ನಮನ

- ಡಾ|| ರೂಪಶ್ರೀ ಶಶಿಕಾಂತ್
89041 26661



ದ್ವೈತ ಸಿದ್ಧಾಂತದ ಪ್ರವರ್ತಕರಾದ ಶ್ರೀ ಶ್ರೀ ಮಧ್ವಾಚಾರ್ಯರ ಮೊದಲನೇ ಶಿಷ್ಯರು ಶ್ರೀಪದ್ಮನಾಭತೀರ್ಥರು.

ಶ್ರೀ ಶ್ರೀ ಪದ್ಮನಾಭತೀರ್ಥರು ಪೂರ್ವಾಶ್ರಮದಲ್ಲಿ ಗೋದಾವರಿ ತೀರದ ಹೆಸರಾಂತ ಪಾಂಡುರಂಗಿ ಮನೆತನದ ಬ್ರಾಹ್ಮಣರು ಶೋಭನಭಟ್ಟರು ಎಂದು ಪ್ರಸಿದ್ಧರಾಗಿದ್ದರು. ಇವರನ್ನು ನಾರಾಯಣಪಂಡಿತಾಚಾರ್ಯರು ಮಧ್ವಾ ಚಾರ್ಯರ ಜೀವನ ಚರಿತ್ರೆಗ್ರಂಥ ಶ್ರೀಸುಮಧ್ವವಿಜಯದಲ್ಲಿ **"ವಿದ್ವತ್ತಿ ಮಿಂಗಿಲ"** ಎಂದು ಹೊಗಳಿದ್ದಾರೆ.

ಅವರು ಪ್ರತಿ ವರ್ಷ ತತ್ವಜ್ಞಾನಗಳ ಸಮ್ಮೇಳನ ಆಯೋಜಿಸುತ್ತಿದ್ದರು. ಎಲ್ಲ ಮತಗಳ ಪಂಡಿತರು ತಮ್ಮ ತಮ್ಮ ಮತಗಳನ್ನು ಅಲ್ಲಿ ಮಂಡಿಸಿ ವಾಕ್ಯಾರ್ಥ ಮಾಡಬೇಕಿತ್ತು. ಪ್ರಕಾಂಡ ಪಂಡಿತರಾದ ಇವರು ಶ್ರೀಮಧ್ವಾಚಾರ್ಯರ ಜೊತೆ ಸುಮಾರು ದಿನಗಳವರೆಗೆ ವಾದ ಮಾಡಿ ಕಡೆಗೆ ಮಧ್ವಮತಕ್ಕೆ ಶರಣಾಗಿ ಮಧ್ವಾಚಾರ್ಯರ ಶಿಷ್ಯರಾದರು. ಅವರಿಂದಲೇ ಸನ್ಯಾಸ ಸ್ವೀಕರಿಸಿ ಶ್ರೀಪದ್ಮನಾಭತೀರ್ಥರಾದರು. ಶ್ರೀಮಧ್ವಾಚಾರ್ಯರ ಬ್ರಹ್ಮಸೂತ್ರ ಭಾಷ್ಯಕ್ಕೆ ಸತ್ತರ್ಕದೀಪಾವಲಿ ಅನುವ್ಯಾಖ್ಯಾನಕ್ಕೆ ಸನ್ಯಾಯರತ್ನಾವಲಿ, ಖಂಡನತ್ರಯಗಳಿಗೆ ಟೀಕೆ, ಗೀತಾಭಾಷ್ಯ ಹಾಗೂ ಗೀತಾತಾತ್ಪರ್ಯಗಳಿಗೆ ಟೀಕೆ, ತತ್ವದ್ಯೋತ ತತ್ವನಿರ್ಣಯ ತತ್ವ ಸಂಖ್ಯಾನ ಕರ್ಮನಿರ್ಣಯಗಳಿಗೆ ಟೀಕೆ ಹೀಗೆ ಶ್ರೀಮಧ್ವಾಚಾರ್ಯರ ಅನೇಕ ಗ್ರಂಥಗಳಿಗೆ ಟೀಕೆಯನ್ನು ಬರೆದಿದ್ದಾರೆ.

ಹೊಸ ಸಿದ್ಧಾಂತವನ್ನು ಹುಟ್ಟು ಹಾಕಿದ ಸಂದರ್ಭದಲ್ಲಿ ಆಗ ಪ್ರಚಲಿತವಾಗಿ ಲೋಕದಲ್ಲಿ ನಡೆಯುತ್ತಿರುವ ಅನೇಕ ಸಿದ್ಧಾಂತಗಳನ್ನು ಖಂಡಿಸಿ ವಾದಗಳ ಮೂಲಕ ಜ್ಞಾನಿಗಳನ್ನು ಒಪ್ಪಿಸಿ ಸಿದ್ಧಾಂತವನ್ನು ಪ್ರಚಾರ ಮಾಡ ಬೇಕಾಗಿತ್ತು. ಅಂತಹ ಸಂದರ್ಭದಲ್ಲಿ ಉಡುಪಿ ಕ್ಷೇತ್ರದಲ್ಲಿ ತುಳುನಾಡಿನಲ್ಲಿ ಹುಟ್ಟಿಕೊಂಡಂತಹ ಮಧ್ವಮತವನ್ನು ಕರ್ನಾಟಕದಾದ್ಯಂತ ಮತ್ತು ಕರ್ನಾಟಕದಿಂದ ಆಚೆಯೂ ಕೂಡ ಹರಡುವಂತೆ ಮಾಡಿದಂತಹ ಕೀರ್ತಿ ಪದ್ಮನಾಭತೀರ್ಥರಿಗೆ ಸೇರುತ್ತದೆ. ಪದ್ಮನಾಭತೀರ್ಥರ ಶ್ರೇಷ್ಠತೆಯನ್ನು ಅವರ ಗುಣವನ್ನು ಅವರ ಶ್ರದ್ಧೆ ಭಕ್ತಿ ಮತ್ತು ಜ್ಞಾನ ಭಂಡಾರವನ್ನು ನಾರಾಯಣ ಪಂಡಿತಾಚಾರ್ಯರು, ಟೀಕಾಚಾರ್ಯರು ಎಂದೇ ಪ್ರಖ್ಯಾತಿಯನ್ನು ಪಡೆದಿರುವ ನ್ಯಾಯಸುಧಾ ಎಂಬ ಶ್ರೇಷ್ಠ ಗ್ರಂಥವನ್ನು ಕೊಟ್ಟಂತಹ ಜಯತೀರ್ಥರು ಎಲ್ಲರೂ ಕೊಂಡಾಡಿದ್ದಾರೆ.

ಮಧ್ವಾಚಾರ್ಯರು ಬರೆದಂತಹ ಗ್ರಂಥಗಳಿಗೆ ಪದ್ಮನಾಭತೀರ್ಥರು ಅನುವಾದಗಳನ್ನು ಬರೆದಿದ್ದಾರೆ ಮತ್ತು ಟೀಕೆಗಳನ್ನು ಬರೆದಿದ್ದಾರೆ. ಮಧ್ವಾಚಾರ್ಯರಿಂದಲೇ ಪಾಠವನ್ನು ಕಲಿತಂತಹ ಇವರು ತಮ್ಮ ಗುರುಗಳ ಮನಸ್ಸಿನಲ್ಲಿ ಏನಿತ್ತು ಎಂದು ಅರಿತು ಅದಕ್ಕನುಗುಣವಾಗಿ ಅನುವಾದವನ್ನು ಮಾಡಿರುವುದರಿಂದ ಇವರ ಗ್ರಂಥಗಳು ಅತ್ಯಮೂಲ್ಯವಾಗಿವೆ ಮತ್ತು ಎಲ್ಲಾ ಸಾಧಕರಿಗೂ ಮತ್ತು ಅಧ್ಯಯನ ಮಾಡುವವರಿಗೂ ಮಾರ್ಗದರ್ಶಕವಾಗಿದೆ. ಆದ್ದರಿಂದಲೇ ಜಯತೀರ್ಥರು ಇವರನ್ನು ಸೂರ್ಯನಿಗೆ ಹೋಲಿಸಿ ಇವರ ಗ್ರಂಥಗಳನ್ನು ಸೂರ್ಯಕಿರಣಗಳಿಗೆ ಹೋಲಿಸಿ ಆ ಬೆಳಕಿನಲ್ಲಿ ತಾವು ನಡೆಯುತ್ತಿದ್ದೇವೆ ಎಂದು ಹೇಳಿದ್ದಾರೆ.

ಪದ್ಮನಾಭತೀರ್ಥರ ಗುಣಗಳನ್ನು ವರ್ಣಿಸುತ್ತಾ ಶೃತ್ಯ, ಮತ್ಯ, ಸದಾ ಭಕ್ತ್ಯ, ಎಂದು ಹೇಳಿದ್ದಾರೆ. ಶೃತ್ಯ ಎಂದರೆ ಎಲ್ಲ

ವನ್ನು ಸರಿಯಾಗಿ ಕೇಳಿಸಿಕೊಂಡು ಜ್ಞಾನವನ್ನು ತಮ್ಮೊಳಗೆ ತೆಗೆದುಕೊಳ್ಳುವವರು. ಮತ್ತು ಎಂದರೆ ಒಂದು ಅರ್ಥದಲ್ಲಿ ಬಂದ ಜ್ಞಾನವನ್ನು ಮನನ ಮಾಡಿ ಅದಕ್ಕೆ ಸರಿಯಾದ ಅರ್ಥಗಳನ್ನು ಕಂಡುಕೊಂಡು ತಾವು ಅದನ್ನು ಬೇರೆಯವರಿಗೆ ಹೇಗೆ ತಿಳಿಸಬೇಕು ಎಂಬುದನ್ನು ತಿಳಿಯುವಂತಹ ಗುಣ. ಜೊತೆಗೆ ಅತ್ಯಂತ ಮತಿವಂತರಾಗಿ ಜ್ಞಾನಿಗಳಾಗಿದ್ದರು. ಗುರುಗಳೇ ಅವರನ್ನು ತರ್ಕದಲ್ಲಿ ನಿಸ್ಸೀಮರು ಎಂದು ಹೊಗಳಿದ್ದಾರೆ. ಆದರೆ ಈ ತಾರ್ಕಿಕ ಬುದ್ಧಿಯ ಜೊತೆಗೆ ಅವರಲ್ಲಿ ಸದಾ ಭಕ್ತಿ ಜಾಗೃತವಾಗಿರುವುದರಿಂದ ಅದು ಕುತರ್ಕವಾಗದೆ ಸುತರ್ಕವಾಗಿ ಭಕ್ತಿಯ ಪರಾಕಾಷ್ಠೆ ತಲುಪುವ ಸದ್ಗುಣವಾಗಿತ್ತು. ಆದ್ದರಿಂದಲೇ ಅನೇಕ ಗ್ರಂಥಗಳಿಗೆ ಅವರು ಖಂಡನೆಗಳನ್ನು ಬರೆದು ಸಿದ್ಧಾಂತವನ್ನು ಪ್ರತಿಪಾದಿಸಿದ್ದಾರೆ.

ಅವರಲ್ಲಿದ್ದ ವೈರಾಗ್ಯ ಮತ್ತು ಎಲ್ಲದರಲ್ಲೂ ಭಗವಂತನನ್ನು ಕಾಣುವ ಗುಣವನ್ನು ಕೊಂಡಾಡಿದ್ದಾರೆ. ಸಂಚಾರ ಹೋಗುವಾಗ ಅವರ ಕಣ್ಣಿಗೆ ಕಾಣಿಸುತ್ತಿದ್ದ ಪ್ರತಿಯೊಂದು ಹೂವು, ಹಕ್ಕಿ, ಗಿಡ, ಮರ ಅದರಲ್ಲಿರುವ ವಿಶಿಷ್ಟವಾದ ರಚನೆಗಳು ಬಣ್ಣ ವೈವಿಧ್ಯ ಎಲ್ಲವನ್ನು ಗಮನಿಸಿ ಸೃಷ್ಟಿಕರ್ತನಾದ ಪರಮಾತ್ಮನನ್ನು ಕೊಂಡಾಡುವ ಸ್ವಭಾವ ಸ್ತುತ್ಯಾರ್ಹ.

ಅವರು ತಮ್ಮ ಕಾಲದಲ್ಲಿ ಅನೇಕರನ್ನು ವಾದದಲ್ಲಿ ಸೋಲಿಸಿ, ವೈಷ್ಣವ ದೀಕ್ಷೆಯನ್ನು ಕೊಟ್ಟು ಮಧ್ವಾಚಾರ್ಯರ ಸಿದ್ಧಾಂತವನ್ನು ಪ್ರತಿಪಾದಿಸಿದ್ದಾರೆ.

ಅಷ್ಟೇ ಅಲ್ಲದೆ ಅವರ ಕಾಲದಲ್ಲಿ ಭೂಮಿಯನ್ನು ಖರೀದಿಸಿ ಮಠದ ಆಸ್ತಿಯನ್ನು ವಿಸ್ತರಿಸಿ ಗುರುಕುಲಗಳನ್ನು ಮಾಡುವ ಕಾರ್ಯವನ್ನು ಕೂಡ ಅವರು ಮಾಡಿದ್ದಾರೆ. ಇಂತಹ ಪದ್ಮನಾಭತೀರ್ಥರು, ಕಾರ್ತಿಕ ಮಾಸದ ಅಮಾವಾಸ್ಯೆಯಂದು ಬೃಂದಾವನಸ್ಥರಾದರು. ಅವರ ಬೃಂದಾವನವು ತುಂಗಾ ನದಿ ತೀರದಲ್ಲಿ ನವವೃಂದಾವನದಲ್ಲಿ ಇದೆ.

ಇವರ ಗುಣ ಮಹಿಮೆಯನ್ನು ಅರಿತು ಇವರ ಗ್ರಂಥಗಳನ್ನು ಅಧ್ಯಯನ ಮಾಡುವುದರ ಮೂಲಕ ಇವರ ಪಾದ ಪದ್ಮಗಳನ್ನು ಹಿಡಿದು ಉದ್ಧಾರದ ಮಾರ್ಗವನ್ನು ಪಡೆಯೋಣ. ಇವರ ಅಂತರ್ಗತನಾದ ಶ್ರೀ ಮಧ್ವಾಚಾರ್ಯರ ಅಂತರ್ಗತನಾದ ಭಗವಂತನ ಕೃಪೆಯು ಎಲ್ಲರ ಮೇಲಿರಲಿ ಎಂದು ಪ್ರಾರ್ಥಿಸೋಣ.

**ತಿರುಚಾನೂರು ಶ್ರೀ ಪದ್ಮಾವತಿ ಅಮ್ಮನವರ ತೆಪ್ಪೋತ್ಸವಗಳನ್ನು ಕ್ಷೀರ್ಣಾವ ಉತ್ಸವ, ಪ್ಲವೋತ್ಸವವೆಂದು ಹೆಸರು. ಜ್ಯೇಷ್ಠಮಾಸದ ಹುಣ್ಣಿಮೆಗೆ ಐದು ದಿನಗಳ ಕಾಲ ಈ ಉತ್ಸವಗಳು ನಡೆಯುತ್ತವೆ. ಮೊದಲ ದಿನ ಏಕಾದಶಿಯಂದು ಶ್ರೀಕೃಷ್ಣನಿಗೆ, ಎರಡನೆಯ ದಿನ ದ್ವಾದಶಿಯಂದು ಶ್ರೀಸುಂದರರಾಜಸ್ವಾಮಿಗೆ, ಕೊನೆಯ ಮೂರು ದಿನಗಳು ಪದ್ಮಾವತಿ ಅಮ್ಮನವರಿಗೆ ಅಲ್ಲಿರುವ ಪದ್ಮಸರೋವರದಲ್ಲಿ ತೆಪ್ಪೋತ್ಸವಗಳು ನಡೆಯುತ್ತವೆ. ಈ ಸೇವೆಯನ್ನು ಸಂದರ್ಶಿಸುವವರಿಗೆ ಅವರಲ್ಲಿ ಮನೆ ಮಾಡಿರುವ ಅಜ್ಞಾನದ ಕತ್ತಲೆಯನ್ನು ಹೊಡೆದೊಡಿಸಿ, ನಿರ್ಮಲವಾದ ಜ್ಞಾನದ ಬೆಳಕನ್ನು ನೀಡಿ ಸಮಸ್ತ ಸಂಪತ್ತನ್ನು ಪ್ರಸಾದಿಸುತ್ತದೆಂದು ಭಕ್ತರ ನಂಬಿಕೆ. ಈ ರೀತಿ ಶ್ರೀಶ್ರೀನಿವಾಸನ ಹೃದಯದ ಅರಸಿಯಾದ, ಪಟ್ಟದ ರಾಣಿಯಾದ ಪದ್ಮಾವತಿ ಅಮ್ಮನವರು ಆರ್ಚಾಮೂರ್ತಿಯಾಗಿ ನೆಲೆಸಿರುವ ಈ ತಿರುಚಾನೂರು ಕ್ಷೇತ್ರವು ಪ್ರತಿ ನಿತ್ಯವೂ ವೈಭವದಿಂದ, ನಿತ್ಯವೂ ಉತ್ಸವಗಳೊಂದಿಗೆ ಶೋಭಾಯಮಾನವಾಗಿ ಪ್ರಸಿದ್ಧ ಪುಣ್ಯಕ್ಷೇತ್ರವೆನಿಸಿಕೊಂಡಿದ್ದು ತೀರ್ಥರಾಜನೆಂದು ಹೆಸರುಗಳಿಸಿದೆ.**





# ಕನಕದಾಸರು ಕಂಡ ಕೃಷ್ಣ ಪರಮಾತ್ಮ



**–ಡಾ॥ ಸಿ.ಎಸ್. ಊರ್ಮಿಳಾ**

ಕನಕದಾಸರು ಯಮಧರ್ಮರಾಜ ಅಂಶ ಸಂಭೂತರೆಂದು ಪ್ರಸಿದ್ಧರಾಗಿದ್ದಾರೆ. ಭಗವಂತ ಭಕ್ತ ಪರಾಧೀನ ಎಂಬುದನ್ನು ಈ ಜಗತ್ತಿಗೆ ತೋರಿಸಲು ಶ್ರೀಕೃಷ್ಣ ಪರಮಾತ್ಮ ಕನಕದಾಸರಿಗೆ ಕಿಂಡಿಯಲ್ಲಿಯೇ ದರ್ಶನ ನೀಡಿ ಶಾಶ್ವತ ಸತ್ಯಕ್ಕೆ ಸಾಕ್ಷಿಯಾಗಿ ಇಂದಿಗೂ ಉಡುಪಿಯಲ್ಲಿ ನಿಂತು ಎಲ್ಲಾ ಭಕ್ತರನ್ನು ಸಲಹುತ್ತಿದ್ದಾನೆ.

ಶ್ರೀ ಕೃಷ್ಣ ಪರಮಾತ್ಮ ಜಗನ್ನಾಟಕ ಸೂತ್ರಧಾರಿ. ಸಾಮಾನ್ಯ ಜನರು ಮಹಾಭಾರತದ ಯುದ್ಧದ ಬಗ್ಗೆ ಹೇಳುತ್ತಾ ಕೌರವರನ್ನು ಕೊಂದವರು ಪಾಂಡವರೇ ಎಂದು ಹೇಳುತ್ತಾರೆ. ಆದರೆ ಜ್ಞಾನಿಗಳ ಚಿಂತನೆಯೇ ಬೇರೆ. ಈ ನಿಗೂಢವಾದ ವಿಷಯವನ್ನು ಕನಕದಾಸರು **“ಶ್ರೀಕೃಷ್ಣ ಚರಿತಾಮೃತ”**ದಲ್ಲಿ ಕೌರವರನ್ನು ಕೊಂದದ್ದು ಪಾಂಡವರಲ್ಲ ಶ್ರೀಕೃಷ್ಣ ಪರಮಾತ್ಮನೇ ಎಂದು ದೃಢಿಕರಿಸಿದ್ದಾರೆ. ಈ ಕೃಷ್ಣ ಚರಿತಾಮೃತದ ಬಗ್ಗೆ ನಾವು ಸ್ವಲ್ಪ ತಿಳಿದು ಕೊಳ್ಳೋಣ.

**ಬಂದೆ ದೂರು ಬಂದಿದೆ ಪಾಂಡವರಿಗೆ ॥ಪ॥**
**ಕೊಂದವರಿವರ ಕೌರವನೆಂಬ ಅಪಕೀರ್ತಿ ॥ಅ.ಪ.॥**

ದೂರು ಪಾಂಡವರ ಮೇಲೆಯೇ ಇದೆ ನಿಜ. ಆದರೆ ಅದಕ್ಕಿಂತ ಹೆಚ್ಚಾಗಿ ಕೌರವ ಕಡೆಯವರೇ ಅವರ ಸಾವಿಗೆ ಕಾರಣ ಎಂದು ಹೇಳುತ್ತಾರೆ ಪಾಂಡವರ ಕಡೆ ಕೇವಲ ಏಳು ಅಕ್ಷೋಹಿಣಿ ಸೈನವಿತ್ತು. ಕೌರವರ ಕಡೆ ಹನ್ನೊಂದು ಅಕ್ಷೋಹಿಣಿ ಸೈನ್ಯವಿತ್ತು. ಆದರೂ ದುರ್ಯೋಧನ ದ್ರೋಣಾಚಾರ್ಯರ ಬಳಿ ಬಂದು ತನ್ನ ಸಂದೇಹವನ್ನು ತೋಡಿಕೊಳ್ಳುತ್ತಾನೆ. ಭೀಷ್ಮರಿಂದ ರಕ್ಷಿಸಲ್ಪಟ್ಟ ತನ್ನ ಸೈನ್ಯ ಅಸಮರ್ಥವಾಗಿದೆ. ಭೀಮನಿಂದ ರಕ್ಷಿಸಲ್ಪಟ್ಟ ಸೈನ್ಯಸಮರ್ಥವಾಗಿದೆ ಎಂದು ತನ್ನ ಕಡೆಯವರು ನ್ಯಾಯಯುತವಾಗಿ ಯುದ್ಧ ಮಾಡಲಾರರು ಎಂದು ದುರ್ಯೋಧನನಿಗೆ ಅನುಮಾನ ಇದಕ್ಕೆ ಪೋಷಕವಾಗಿ ಕನಕದಾಸರು ತಮ್ಮ ಕೀರ್ತನೆಯಲ್ಲಿ ಹೀಗೆ ಸ್ಪಷ್ಟಪಡಿಸಿದ್ದಾರೆ.

**ಮುನ್ನಿನ ವೈರದಲಿ ಕಡು**
**ಸ್ನೇಹವ ಮಾಡಿ**
**ಉನ್ನತ ಲೆತ್ತ ಪಗಡೆಯಾಡಿಸಿ**
**ತನ್ನ ಕುಹಕದಿಂದ**
**ಕುರುಬಲವ ಕೊಂದವರು**
**ಘನ್ನಘಾತಕ**
**ಶಕುನಿಯೋ ಪಾಂಡವರೋ?**

ಎಂದು ಕೇಳಿದ್ದಾರೆ.

ಗಾಂಧಾರ ದೇಶದ ಸುಬಲ ಎಂಬ ರಾಜನ ಮಗ ಶಕುನಿ ಇವನಿಗೆ ದ್ವಾಪರ ಎಂಬ ಹೆಸರೂ ಇತ್ತು. ಇವನಿಗೆ 12 ಜನ ಸಹೋದರರು ಮತ್ತು 11 ಜನ ಸಹೋದರಿಯರಿದ್ದರು. ಹುಟ್ಟು ಕುರುಡನಾದ ಧೃತರಾಷ್ಟ್ರನಿಗೆ ಹೆಣ್ಣು ಕೊಡಬೇಕೆಂದು ಭೀಷ್ಮ ಸುಬಲ ರಾಜನನ್ನು ಕೇಳಿದ. ಈಗಾಗಲೇ ಕೌರವಂಶದ ಕೀರ್ತಿ ಶ್ರೀಮಂತಿಕೆ, ಭೀಷ್ಮನ ಪರಾಕ್ರಮ ಮುಂತಾದುವುಗಳಿಗೆ ಮನ ಸೋತು ಸುಬಲನು ಗಾಂಧಾರಿಯನ್ನು ಮದುವೆ ಮಾಡಿಕೊಡಲು ಒಪ್ಪಿದನು. ಅಂತೆಯೇ ಗಾಂಧಾರಿಯನ್ನು ಧೃತರಾಷ್ಟ್ರನಿಗೆ ಮದುವೆಯನ್ನು ಮಾಡಿಕೊಟ್ಟ. ಗಾಂಧಾರಿಯಲ್ಲಿ ದುರ್ಯೋದನಾದಿಗಳು 100 ಮಂದಿ ಮಕ್ಕಳು ಜನಿಸಿದರು. ಒಮ್ಮೆ ಸೌಬಲರಾಜನ ಸಹೋದರರು ಮತ್ತು ಮಕ್ಕಳು ಸೇರಿ ತಮ್ಮ ರಾಜ್ಯವನ್ನು ಆಕ್ರಮಣ ಮಾಡಿದರು ಎಂಬ ದುಷ್ಟ ಆಲೋಚನೆ ದುರ್ಯೋಧನನಿಗೆ ಉಂಟಾಯಿತು. ಹೀಗಾಗಿ ಅವರೆಲ್ಲರನ್ನೂ ಯಾವುದೋ ಒಂದು ನೆಪ ಒಡ್ಡಿ ಸೆರೆಮನೆಗೆ ತಳ್ಳಿದ್ದ, ಅವ

ರೆಲ್ಲರನ್ನೂ ಉಪವಾಸ ಕೆಡವಿಯೇ ಸಾಯಿಸಿದ. ಅವರಲ್ಲಿ ಶಕುನಿ ಮಾತ್ರ ತಪ್ಪಿಸಿಕೊಂಡು ಬಂದು ಹೀಗಾಗಿ ತಮ್ಮ ಕಡೆಯವರನ್ನು ಕೊಂದ ಸೇಡನ್ನು ತೀರಿಸಿಕೊಳ್ಳುವ ಸಲುವಾಗಿ ದುರ್ಯೋಧನನ ಮಿತ್ರತ್ವವನ್ನು (ಸ್ನೇಹ) ಮಾಡಿದಂತೆ ನಟಿಸಿದ ಶಕುನಿಮಾಮ. ಅವನು ಯಾವಾಗಲೂ ದುರ್ಯೋಧನನನ್ನು ಹಾಡಿಹೊಗಳುತ್ತಿದ್ದನು. ಅಷ್ಟೇ ಅಲ್ಲ ಸಲಹೆಗಾರನಾದ ಪಾಂಡವರ ಮೇಲೆ ದ್ವೇಷ ಹೆಚ್ಚಾಗುವಂತೆ ಮಾಡಿದ. ಅರಗಿನ ಮನೆಯನ್ನು ಸುಡಲು ಯತ್ನಿಸಿದುದು. ಜೂಜಾಟ, ಗೋ ಗ್ರಹಣ ಇವೆಲ್ಲದರ ಹಿಂದೆ ಶಕುನಿಯ ಕೈವಾಡವಿದ್ದಿತು. ಇವೆಲ್ಲ ದುಷ್ಟಕಾರ್ಯಗಳನ್ನು ದುರ್ಯೋಧನನಿಂದ ಮಾಡಿಸಿ ಅವನ ಪಾಪದ ಕೊಡ ತುಂಬುವಂತೆ ಮಾಡಿದ. ಇವೆಲ್ಲವೂ ಕನಕದಾಸರು ತಿಳಿಸಿರುವ ಮುನ್ನಿನವೈರದಿ ಕಡು ಸ್ನೇಹವ ಮಾಡಿ ಎಂಬ ಸಾಲಿನಲ್ಲಿ ಕನಕದಾಸರು ಅಡಗಿಸಿದ್ದಾರೆ. ಅವನ ಕುಹಕಬುದ್ಧಿ ದುರ್ಯೋಧನನ್ನು ಈ ದುಸ್ಥಿತಿಗೆ ತಂದಿತು.

**ಮರಣ ತನ್ನಿಚ್ಛೆಯೊಳುಳ್ಳ ಗಾಂಗೇಯನು**
**ಧುರದೊಳು ಪಂಡನ ನೆಪದಿಂದಲಿ**
**ಸರಳ ಮಂಚದ ಮೇಲೆ ಮಲಗಿ ಮೊಮ್ಮಗನ**
**ಕೊರಳ ಕೊಯ್ದವನು ಭೀಷ್ಮನೋ ಪಾಂಡವರೋ॥**

ಎಂದು ದಾಸರು ಕೇಳಿದ್ದಾರೆ.

ಗಂಗಾಪುತ್ರರಾದ ಭೀಷ್ಮರು ಕುರುಕುಲ ಪಿತಾಮಹ ಎಂದೆನಿಸಿದರು. ಮದುವೆಯೇ ಆಗದೆ ಪಿತಾಮಹ ಎಂಬ ಸ್ಥಾನವನ್ನು ಗಳಿಸಿದವರು.

ತಂದೆಗಾಗಿ ಮದುವೆಯನ್ನೇ ಮಾಡಿಕೊಳ್ಳದೇ ರಾಜ್ಯವನ್ನು ತ್ಯಾಗ ಮಾಡಿದ ಮಹಾತ್ಯಾಗ ಮೂರ್ತಿ ಭೀಷ್ಮಾಚಾರ್ಯರು. ಪರಶುರಾಮರ ಬಳಿಯಲ್ಲಿ ವ್ಯಾಸಂಗ ಮಾಡಿದರು,ಅಷ್ಟೇ ಅಲ್ಲ ಇಚ್ಛಾಮರಣಿ. ಇವರನ್ನೇ ದುರ್ಯೋಧನ ನೆಚ್ಚಿ ಕೊಂಡಿದ್ದ. ಭೀಷ್ಮಾಚಾರ್ಯರಿಗೆ ದುರ್ಯೋಧನನು ಕೌರವ ಪಕ್ಷದ ಸೇನಾಧಿಪತಿ ಪಟ್ಟವನ್ನು ಕಟ್ಟಿದ ಆದರೆ ತಾವು ಪಟ್ಟ ಸ್ವೀಕರಿಸುವಾಗಲೇ ದಿನಕ್ಕೆ 10000 ಮಂದಿಯನ್ನು ಕೊಲ್ಲಬಲ್ಲೆ. ಆದರೆ ಪಾಂಡವರೊಬ್ಬರ ತಲೆಯನ್ನು ನಾನು ತೆಗೆಯುವುದಿಲ್ಲ ಎಂದು ಹೇಳಿಬಿಟ್ಟರು. ಆ ಸಂದರ್ಭದಲ್ಲಿ ನಿಮ್ಮನ್ನು ಹೇಗೆ ಕೊಲ್ಲಬೇಕೆಂದು ಕೇಳಿದಾಗ ಶಿಖಂಡಿಯನ್ನು ಮುಂದೆ ನಿಲ್ಲಿಸಿರಿ ನಾನು ಶಸ್ತ್ರ ಸಂನ್ಯಾಸ ಮಾಡುತ್ತೇನೆ ಅಂದರೆ ಶಸ್ತ್ರವನ್ನು ಹಿಡಿಯುವುದಿಲ್ಲ ಎಂದರು. ಹಾಗೆಯೇ ಪಾಂಡವರು ಶಿಖಂಡಿಯನ್ನು ನಿಲ್ಲಿಸಿದಾಗ ಅದನ್ನೇ ನೆಪಮಾಡಿಕೊಂಡು ಶಸ್ತ್ರಗಳನ್ನು ಬಿಸುಟು ಬಾಣಗಳ ಹಾಸಿಗೆಯ (ಶರಶಯ್ಯೆ) ಮೇಲೆ ಭೀಷ್ಮಾಚಾರ್ಯರು ಮಲಗಿದರು. ಕೌರವರನ್ನು ಕೊಂದದ್ದು. ಯಾವ ದುರ್ಯೋಧನನ್ನು ಇವರನ್ನೇ ನಂಬಿದ್ದನೋ ಅಂತಹ ಪರಾಕ್ರಮಿ ತೋರಿದ ನೆಪ ನೆಪವೇನು ಎನ್ನುತ್ತಾರೆ ಕನಕದಾಸರು ಭೀಷ್ಮಾಚಾರ್ಯರು ಶ್ರೀಕೃಷ್ಣನನ್ನು ಕಂಡಾಗ ಶರತಲ್ಪದಲ್ಲಿ ಮಲಗಿಯೇ ವಿಷ್ಣು ಸಹಸ್ರನಾಮವನ್ನು ಸ್ತುತಿಸಿ ಕೃತಾರ್ಥರಾದರು.

**ಮಗನ ನೆಪದಿ**
**ಕಾಳಗವ ಬಿಸುಟುಸುರ**
**ನಗರಿಗೈದಲು ವೈರಾಗ್ಯದಲಿ**
**ಜಗವರಿಯಲು**
**ಕುರುವಂಶಕ್ಕೆ ಕೇಡನು**
**ಬಗೆದೆಯ ಕೊಂದವನು**
**ದ್ರೋಣರೋ ಪಾಂಡವರೋ॥3॥**

ದ್ರೋಣಾಚಾರ್ಯರು ಕೌರವರಿಗೂ ಹಾಗೂ ಪಾಂಡವರಿಗೂ ಅಸ್ತ್ರ ಶಸ್ತ್ರದ ಆಚಾರ್ಯರು. ಇವರು ಕುರುಕ್ಷೇತ್ರ ಯುದ್ಧಕ್ಕೆ ಮೊದಲೇ ಇವರ ಬಳಿ ಬಂದು ಸೇನಾವ್ಯೂಹವನ್ನು ರಚಿಸಬೇಕೆಂದು ಹೇಳುವಾಗ ನಿಮ್ಮ ಶಿಷ್ಯರಾದ ದೃಷ್ಟದ್ಯುಮ್ನನೇ ಪಾಂಡವರ ಸೇನಾಪತಿಯಾಗಿದ್ದಾನೆ ಎಂದು ಎಚ್ಚರ ನೀಡುತ್ತಾರೆ. ಅಪ್ರತಿಮ ವೀರರು, ಮಹಾಪರಾಕ್ರಮಿಗಳೂ ಆದ ದ್ರೋಣಾಚಾರ್ಯರು ತನ್ನ ಮಗ ಸತ್ತ ಎಂಬ ಸುದ್ದಿ ಕಿವಿಗೆ ಬಿದ್ದೊಡನೆ ಶಸ್ತ್ರ ಸನ್ಯಾಸ ಮಾಡುತ್ತೇನೆ ಎಂದು ಹೇಳಿದವರು ಇವರು ಅದೇ ಪ್ರಕಾರ **"ಅಶ್ವತ್ಥಾಮೋ ಹತಃ ಕುಂಜರ"**-





ಎಂದು ನುಡಿಯುವಾಗ ಕುಂಜರ ಶಬ್ದ ದ್ರೋಣಾಚಾರ್ಯರ ಕಿವಿಗೆ ಬೀಳದಂತೆ ಜೋರಾಗಿ ಶಂಖವನ್ನು ಊದಿದ ಕೃಷ್ಣ. ಇಲ್ಲಿ **"ಅಶ್ವತ್ಥಾಮೋ ಹತಃ ಎಂಬ ಸುದ್ಧಿ ಕೇಳಿ ಶಸ್ತ್ರ ಸಂನ್ಯಾಸ ಮಾಡಿದವರು ದ್ರೋಣಾಚಾರ್ಯರು. ಅರ್ಜುನನಿಗೆ ಸಮನಾದ ವೀರನಲ್ಲ ಎಂದು ಲೋಕಕ್ಕೆ ಸಾರಿದವರು ದ್ರೋಣಾಚಾರ್ಯರು. ಇವರು ದುರ್ಯೋಧನನ ಪಕ್ಷದಲ್ಲಿದ್ದರೂ ಜಯೋಸ್ತು ಪಾಂಡವಾನಾಂ"** ಎಂದು ಹೇಳಿದವರು ದ್ರೋಣಾಚಾರ್ಯರು. ಹಾಗಾದರೆ ಇವರಿಂದಲೇ ಕೌರವರ ನಾಶವಾಯಿತೇ! ಖಂಡಿತಾ ಇಲ್ಲ ಇದಕ್ಕೂ ಕೃಷ್ಣ ಪರಮಾತ್ಮನೇ ಕಾರಣ.

**ತೊಟ್ಟ ಬಾಣವ ತೊಡಲೊಲ್ಲದೆ ಮಾತೆಗೆ**
**ಕೊಟ್ಟ ಭಾಷೆಗೆ ಐವರ ಕೊಲ್ಲದೆ**
**ನೆಟ್ಟನೆ ರಣಮುಖದಲಿ ತನ್ನ ಪ್ರಾಣವ**
**ಬಿಟ್ಟು ಕೊಂದವನು ಕರ್ಣನೋ**
**ಪಾಂಡವರೋ ।**

ಮದ್ರದೇಶಾಧಿಪತಿಯಾದ ಋತಾಯನ ಎಂಬ ಅರಸನ ಪುತ್ರ ಶಲ್ಯ. ಪಾಂಡುವಿನ ಕಿರಿಯ ಹೆಂಡತಿ ಮಾದ್ರಿಯ ಸಹೋದರ. ಪಾಂಡವರಿಗೆ ಸಹಾಯ ಮಾಡಬೇಕು ಎಂದು ಬರುತ್ತಿದ್ದಾಗ, ದುರ್ಯೋಧನ ಅವನನ್ನು ದಾರಿಯಲ್ಲಿ ಸ್ವಾಗತಿಸಿ ಉಪಚರಿಸಿ ಭಕ್ಷ್ಯ ಭೋಜ್ಯಗಳಿಂದ ಆದರಿಸಿ ಯುದ್ಧದಲ್ಲಿ ತನಗೆ ಸಹಾಯ ಮಾಡಬೇಕೆಂದು ಕೇಳಿಕೊಂಡ ಶಲ್ಯ ಹೀಗೆ ಆಮಿಷಕ್ಕೆ ಒಳಗಾಗಿ ದುರ್ಯೋಧನನ ಬೇಡಿಕೆಯಂತೆ ಕರ್ಣನಿಗೆ ಸಾರಥಿಯಾದ ಕುರುಕ್ಷೇತ್ರ ಮಹಾಯುದ್ಧದಲ್ಲಿ ಕರ್ಣನು ಶಲ್ಯನನ್ನು ಕುರಿತು ಹೀಗೆಂದು ಅಣತಿಯನ್ನಿಟ್ಟರು. ಶಲ್ಯ ಮಹಾರಾಜ ಪಾಂಡವರನ್ನು ಸಂಹರಿಸಲು ಸಾಧ್ಯವಾಗುವಂತೆ ರಥವನ್ನು ನಡೆಸು. ನನ್ನ ಪರಾಕ್ರಮ ಎಂತಹುದು ಎಂಬುದನ್ನು ಪಾಂಡವರಿಗೆ ತೋರಿಸುತ್ತೇನೆ ಎಂದನು. ಅದಕ್ಕೆ ಶಲ್ಯನು ಕರ್ಣವನ್ನು ಕುರಿತು **"ಸೂತಪುತ್ರ ಏನು ಬಾಯಿ ಬಡಾಯಿ ಕೊಚ್ಚುತ್ತೀಯಪ್ಪಾ, ಅರ್ಜುನನ ಗಾಂಢೀವ ಧನುಸ್ಸಿನ ಠೇಂಕಾರವನ್ನು ನೀನು ಕೇಳಿಲ್ಲ. ಆ ಧ್ವನಿಯೇ ನಿನ್ನಂತಹ ವೀರನ ಎದೆಯನ್ನು ಸೀಳಿ ಬಿಡುತ್ತದೆ. ಭೀಮನ ಗಧಾ ಪ್ರಹಾರವಾದರೆ ನಿನ್ನ ಗುರುತು ಕೂಡ ಸಿಗುವುದಿಲ್ಲ. ಯುಧಿಷ್ಠಿರ ನಕುಲ ಸಹದೇವರ ಬಾಣಗಳು ವಾಯುವೇಗವುಳ್ಳದ್ದು"** ಎಂದು ಮುಂತಾಗಿ ಕರ್ಣನ ಬಳಿ ಹೇಳುತ್ತಿದ್ದ ತೇಜೋವಧೆಯನ್ನು ಮಾಡುವ ಮಾತುಗಳನ್ನು ಆಡುತ್ತ ಕರ್ಣನನ್ನೇ ನಿರುತ್ಸಾಹಗೊಳಿಸಿದ.ಸಾಮ,ದಾನ,ಭೇದ,ದಂಡ ಎಂಬ ಉಪಾಯಗಳಲ್ಲಿ ಶಲ್ಯನು ಭೇದೋಪಾಯದಲ್ಲಿ ಯಶಸ್ವಿಯಾದ ಒಮ್ಮೆ ಕರ್ಣ ಸರ್ಪಾಸ್ತ್ರವನ್ನು ಬಿಟ್ಟಾಗ ಅದು ಕೃಷ್ಣನ ಉಪಾಯದಿಂದ ಅರ್ಜುನನ ಕಿರೀಟವನ್ನು ಮಾತ್ರ ಹಾರಿಸಿಕೊಂಡು ಹೋಯಿತು.

ಶಲ್ಯನು ಮತ್ತೆ ಬಾಣವನ್ನು ಬಿಡು ಎಂದಾಗ ಕರ್ಣ **"ತೊಟ್ಟ ಬಾಣವನ್ನು ತೊಡುವುದಿಲ್ಲ"** ಎಂದು ನನ್ನ ತಾಯಿಗೆ ಮಾತನ್ನು ಕೊಟ್ಟಿದ್ದೇನೆ, ಆದ್ದರಿಂದ ಬಿಡುವುದಿಲ್ಲ ಎಂದಾಗ ನನ್ನ ಮಾತು ಕೇಳಲಿಲ್ಲ ಎಂಬ ನೆಪದಿಂದ ಶಲ್ಯ ಸಾರಥ್ಯವನ್ನೇ ಬಿಟ್ಟು ಹೊರಟೇ ಹೋದನು. ದುರ್ಯೋಧನನ ಸೋಲಿಗೆ ಕರ್ಣ ಎಂದು ಹೇಳಲು ಸಾಧ್ಯವೇ ಖಂಡಿತಾ ಇಲ್ಲ.

ಇವೆಲ್ಲಕ್ಕೂ ಜಗನ್ನಾಟಕ ಸೂತ್ರಧಾರಿ ಕೃಷ್ಣನೇ ಎಂದು ಸ್ಪಷ್ಟವಾಗುತ್ತದೆ. ಇದಕ್ಕಿಂತ ಮೊದಲು ಕವಚ ಕುಂಡಲಗಳೊಡನೆ ಹುಟ್ಟಿದ ಕರ್ಣನನ್ನು ಬಳಿ ದೇವೇಂದ್ರನನ್ನು ಕಳುಹಿಸಿ ಅವನಿಂದ ಕವಚ ಕುಂಡಲಗಳನ್ನು ಕಸಿದ ಇಂದ್ರನಿಗೂ ಉಪಾಯವನ್ನು ಸೂಚಿಸಿದವನೇ ಕೃಷ್ಣ ಎಂಬುದರಲ್ಲಿ ಸಂದೇಹವಿಲ್ಲ.

**ಜಲದೊಳು ಮುಳುಗಿ ತಪವ ಮಾಡಿ ಬಲವನು**
**ಛಲದಿಂದೆಬ್ಬಿಸಿ ಕಾದುವೆನೆನುತ**
**ಕಲಿ ಭೀಮಸೇನನ ನುಡಿಗೇಳಿ ಹೊರವಂಟು**
**ಕುಲವ ಕೊಂದವನು ಕೌರವನೋ ಪಾಂಡವರೋ ॥**

ದುರ್ಯೋಧನನು ತಪಸ್ಸನ್ನು ಮಾಡಿ ಯೋಗ್ಯ ವರ ಬಲವನ್ನು ಗಳಿಸಿ ಬಂದು ಯುದ್ಧ ಮಾಡುತ್ತೇನೆ ಎಂದು ದುರ್ಯೋಧನ ವೈಶಂಪಾಯನ ಸರೋವರದಲ್ಲಿ ಅಡಗಿದನು. ದುರ್ಯೋಧನ ಜಲಸ್ತಂಭನ ವಿದ್ಯೆಯನು ಅರಿತಿದ್ದವನು.

(ಎಂದರೆ ಜಲದಲ್ಲಿ ನಿಂತು ತಪಸ್ಸು ಮಾಡುವ ವಿದ್ಯೆ) ಹೀಗಾಗಿ ಈ ವಿದ್ಯೆಯಿಂದ ವರವನ್ನು ಗಳಿಸಬೇಕೆಂದು ವೈಶಂಪಾಯನ ಸರೋವರಕ್ಕೆ ಬಂದು ಇಳಿದನು. ಈ ವಿಷಯವು ಪಾಂಡವರಿಗೆ ತಿಳಿಯಿತು. ಭೀಮಸೇನ ಛಲಯುಕ್ತವಾದ ಮಾತುಗಳನ್ನಾಡಿದ ಅಂಜು ಪುರುಕ ಸುಯೋಧನ ನಿನ್ನಿಂದ ನಿನ್ನವರೆಲ್ಲ ಹತರಾದರು. ಭೀಷ್ಮ,ದ್ರೋಣರನ್ನು ನೀನೇ ಕೊಂದಂತಾಯಿತು. ನಿನ್ನ ತಮ್ಮಂದಿರನ್ನೆಲ್ಲಾ ಬಲಿ ಕೊಟ್ಟೆ ಕೃಷ್ಣ ಸಂಧಾನಕ್ಕೆ ಬಂದಾಗ ಅವನಿಗೆ ಅವಮಾನ ಮಾಡಿದೆ. ಕೃಷ್ಣೆಗೆ (ದ್ರೌಪದಿ) ಅಂದು ಅವಮಾನ ಮಾಡಲು ಪ್ರಯತ್ನಿಸಿದೆ.

ವಿಧುರನ ಹಿತನುಡಿಗಳನ್ನು ನೀನು ಕೇಳಲಿಲ್ಲ. ಧೃತರಾಷ್ಟ್ರನ ಮಾತನ್ನಾಗಲಿ, ಗಾಂಧಾರಿಯ ಮಾತನ್ನಾಗಲಿ ಕೇಳದೆ ತಿರಸ್ಕರಿಸಿದೆ. ನಿನ್ನ ನೆಚ್ಚಿನ ಮಿತ್ರ ಕರ್ಣನನ್ನು ಕೊಲ್ಲಿಸಿದೆ. ಈಗ ನೀನೊಬ್ಬನೇ ಬದುಕಲು ಆಶಿಸಿ ನೀರಿನಲ್ಲಿ ಅಡಗಿ ಕುಳಿತು ಕೊಂಡಿರುವೆಯಾ ಹೇಡಿ, ಎದ್ದು ಬಾ ಯುದ್ಧ ಮಾಡು ಗೆಲ್ಲು ಇಲ್ಲದಿದ್ದರೆ ಮಡಿ, ಅದು ವೀರನ ಲಕ್ಷಣ, ಎಂದಾಗ ದುರ್ಯೋಧನನು **"ನೀರೊಳಗಿರ್ದು ಬೆಮರ್ದನ್"** ಎಂದು ಬಣ್ಣಿಸಿದ್ದಾನೆ. ಇದೆಂತಹ ಶೌರ್ಯದ ಸನ್ನಿವೇಶ. ಭೀಮನ ಕಡುನುಡಿಗಳಿಂದ ದುರ್ಯೋಧನನು ವೈಶಂಪಾಯನ ಸರೋವರದಿಂದ ಎದ್ದು ಬಂದ. ಹೀಗಾಗಿ ಅವನ ಸಾವಿಗೆ ಅವನೇ ಕಾರಣನಲ್ಲವೇ. ಖಂಡಿತಾ ಇಲ್ಲ ಇದೂ ಸಹ ಶ್ರೀಕೃಷ್ಣನ ಪೂರ್ವ ಯೋಚನೆ, ಯೋಜನೆ ಎಂಬುದರಲ್ಲಿ ಸಂದೇಹವಿಲ್ಲ.

**ಕೌರವ ಪಾಂಡವರಿಗೆ ಭೇದ ಪುಟ್ಟಿಸಿ**
**ಫೌಜೊಡ್ಡಿ ಕುರುಕ್ಷೇತ್ರದಿ ಕಾದಿಸಿ**
**ದವ ಸಂಶಯವಿಲ್ಲದೆ ಕುರುಬಲವ ಕೊಂದವನು**
**ಕಾಗಿನೆಲೆಯಾದಿ ಕೇಶವನೋ ಪಾಂಡವರೋ।**

ಇವೆಲ್ಲಾ ಘಟನೆಗಳಿಗೆ ಕಾರಣ ಶ್ರೀಕೃಷ್ಣ ಪರಮಾತ್ಮ ಭೂಭಾರವನ್ನು ಹರಣ ಮಾಡಲು ಅವತರಿಸಿದವನು ಶ್ರೀಕೃಷ್ಣ ಎಂಬುದು ಇಲ್ಲಿ ಸ್ಪಷ್ಟವಾಗುತ್ತದೆ. ಶ್ರೀಕೃಷ್ಣ ಪಾಂಡವರ ಜೂಜಾಟದ ಸಮಯದಲ್ಲಿ ತಿಳಿದಿದ್ದರೂ ಏನೂ ತಿಳಿಯದವನಂತೆ ಸುಮ್ಮನೇ ಇದ್ದ ಪಾಂಡವರಿಗೆ ಸೋಲಾಗುವಂತೆ ಮಾಡಿದ. ದ್ರೌಪದಿಯ ವಸ್ತ್ರಾಪಹರಣ ಸಂದರ್ಭದಲ್ಲಿ **"ಶಂಖ ಚಕ್ರ ಗಧಾಪಾಣೇ ದ್ವಾರಕಾ ನಿಲಯಾಚ್ಯುತ ಗೋವಿಂದ ಪುಂಡರೀಕಾಕ್ಷ ರಕ್ಷಮಾಂ ಶರಣಾಗತಂ"**

ಎಂದು ಶ್ರೀಕೃಷ್ಣನಲ್ಲಿ ಮೊರೆ ಹೊಕ್ಕಾಗ ಅವಳ ಕರೆಗೆ ಓಗೊಟ್ಟು ಅಕ್ಷಯಾಂಬರವನ್ನಿತ್ತು ರಕ್ಷಿಸಿದ ವನವಾಸದಲ್ಲಿ ಪಾಂಡವರು ಇದ್ದಾಗ ಆಗಾಗ ದರ್ಶನವ ನೀಡಿದ. ಮಮ ಪ್ರಾಣಾ ಹಿ ಪಾಂಡವಾಂ ಎಂದು ಹೇಳಿದ ಭಕ್ತವತ್ಸಲ, ಭಕ್ತ ಪರಾಧೀನನಲ್ಲವೇ ಶ್ರೀಕೃಷ್ಣ? ಇಷ್ಟೇ ಅಲ್ಲ.

ಅಜ್ಞಾತವಾಸದಲ್ಲಿ ಪಾಂಡವರ ಗುರುತು ಯಾರಿಗೂ ಸಿಗದಂತೆ ಮಾಡಿದ. ನಂತರ ಪಾಂಡವರ ದೂತನಾಗಿ ಸಂಧಾನಕ್ಕೆ ಹೋಗಿ ವಿಫಲನಾದವನಂತೆ ನಟಿಸಿ ಯುದ್ಧವನ್ನು ಘೋಷಿಸಿದ ಕುಂತಿಯ ಮೂಲಕ ಕರ್ಣನಿಗೆ ಸೂರ್ಯ ಪುತ್ರನೆಂದು ಜನ್ಮ ರಹಸ್ಯವನ್ನು ತಿಳಿಸಿದ ದುರ್ಯೋಧನನಾದಿಗಳ ಆತಿಥ್ಯವನ್ನು ಸ್ವೀಕರಿಸಿದದೆ ವಿದುರನ ಮನೆಯಲ್ಲಿ ಪಾಲುಂಡು ಅತಿಥಿಸತ್ಕಾರ ಮಾಡಿಸಿಕೊಂಡ ಪಾಂಡವರಲ್ಲಿ ಅರ್ಜುನನ ರಥಕ್ಕೆ ಸಾರಥಿಯಾಗಿ ಕುಳಿತು ತಾನು ಯುದ್ಧ ಮಾಡುವುದಿಲ್ಲವೆಂದು ಅರ್ಜುನನಿಗೆ ಗೀತೆಯನ್ನು ಉಪದೇಶಿಸಿದ.

ಅವನಿಗೆ ವಿಶ್ವರೂಪ ತೋರಿಸಿದ. ಯುದ್ಧ ಮಾಡಿಸಿದ ಚಕ್ರವ್ಯೂಹಕ್ಕೆ ನುಗ್ಗಿದ ಅಭಿಮನ್ಯುವನ್ನು ಸರ್ವಜ್ಞನಾದ ಶ್ರೀಕೃಷ್ಣ ರಕ್ಷಿಸದೆ ನಾಟಕವನ್ನಾಡಿದ. ಪರರಿಗೆ ಸಂಜೆಯನ್ನು ತೋರಿ ಜಯದ್ರಥನನ್ನು ಅರ್ಜುನನಿಂದ ಕೊಲ್ಲಿಸಿದ.

ಕರ್ಣನ ರಥದ ಚಕ್ರ ರಕ್ತದ ಮಡುವಿನಲ್ಲಿ ಹೂತು ಹೋಗಿದ್ದಾಗ ಬಾಣ ಬಿಡು ಎಂದು ಅರ್ಜುನನ ಕೈಯಲ್ಲಿ ಕರ್ಣನನ್ನು ಕೊಲ್ಲಿಸಿದ. ಹೀಗೆ ಕೌರವರ ಪಾಂಡವರ ಯುದ್ಧದಲ್ಲಿ ಪ್ರದಾನ ಸೂತ್ರಧಾರಿ ಯಾಗಿ ಮೆರೆದವನು ಶ್ರೀಕೃಷ್ಣಪರಮಾತ್ಮ, ಅವನೇ ಕಾಗಿಲೆ ಯಾದಿ ಕೇಶವ. ಆದರೆ ಪಾಂಡವರು ಕೌರವರನ್ನು ಕೊಂದರು ಎಂದು ಈ ಜಗತ್ತು ತಿಳಿದಿದೆ.

ಇದು ಸರಿಯಲ್ಲ ಎಂದು ಕನಕ ದಾಸರು ಮಹಾಭಾರತದ ಕುರುಕ್ಷೇತ್ರದ ಒಂದೊಂದು ಪ್ರಸಂಗಗಳನ್ನು ವಿವರಿಸುತ್ತಾ ಶ್ರೀಕೃಷ್ಣ ಪರಮಾತ್ಮನೇ ಇವೆಲ್ಲಕ್ಕೂ ಕಾರಣಕರ್ತ ಎಂದು ದೃಢಪಡಿಸಿದ್ದಾರೆ. ಇಂತಹ **'ಕೃಷ್ಣಚರಿತಾಮೃತ'**ವನ್ನು ನಾವು ಪಠಿಸಿ ಕೃತಾರ್ಥರಾಗೋಣ.



# ಹುಲ್ಲಹಳ್ಳಿಯ ವರದರಾಜಸ್ವಾಮಿ

- ಕೆಂಗೇರಿ ಚಕ್ರಪಾಣಿ
94483 86886



ಹುಲ್ಲಹಳ್ಳಿಯು ನಂಜನಗೂಡಿನಿಂದ ಪೂರ್ವಕ್ಕೆ ನಂಜನಗೂಡು -ಹೆಗ್ಗಡದೇವನ ಕೋಟೆ ರಸ್ತೆಯಲ್ಲಿರುವ ಒಂದು ಊರು ಶಾಸನಗಳಲ್ಲಿ ಹುಲ್ಲಹಳ್ಳಿಯನ್ನು ಸಂಸ್ಕೃತೀಕರಿಸಿ ತೃಣಪುರವೆಂದು ಕರೆಯಲಾಗಿದೆ. ಇಲ್ಲಿ ಹೊಯ್ಸಳರ ಮೂರನೆಯ ಬಲ್ಲಾಳನ ಕಾಲದಲ್ಲಿ ಮಾಧವ ದಂಡನಾಯಕನ ಮಗ ಕೇತೆಯ ದಂಡನಾಯಕ ಆಡಳಿತ ನಡೆಸಿದ್ದನು. ಈ ಗ್ರಾಮದಲ್ಲಿ ಜೈನ ಬಸದಿಯಿದ್ದುದಕ್ಕೆ ಶಾಸನಾಧಾರವಿದೆ. ಇಲ್ಲಿ ಜೈನಕವಿ ಧರ್ಮನಾಥ ಪುರಾಣದ ಕರ್ತೃ ಬಾಹುಬಲಿ ಪಂಡಿತದೇವನು ಸಮಾಧಿ ಮರಣವನ್ನು ಹೊಂದಿರುತ್ತಾನೆ. ಆದರೆ ಈಗ ಇಲ್ಲಿ ಜೈನ ಬಸದಿಗಳು ನಾಮಾವಶೇಷವಾಗಿದೆ.

## ವರದರಾಜಸ್ವಾಮಿ ದೇವಾಲಯ:

ಹುಲ್ಲಹಳ್ಳಿ ಗ್ರಾಮದ ಮಧ್ಯದಲ್ಲಿರುವ ವರದರಾಜಸ್ವಾಮಿ ದೇವಾಲಯವು ಒಂದು ಬೃಹದಾಕಾರದ ಆಲಯವಾಗಿರುವುದು. ದೇವಾಲಯವು ಗರ್ಭಗೃಹ, ಅಂತರಾಳ ಸಾಂದಾರ ಶೈಲಿಯ ಪ್ರದಕ್ಷಿಣಾಪಥ, ರಂಗಮಂಟಪ, ಮಹಾರಂಗ ಮಂಟಪ ಹಾಗೂ ಪ್ರವೇಶದ್ವಾರಗಳನ್ನು ಹೊಂದಿದೆ. ಈ ದೇವಾಲಯವು ಮೂಲತಃ ಹೊಯ್ಸಳರ ಕಾಲದ್ದೆನ್ನುವುದಕ್ಕೆ ಶಾಸನಾಧಾರವಿದೆ. ಸಾ.ಶ. 1332 ರಲ್ಲಿ ತೆರಕಣಾಂಬಿಯನ್ನು ಆಳುತ್ತಿದ್ದ ಕೇತಯ ದಂಡನಾಯಕನು ವರದರಾಜ ಸ್ವಾಮಿಯ ಸೇವಾ ಕೈಂಕರ್ಯಕ್ಕಾಗಿ ಕೇತಂಬಳ್ಳಿ ಎಂಬ ಗ್ರಾಮವನ್ನು ದತ್ತಿಯಾಗಿ ನೀಡಿದ್ದನ್ನು ಹೀಗಾಗಿ ಸಾ.ಶ.1332 ಕ್ಕಾಗಲೆ ವರದರಾಜ ದೇವಾಲಯವು ಅಸ್ತಿತ್ವದಲ್ಲಿತ್ತು ಎಂದು ಖಚಿತವಾಗಿ ಹೇಳಬಹುದು. ದೇವಾಲಯವು ವಿಜಯನಗರ ಹಾಗೂ ಮೈಸೂರು ಒಡೆಯರ ಕಾಲದಲ್ಲಿ ವಿಸ್ತರಣೆಗೊಂಡಿದೆ. ದೇವಾಲಯದಲ್ಲಿ ಹೊಯ್ಸಳ ಶೈಲಿಯಲ್ಲಿರುವ ಅಲಂಕೃತ ಪ್ರಭಾವಳಿಯನ್ನು ಹೊಂದಿರುವ ಸುಂದರವಾದ ವರದರಾಜ ಸ್ವಾಮಿಯ ಮೂರ್ತಿಯಿದೆ.

ಈ ದೇವಾಲಯದ ಮೂಲ ಗರ್ಭಗುಡಿಯ ದಕ್ಷಿಣ ದಿಕ್ಕಿನಲ್ಲಿ ಸುಮಾರು ಐದು ಅಡಿ ಎತ್ತರದ ಯೋಗಾನರಸಿಂಹನ ಮೂರ್ತಿಯಿದೆ. ಶಂಖ, ಚಕ್ರ ಧರಿಸಿರುವ ನರಸಿಂಹನು ಯೋಗ ಪಟ್ಟಿಯನ್ನು ಹಾಕಿಕೊಂಡು ಕುಳಿತಿದ್ದು ದೇವನ ಇಕ್ಕೆಲಗಳಲ್ಲಿ ಶ್ರೀದೇವಿ, ಭೂದೇವಿಯರ ಬಿಡಿ ಶಿಲ್ಪಗಳಿವೆ. ವಿಗ್ರಹಗಳ ಅಲಂಕರಣ ಶೈಲಿಯಿಂದಾಗಿ ಇದು ಚೋಳರಕಾಲದ ಮೂರ್ತಿಯಿರಬಹುದು. ಶ್ರೀದೇವಿ-ಭೂದೇವಿ ಸಹಿತನಾದ ಯೋಗಾನರಸಿಂಹನ ಬಿಡಿ ಶಿಲ್ಪಗಳಿರುವ ಮೂರ್ತಿಯು ಬಹಳ ವಿಶೇಷವಾಗಿರುವುದನ್ನು ಗಮನಿಸಬಹುದು. ದೇವಾಲಯದಲ್ಲಿ ಆಳ್ವಾರುಗಳು, ವೇಣುಗೋಪಾಲ,ಕಾಳಿಂಗಮರ್ದನರ ಮೂರ್ತಿಗಳಿವೆ. ಕಾಳಿಂಗ ಮರ್ದನ ಕೃಷ್ಣನ ಮೂರ್ತಿಯು ಬಹಳ ಸುಂದರವಾದ ಮೂರ್ತಿಯಾಗಿರುವುದು.



ಈ ದೇವಾಲಯದ ಎದುರಿನಲ್ಲಿರುವ ಕಲ್ಯಾಣ ಮಂಟಪದ ಕಂಬಗಳ ಮೇಲೆ ರಾಮ,ಲಕ್ಷ್ಮಣ,ಸೀತೆ ಮುಂತಾದ ದೇವತೆಗಳ ಶಿಲ್ಪಗಳನ್ನು ಸೊಗಸಾಗಿ ಕೆತ್ತಲಾಗಿದೆ.

ವರದರಾಜಸ್ವಾಮಿಯ ದೇವಾಲಯದಲ್ಲಿರುವ ಪ್ರವೇಶ ದ್ವಾರದ ಮರದ ಕೆತ್ತನೆಗಳು ಗಮನ ಸೆಳೆಯು



ತ್ತದೆ. ದೇವಾಲಯದಲ್ಲಿರುವ ವಿಜಯನಗರ ಕಾಲದ ಸುಮಾರು ಎಂಟು ಅಡಿ ಎತ್ತರದ ದ್ವಾರಪಾಲಕ ಶಿಲ್ಪಗಳು ದೇವಾಲಯದ ಅಂದವನ್ನು ಮತ್ತಷ್ಟು ಶ್ರೀಮಂತಗೊಳಿಸಿವೆ.

### ಮಲ್ಲೇಶ್ವರ ದೇವಾಲಯ

ಹುಲ್ಲಹಳ್ಳಿಯಲ್ಲಿರುವ ಮತ್ತೊಂದು ಪ್ರಮುಖ ದೇವಾಲಯ ಮಲ್ಲೇಶ್ವರ ದೇವಾಲಯವಾಗಿರುವುದು ಹುಲ್ಲಹಳ್ಳಿಯ ಹೊರ ವಲಯದಲ್ಲಿ ಪೂರ್ವಾಭಿಮುಖವಾಗಿರುವ ದೇವಾಲಯ ಮೂಲತಃ ವಿಜಯನಗರ ಕಾಲದ್ದು. ಸಾ.ಶ.1619ಶಾಸನದಲ್ಲಿ ಮಲ್ಲೇಶ್ವರ ದೇವಾಲಯ ಮತ್ತು ವರದರಾಜ ದೇವಾಲಯಗಳಿಗೆ ಬಸವರಾಜ ಒಡೆಯನೆಂಬವನು ದತ್ತಿಬಿಟ್ಟ ಉಲ್ಲೇಖವಿದೆ.

ಈ ದೇವಾಲಯದ ಪ್ರಾಕಾರದಲ್ಲಿ ಸಣ್ಣ ಗುಡಿಗಳಿದ್ದು ಶಿವಲಿಂಗಗಳ ಸಾಲಿದೆ. ನವರಂಗದಲ್ಲಿರುವ ಆರು ಅಡಿ ಎತ್ತರದ ನಂದಿಯ ಶಿಲ್ಪ,ಶೈವ ದ್ವಾರಪಾಲಕರಾದ ಶಂಖನಿಧಿ, ಪದ್ಮನಿಧಿಯರ ಶಿಲ್ಪಗಳು ನೋಡುಗರನ್ನು ಮನಸೂರೆಗೊಳಿಸುತ್ತದೆ. ಇದು ವಿಜಯನಗರದ ಅರಸರ ಕಾಲದ ಒಂದು ಶ್ರೇಷ್ಠ ಕೃತಿಯೆಂದು ವಿದ್ವಾಂಸರ ಪ್ರಶಂಸೆಗೊಳಗಾಗಿದೆ.

### ಮಾರುತಿ ದೇವಾಲಯ

ಹುಲ್ಲಹಳ್ಳಿಯ ವರದರಾಜಸ್ವಾಮಿಯ ದೇವಾಲಯದ ಸಮೀಪ ಮಾರುತಿ ಮಂದಿರವಿದೆ. ಸುಮಾರು ಐದು ಅಡಿಗಳು ಎತ್ತರವಿರುವ ಮಾರುತಿಯು ಶಿಲಾ ಹಲಗೆಯ ಮೇಲೆ ಉಬ್ಬು ಶಿಲ್ಪವಾಗಿ ರೂಪುಗೊಂಡಿದೆ. ಮಾರುತಿಯು ಎಡಪಾರ್ಶ್ವಕ್ಕೆ ತಿರುಗಿದ್ದರೂ ಎರಡೂ ನೇತ್ರಗಳು ಗೋಚರಿಸುವುದು ವಿಶೇಷ. ಹನುಮನ ಎತ್ತಿದ ಬಲಗೈ ಅಭಯ ಹಸ್ತದಲ್ಲಿದ್ದು ಎಡಗೈಯಲ್ಲಿ ಸೌಗಂಧಿಕಾ ಪುಷ್ಪವಿದೆ. ಮಾರುತಿಯ ಶಿರದ ಇಕ್ಕೆಲಗಳಲ್ಲಿ ಚಕ್ರ, ಶಂಖಗಳಿವೆ. ಹುಲ್ಲಹಳ್ಳಿಯ ಮಾರುತಿಯು ಅಪಾರ ಸಂಖ್ಯೆಯ ಭಕ್ತ ವೃಂದವನ್ನು ಹೊಂದಿರುತ್ತಾನೆ. ಪ್ರತಿ ಶನಿವಾರ ಹಾಗೂ ಶ್ರಾವಣ ಮಾಸದಲ್ಲಿ ಮಾರುತಿಗೆ ವಿಶೇಷ ಪೂಜಾ ಕೈಂಕರ್ಯಗಳು ಜರಗುತ್ತವೆ.

### ಹೀಗೆ ಬನ್ನಿ :

ನಂಜನಗೂಡು ತಾಲ್ಲೂಕು ಹುಲ್ಲಹಳ್ಳಿಗೆ ಮೈಸೂರಿನಿಂದ ಬರಲು ಎರಡು ಮಾರ್ಗಗಳಿವೆ. ಮೈಸೂರಿನಿಂದ ಹೆಗ್ಗಡದೇವನ ಕೋಟೆ ರಸ್ತೆಯಲ್ಲಿ ಸುಮಾರು ಹನ್ನೆರಡು ಕಿ.ಮೀ. ದೂರ ಬಂದರೆ ಉದ್ಬೂರು ಎಂಬ ಗ್ರಾಮವು ಸಿಗುತ್ತದೆ. ಇಲ್ಲಿ ಎಡಕ್ಕೆ ತಿರುಗಿ ರಾಂಪುರದ ಮೂಲಕ ಹುಲ್ಲಹಳ್ಳಿಯನ್ನು ಸೇರಬಹುದು. ಒಟ್ಟು ದೂರ ಮೂವತ್ತೈದು ಕಿ.ಮೀ. ಆಗುವುದು ಮತ್ತೊಂದು ಮಾರ್ಗ ಮೈಸೂರಿನಿಂದ ನಂಜನಗೂಡಿಗೆ ಬಂದು, ನಂಜನಗೂಡು ಹೆಗ್ಗಡದೇವನಕೋಟೆ ರಸ್ತೆಯನ್ನು ಸೇರಿ ಹುಲ್ಲಹಳ್ಳಿಗೆ ಬರಬಹುದು.





# ಶ್ರೀ ವೆಂಕಟೇಶ್ವರ ಸ್ವಾಮಿಯವರ ಆಲಯ

- ಡಿ॥ ಪಿ.ಎನ್.ಶ್ರೀನಿವಾಸನ್

**ಕಳೆದ ಸಂಚಿಕೆಯಿಂದ**

### ಭೋಗ ಶ್ರೀನಿವಾಸ :

ಈ ವಿಗ್ರಹ ಬೆಳ್ಳಿಯದಾಗಿದ್ದು ಕ್ರಿ.ಶ.966ರಲ್ಲಿ ಪಲ್ಲವ ರಾಣಿ ಸಾಮವೈ ನೀಡಿದುದಾಗಿದೆ. ದೇವಾಲಯದ ಉತ್ತರ ಪ್ರಾಕಾರದ ಗೋಡೆಯ ಮೇಲಿನ ತಿರುಮಲೆಯ ಆಲಯದ ಅತಿ ಪ್ರಾಚೀನ ಶಾಸನದಲ್ಲಿ ಈ ವಿಷಯ ಉಕ್ತವಾಗಿದೆ. ಈ ಶಾಸನವು ಕಾಡವನ್ ಪೆರುಂದೇವಿ ಎಂದೂ ಹೆಸರಾಗಿದ್ದ ಸಾಮವೈ ಎಂಬ ಶಕ್ತಿ ವಿಟಂಕನ ಪತ್ನಿಯಾದ ಈಕೆ ದೊರೆ ಕೊಪ್ಪಾಟ್ರ ಮಹೇಂದ್ರ ಪೆನ್ಮಾರನ ಆಳ್ವಿಕೆಯ ಹದಿನಾಲ್ಕನೆಯ ವರ್ಷದಲ್ಲಿ ತಿರುಮಲೆಯಲ್ಲಿ ಪ್ರತಿದಿನದ ನೈವೇದ್ಯಕ್ಕಾಗಿ ನಾಲ್ಕು ನಾಳಿ ತಿರುವಮುದುಕ್ಕೆಂದೂ,ನಂದಾದೀಪಕ್ಕಾಗಿಯೂ, ಎರಡು ಆಯನ ಸಂಕ್ರಾಂತಿಗಳಲ್ಲಿ ತಿರುಮಂಜನಕ್ಕಾಗಿಯೂ ಮತ್ತು ಪುರಟ್ಟಾಸಿಯ ಒಂಭತ್ತು ದಿನದ ಉತ್ಸವದ ಮೊದಲ ಎರಡು ದಿನಗಳ ಉತ್ಸವಕ್ಕಾಗಿಯೂ, ಈ ವಿಗ್ರಹವನ್ನು ಪವಿತ್ರವಾದ ವೆಂಕಟನಗರದ ತಿರುವಿಳಂಕೋಯಿಲ್ (ತಿರುಮಲೆಯ ಆಲಯದಲ್ಲಿ ಗರ್ಭಗೃಹವನ್ನು ಅಂದು ಹೆಸರಿಸಿದ ರೀತಿ) ನಲ್ಲಿ ಪ್ರತಿಷ್ಠಾಪಿಸಿದುದಾಗಿ ತಿಳಿಸುತ್ತದೆ. ಆಕೆ 47 ಕಳಂಜುಗಳ ಸ್ವರ್ಣಾಭರಣಗಳನ್ನೂ ಜೊತೆಗೇ ನೀಡಿದ್ದಾಳೆ. ಮಣವಾಳಪ್ಪೆರುಮಾಳ್ ಎಂದು ಹೆಸರಾದ ಕೌತುಕಭೇರಕ್ಕೆಂದು ಭೂಮಿಯನ್ನೂ ದತ್ತಿ ಬಿಡಲಾಯಿತು. ಆಲಯದ ಅಧಿಕಾರಿಗಳಿಗೆ (ಮಡಪತ್ಯಂ) ಈ ಸೇವೆಗಳನ್ನು ನಡೆಸಿಕೊಂಡು ಬರಲೂ, ಸಭೈಯಾರರು ದತ್ತಿ ನೀಡಿದ ಭೂಮಿಯು ಕರ ಮುಕ್ತವಾಗಿರುವಂತೆ ರಕ್ಷಿಸಬೇಕೆಂದೂ ಆಜ್ಞೆ ಮಾಡಲಾಯಿತು.

ಶ್ರೀನಿವಾಸನಿಗೆ ಶಂಖ, ಚಕ್ರಗಳು ಶಾಶ್ವತವಾಗಿ ಸೇರಿಹೋಗಿರುವುದರ ಹೊರತು, ಕೌತುಕಭೇರ ಮೂಲ ಬೇರದ ಯಥಾವತ್ ಪ್ರತಿರೂಪವಾಗಿದೆ. ಕೌತುಕಭೇರದ ಪೀಠದಲ್ಲಿ ಪಾದಗಳ ಕೆಳಗೆ ಸಮಕೋನ ತ್ರಿಭುಜಗಳೆರಡು ಒಂದರೊಳಗೊಂದು ಸೇರಿದಂತಿರುವ ಯಂತ್ರವನ್ನು ಕೆತ್ತಲಾಗಿದೆ. ಮೂಲ ದೇವರ ವಿಗ್ರಹದಲ್ಲೂ ಇಂತಹ ಒಂದು ಯಂತ್ರ ಇದ್ದಿರಬಹುದಾದ ಸಂಭಾವ್ಯತೆ ಉಂಟು. ನಮ್ಮಾಳ್ವಾರರು ತಮ್ಮ 3-4-4 ನೇ ಪಾಶುರದಲ್ಲಿ ತಿರುವೆಂಗಡಮುಡೈ ಯಾನನಿಗೆ ಕಾಂತಿ ಹೊರಚಿಮ್ಮುವ ಸುಂದರವಾದ ಪಾದಗಳೂ ಕೈಗಳೂ ಇವೆಯೆಂದು ವರ್ಣಿಸಿದ್ದಾರೆ. ಇದು ಷಡ್ಗುಣ ಯಂತ್ರವನ್ನು ಪ್ರತಿನಿಧಿಸಿರಬಹುದು. ಮಣವಾಳಪ್ಪೆರುಮಾಳ್ ಪ್ರತಿಮೆಯ ಪ್ರತಿಷ್ಠೆಗಿಂತ ಎರಡು ಶತಮಾನಗಳ ಮೊದಲಿಗೆ ಹಾಡಿದವರು ನಮ್ಮಾಳ್ವಾರರು. ವೈಖಾನಸಆಗಮದಲ್ಲಿ ಗುರುತಿಸಲಾಗಿರುವ ವ್ಯೂಹ,ಪರ,ಮೂರ್ತಿಗಳ ಆರು ಗುಣಗಳನ್ನು ಈ ರೀತಿಯ ಯಂತ್ರ ಪ್ರತಿನಿಧಿಸಬಹುದು.

ಭೋಗ ಶ್ರೀನಿವಾಸನಿಗೆ ಪ್ರತಿನಿತ್ಯವೂ ಮಂತ್ರೋಕ್ತ ಅಭಿಷೇಕ ನಡೆಯುವುದು. ಮೂಲಮೂರ್ತಿಗೆ ಶುಕ್ರವಾರಗಳಲ್ಲಿ ಮಾತ್ರವೇ ಅಭಿಷೇಕ.

ರಾತ್ರಿಯ ಹೊತ್ತು ಈ ಮೂರ್ತಿಯನ್ನು ಪರ್ಯಂಕಾಸನದಲ್ಲಿ ಶಯನಗೊಳಿಸಲಾಗುತ್ತದೆ. ಪ್ರತಿರಾತ್ರಿ ಏಕಾಂತ ಸೇವೆಯಲ್ಲಿ ಈ ವಿಗ್ರಹವನ್ನು ಸಾಯಣಮಂಟಪದ ಉಯ್ಯಾಲೆಯಲ್ಲಿ ಆಸೀನಗೊಳಿಸಿ,ತಾಳ್ಳಪಾಕ ಕವಿಗಳ ಕೀರ್ತನೆಗಳ ಸಂಗೀತದ ಹಿನ್ನೆಲೆಯಲ್ಲಿ ಹಾಲೂ ನಿವೇದನವಾಗುತ್ತದೆ, ಪ್ರತಿ ರಾತ್ರಿ ಈ ದೇವರಿಗೆ ಗಂಧವನ್ನೂ ಪೂಸಲಾಗುತ್ತದೆ. ಆಲಯದ ಒಂದು ವಿಶೇಷವೆಂದರೆ ಧರ್ನುಮಾಸದ ಹೊರತು ಮಿಕ್ಕ ಎಲ್ಲ ತಿಂಗಳಿನಲ್ಲೂ ಈ ಮೂರ್ತಿಗೆ ಏಕಾಂತಸೇವೆ ನಡೆಯುವುದು. ಧನುರ್ಮಾಸ ದಲ್ಲಿ ಮಾತ್ರ ಶ್ರೀಕೃಷ್ಣಸ್ವಾಮಿಗೆ ಏಕಾಂತಸೇವೆಯಾಗುವುದು.

ಮೂಲ ಮೂರ್ತಿಯೊಡನೆ ಅತಿ ಸನ್ನಿಹಿತವಾಗಿ ಒಂದು ರೇಷ್ಮೆ ಸೂತ್ರದಿಂದ ಈ ಮೂರ್ತಿಯನ್ನು ಸೇರಿಸ

ಲಾಗಿದೆ. ಉತ್ಸವ ಸಮಯಗಳಲ್ಲಿ ಗರ್ಭಗೃಹದಿಂದ ಈ ವಿಗ್ರಹವನ್ನು ಹೊರ ತಂದಾಗ ಒಂದು ಸ್ವರ್ಣದ ಕೊಂಡಿಯಿಂದಲೂ ರೇಷ್ಮೆ ಸೂತ್ರದಿಂದಲೂ ಮೂಲವರರೊಡನೆ ಸಂಬಂಧವನ್ನೂ ಸ್ಥಾಪಿಸಲಾಗುತ್ತದೆ.

**2. ಉಗ್ರ ಶ್ರೀನಿವಾಸ :**

ಈ ವಿಗ್ರಹವನ್ನು ಪ್ರಾಚೀನಕಾಲದಲ್ಲಿ ವೆಂಕಟತ್ತುರೈವಾರ್ ಎಂದು ಕರೆಯಲಾಗುತ್ತಿತ್ತು. ಉಗ್ರಶ್ರೀನಿವಾಸ ದೇವರ ಕೋಪದ ಪ್ರತಿನಿಧಿ. ಧ್ರುವಭೇರದ ಹೊರತು ಪ್ರಾಯಶಃ ಇದೇ ಆಲಯದ ಅತ್ಯಂತ ಪ್ರಾಚೀನ ವಿಗ್ರಹವಾಗಿದ್ದು ಮೊದಲಿಗೆ ಉತ್ಸವಮೂರ್ತಿಯಾಗಿ ಬಳಕೆಯಲ್ಲಿರಬೇಕು. ಏಳು ಅಂಗುಲ ಎತ್ತರದ ಪೀಠದ ಮೇಲೆ 18 ಅಂಗುಲ ಎತ್ತರಕ್ಕೆ ನಿಂತ ಮೂರ್ತಿ. ಇದರ ಚಕ್ರ ತುಸು ತಿರುಗಿದ್ದು ಪ್ರಾಯಶಃ ಪ್ರಯೋಗ ಚಕ್ರವಾಗಿದೆ ಎನ್ನಬೇಕು ನಿಂತ ಭಂಗಿಯಲ್ಲಿನ ಶ್ರೀದೇವಿ ಭೂದೇವಿಯರನ್ನೂ ಕಾಣಬಹುದು.

ಭೋಗ ಶ್ರೀನಿವಾಸನ ಪ್ರತಿಷ್ಠೆಯಾಗುವ ಮೊದಲು ಆಲಯದ ಉತ್ಸವಮೂರ್ತಿ ಇದಾಗಿತ್ತು ಎಂಬುದನ್ನು ತಮಿಳಿನ ಸಮಾಸ ಪದ ವೆಂಗಡತ್ತುರೈವಾರ್ ಎಂಬುದು ತಿಳಿಸುತ್ತದೆ. ಈಗ ಮೂರು ಸಂದರ್ಭಗಳಲ್ಲಿ ಉಗ್ರ ಶ್ರೀನಿವಾಸ ಮಾತ್ರವೇ ಇರುವಂತೆ ಇದೆ. ಅವುಗಳೆಂದರೆ ಉತ್ಥಾನ ಏಕಾದಶಿ, ಮುಕ್ಕೋಟಿ ದ್ವಾದಶಿ, ಹಾಗೂ ದ್ವಾದಶಾರಾಧನೆ. ಪರಂಪರೆಯ ಹೇಳಿಕೆಯಂತೆ ಸೂರ್ಯಕಿರಣಗಳು ಈ ವಿಗ್ರಹವನ್ನು ತಾಕಬಾರದು. ಹಾಗೇನಾದರೂ ತಾಕಿದರೆ ವಿಶ್ವಕ್ಕೆ ಆಪತ್ತುಂಟಾಗುವುದು

**3. ಕೊಲುವು ಶ್ರೀನಿವಾಸ :**

ಪ್ರತಿದಿನ ತೋಮಾಲೆ ಸೇವೆಯಾದ ನಂತರ ತಿರುಮಾಮಣಿ ಮಂಟಪದಲ್ಲಿ ದರ್ಬಾರ್ ನಡೆಯುತ್ತದೆ. ಇದಕ್ಕೆಂದು ಗರ್ಭ ಗೃಹದಿಂದ ಸ್ವಾಮಿಯನ್ನು ಕರೆತಂದು ಬೆಳ್ಳಿಯ ಸಿಂಹಾಸನದಲ್ಲಿ ಶ್ವೇತಛತ್ರ ದಡಿಯಲ್ಲಿ ಆಸೀನಗೊಳಿಸಲಾಗುತ್ತದೆ. ಈ ವಿಗ್ರಹವು ಸ್ವಾಮಿಯನ್ನು ಈ ಓಲಗದಲ್ಲಿ (ಕೊಲುವು) ಪ್ರತಿನಿಧಿಸುವುದರಿಂದ ಇದು ಕೊಲುವು ಬೇರವಾಯಿತು. ಆಲಯದ ಮುಖ್ಯ ಸಂರಕ್ಷಕನಾಗಿ, ಆಲಯದ ಎಲ್ಲ ವ್ಯವಹಾರಗಳನ್ನೂ ಗಮನಿಸುತ್ತ, ಆದಾಯ ವೆಚ್ಚಗಳ ಲೆಕ್ಕವನ್ನೂ ತಿಳಿದು ಕೊಳ್ಳುತ್ತ ಇರುವ ದೇವರು. ಪ್ರತಿದಿನವೂ ಈ ವಿಗ್ರಹಕ್ಕೆ ಪಂಚಾಂಗ ಪಠನವಾಗಿ, ಇಲ್ಲಿಯೇ ನಿವೇದನೆಯನ್ನದ ಮಾತ್ರಾ ದಾನ ರೂಪಿಸಿ, ಅರ್ಚಕರ ಪಾಲನ್ನು ನಿರ್ಧರಿಸುವುದು. ಬಲಿಬೇರವೆಂದು ಹೆಸರಾಗಿದ್ದರೂ,ನಿತ್ಯ ಪೂಜೆಯ ನಂತರ ಈ ವಿಗ್ರಹವನ್ನು ಎಂದೂ ಆಲಯದ ಹೊರತಂದು ನೈವೇದ್ಯ ನೀಡುವುದಿಲ್ಲ.

**4. ಮಲೆಯಪ್ಪನ್ ಅಥವಾ ಉತ್ಸವಮೂರ್ತಿ:**

ಕ್ರಿ.ಶ.1339ರ ಶಾಸನದಲ್ಲಿ ಪ್ರಥಮಬಾರಿಗೆ ಮಲೈಯ ಕುನಿಯ ನಿನ್ರಪೆರುಮಾಳ್ ಎಂಬ ಉಲ್ಲೇಖ ದೊರೆಯುತ್ತದೆ. ಈ ವಿಗ್ರಹ ನಿಂತ ಭಂಗಿಯಲ್ಲಿದ್ದು ಧ್ರುವ ಬೇರದ ಪ್ರತಿರೂಪವಾಗಿದೆ. ಮೇಲಿನ ಎರಡು ಕೈಗಳಲ್ಲಿ ಶಂಖಚಕ್ರಗಳಿದ್ದರೆ ಕೆಳಗಿನ ಎಡಹಸ್ತ ಕಟ್ಯವಲಂಬಿತವಾಗಿಯೂ ಬಲದ ಹಸ್ತ ವರದ ಹಸ್ತವಾಗಿಯೂ ಇವೆ. ಈ ವಿಗ್ರಹಕ್ಕೆ ಚಿನ್ನ ಪ್ಲಾಟಿನಂಗಳಿಂದ ಮಾಡಿದ ಅತ್ಯಂತ ಸಿರಿವಂತವಾದ ಆಭರಣಗಳ ಭಂಡಾರವಿದೆ.

ಬ್ರಹ್ಮೋತ್ಸವದ ಒಂದು ಸಂದರ್ಭದಲ್ಲಿ ಗ್ರಾಮದಲ್ಲಿ ಬೆಂಕಿ ಕಾಣಿಸಿಕೊಂಡು ಬಹುವಾದ ನಷ್ಟವುಂಟಾಯಿತಂತೆ. ಅರ್ಚಕರಿಗೆ ಏಕೆ ಹೀಗಾಯಿತೆಂದು ಅರ್ಥವಾಗಲಿಲ್ಲ. ದೇವರು ಒಬ್ಬ ಮನುಷ್ಯನ ಮೂಲಕ ಹೇಳಿಸಿದ ನಂತೆ ಕಾಲಪರಿವರ್ತನೆಯಾಗಿದೆ. ಇದುವರೆಗೆ ಉತ್ಸವಕ್ಕೆ ಬಳಸುವ ಉಗ್ರಶ್ರೀನಿವಾಸನ ಮೂರ್ತಿಯನ್ನು ಬಿಟ್ಟು ಹೊಸ ಉತ್ಸವಮೂರ್ತಿಯನ್ನು ಹುಡುಕಿ ತೆಗೆಯಿರಿ ಎಂಬುದಾಗಿ ಪ್ರಾಯಶಃ ಇದರಿಂದಾಗಿಯೇ ಮೊದಲಿನ ಮೂರ್ತಿಗೆ ಉಗ್ರಮೂರ್ತಿಯೆಂದು ಹೆಸರು ಬಂದಿರಬೇಕು. ಬೆಟ್ಟದ ಮೇಲೆ ಒಂದು ಕಣಿವೆಯಲ್ಲಿ ಈಗಿನ ಉತ್ಸವಮೂರ್ತಿಯೂ, ನಾಚ್ಚಿಯಾರರೂ ಕಾಣಿಸಿಕೊಂಡರು. ಬೆಟ್ಟದ ತಗ್ಗಿನಲ್ಲಿ ಕಂಡು ಬಂದ ದೇವರಾದ್ದರಿಂದ **"ಮಲೈ ಕುನಿಯ ನಿನ್ರ ಪೆರುಮಾಳ್"** ಎಂದೇ ಹೆಸರಾಗಿ, ಮುಂದೆ ಇದೇ ಸಂಕ್ಷಿಪ್ತವಾಗಿ ಮಲೆಯಪ್ಪನ್ ಆಗಿದೆ. ಆತ ಕಂಡು ಬಂದ ಕಣಿವೆಯನ್ನೇ ಮಲೆಯಪ್ಪಕೋನ ಎಂದು ಗುರುತಿಸಲಾಗಿದೆ.

ಧ್ರುವಭೇರವನ್ನು ಪ್ರತಿನಿಧಿಸುವ ವಿಗ್ರಹಗಳ ಆದ್ಯತೆಯೆಂದರೆ ಭೋಗಶ್ರೀನಿವಾಸ,ಮಲೆಯಪ್ಪ ಮತ್ತಿಬ್ಬರು ನಾಚ್ಚಿಯಾರರು,ಉಗ್ರಶ್ರೀನಿವಾಸ ಹಾಗೂ ಕೊಲುವು ಶ್ರೀನಿವಾಸ. ಆಗಮಶಾಸ್ತ್ರ ರೀತ್ಯ ಇವರುಗಳು ಕೌತುಕ,ಉತ್ಸವ, ಸ್ನಪನ, ಬಲಿ ಭೇರಗಳಾಗುತ್ತವೆ. ಆಗಮಶಾಸ್ತ್ರ ಪ್ರಕಾರ ಕೌತುಕ ಭೇರವನ್ನು ನೇರವಾಗಿ ಧ್ರುವಭೇರದಿಂದಲೂ,ಉತ್ಸವ ಭೇರವನ್ನು ಕೌತುಕಭೇರದಿಂದಲೂ ಹೀಗೇ ಮುಂದುವರೆದು ಸಂಬಂಧಿಸಬೇಕು.ಆದರೆ ಆಲಯದ ಶಾಸನಗಳಾವುವೂ ಮಲೆಯಪ್ಪನನ್ನು ಉತ್ಸವಭೇರವೆಂದಾಗಲೀ, ಭೋಗ ಶ್ರೀನಿವಾಸನನ್ನು ಕೌತುಕಭೇರವೆಂದಾಗಲೀ ಹೇಳುವುದಿಲ್ಲ.

ಹದಿನಾಲ್ಕು ಅಂಗುಲ ಎತ್ತರವಿರುವ ಪೀಠದ ಮೇಲೆ ನಿಂತಿರುವ ಭಂಗಿಯ ಮಲೆಯಪ್ಪ ಮೂರು ಅಡಿಗಳ ಎತ್ತರ ವಿರಬಹುದು. ಬಲಗಡೆಗೆ ನಾಲ್ಕು ಅಂಗುಲದ ಪೀಠದ ಮೇಲೆ ಮೂವತ್ತು ಅಂಗುಲ ಎತ್ತರದ ಶ್ರೀದೇವಿಯಿದ್ದಾಳೆ. ಇದೊಂದು ಪಂಚಲೋಹದ ವಿಗ್ರಹ. ಆಕೆಯ ಎಡಗೈ ಕಟಿ ಹಸ್ತವಾಗಿಯೂ ಬಲಗೈ ಗಜಮುದ್ರೆಯಲ್ಲಿ ನೀಳವಾಗಿರು ವುದೂ ಆಗಿದೆ. ಶ್ರೀಭೂದೇವಿಯರಲ್ಲಿನ ವ್ಯತ್ಯಾಸವೆಂದರೆ ಭೂದೇವಿಯ ಬಲಹಸ್ತ ಕಟಿಹಸ್ತವಾಗಿಯೂ ಎಡಗೈ ಗಜ ಮುದ್ರೆಯಲ್ಲಿ ನೀಳವಾಗಿರುವುದೂ ಆಗಿದೆ.

ವರದರಾಜಸ್ವಾಮಿ ದೇವಾಲಯದ (ತಿರುಮಲೆಯ ಆಲಯದ ಬಲಗಡೆ ಇದೆ.) ಉತ್ತರದ ಗೋಡೆ ಮೇಲೆ ತ್ರಿಭುವನ ಚಕ್ರವರ್ತಿ ಶ್ರೀರಂಗನಾಥಯಾದವರಾಯನ ಒಂದು ಶಾಸನದಲ್ಲಿ ಮಲೆಯಕುನಿಯ ನಿನ್ರ ಪೆರುಮಾಳ್ ಹಾಗೂ ನಾಚ್ಚಿಯಾರರ ಉಲ್ಲೇಖವಿದ್ದು ಕ್ರಿ.ಶ.1339ಕ್ಕೆ ಸೇರಿದ ಇದೇ ಈ ವಿಗ್ರಹಗಳ ಮೊದಲ ಉಲ್ಲೇಖ.

### 5. ರುಕ್ಮಿಣೀ ಶ್ರೀಕೃಷ್ಣಸ್ವಾಮಿ :

ಗರ್ಭಗೃಹದಲ್ಲಿ ರುಕ್ಮಿಣಿಯೊಡನಿರುವ ಬಹುಸುಂದರವಾದ ನವನೀತನೃತ್ಯ ಭಂಗಿಯ ಶ್ರೀಕೃಷ್ಣ ವಿಗ್ರಹವಿದೆ. ಮುದ್ದಾದ ಮಗುವಿನ ರೂಪದಲ್ಲಿ ದೇವರು ನಾಟ್ಯಮಾಡುತ್ತಿರುವಂತೆ ಚಿತ್ರಿಸಲಾಗಿದ್ದು ಕಮಲದ ಮೇಲೆ ನಿಂತು ಎಡಗಾಲಿನ ಮೇಲೆ ಬಲಗಾಲನ್ನು ಅಡ್ಡವಾಗಿಟ್ಟ ಭಂಗಿಯಲ್ಲಿದೆ. ಬಲಗೈಯಲ್ಲಿ ಬೆಣ್ಣೆ ಮುದ್ದೆಯನ್ನು ಹಿಡಿದಿದ್ದರೆ ಎಡಗೈ ಆನಂದದಿಂದ ನೀಳವಾಗಿ ಚಾಚಿದೆ.

ಈ ವಿಗ್ರಹದ ಬಗ್ಗೆ ದೊರೆಯುವ ಅತಿ ಪ್ರಾಚೀನ ಶಾಸನವೆಂದರೆ ಕ್ರಿ.ಶ. 1100 ರ ಕಾಲದ್ದು. ಇತರ ಶಾಸನಗಳು ಶ್ರೀಕೃಷ್ಣ ಜಯಂತಿಯಂದು ವಿಗ್ರಹಕ್ಕೆ ನೀಡುವ ನೈವೇದ್ಯದ ಬಗ್ಗೆಯೂ, ಬ್ರಹ್ಮೋತ್ಸವಗಳ ನಿವೇದನೆಯ ಬಗ್ಗೆಯೂ ವಿವರಿಸುತ್ತವೆ. ಧನುರ್ಮಾಸದಲ್ಲಿ ಏಕಾಂತ ಸೇವೆಯನ್ನು ಸ್ವೀಕರಿಸುವ ವಿಗ್ರಹ ಇದು. ಶ್ರೀಕೃಷ್ಣಸ್ವಾಮಿಯ ವಿಗ್ರಹವಾಗಲೀ ಶ್ರೀರಾಮನ ವಿಗ್ರಹವಾಗಲೀ ನಿತ್ಯಪೂಜೆ ಪಡೆಯುವುದಿಲ್ಲ. ಇವರು ಶ್ರೀ ವೆಂಕಟೇಶ್ವರಸ್ವಾಮಿಯ ನಿತ್ಯಾರ್ಚನೆಯನ್ನೇ ಸ್ವೀಕರಿಸುವರು. ಶ್ರೀರಾಮ ಶ್ರೀಕೃಷ್ಣರ ನಿವೇದನೆಯನ್ನೂ ವೆಂಕಟೇಶ್ವರಸ್ವಾಮಿಗೆ ಮೊದಲು ಒಪ್ಪಿಸಲಾಗುತ್ತದೆ. ಆದರೆ ಆಸ್ಥಾನಗಳಲ್ಲೂ, ಹೊರಗಣ ಉತ್ಸವಗಳಲ್ಲಿಯೂ ಈ ವಿಗ್ರಹಕ್ಕೆ ಮೊದಲು ನೇರ ಸಮರ್ಪಣೆ,ಈ ಪದ್ಧತಿಯು ವಿಜಯನಗರ ಕಾಲದ 12-8-1486 ರ 142 ನೇ ಜಿ.ಟಿ. ಶಾಸನದಲ್ಲಿ ವಿವರಿತವಾಗಿದೆ.

### 6. ಶ್ರೀರಾಮ, ಸೀತೆ, ಲಕ್ಷ್ಮಣ, ಸುಗ್ರೀವರ ವಿಗ್ರಹಗಳು :

ಶ್ರೀರಾಮ (ರಘುನಾಥ) ಸೀತೆ,ಲಕ್ಷ್ಮಣ,ಸುಗ್ರೀವರ ನಾಲ್ಕು ತಾಮ್ರದ ವಿಗ್ರಹಗಳೂ ಗರ್ಭಗೃಹದಲ್ಲಿವೆ. ಕ್ರಿ.ಶ. 1476 ರ ಮೊದಲಿನ ಯಾವುದೇ ಶಾಸನದಲ್ಲೂ ಈ ವಿಗ್ರಹಗಳ ಬಗ್ಗೆ ಉಲ್ಲೇಖವಿಲ್ಲ. ಕ್ರಿ.ಶ.1245 ರಲ್ಲಿ ರಾಮರ್‌ಮೇಡೈ (ತಿರುಮಲೆಯ ಆಲಯದಲ್ಲಿ)ಯನ್ನು ಪೂರ್ಣಗೊಳಿಸಿ ಒಂದು ಕೊಠಡಿಯನ್ನಾಗಿಸಿದಾಗ ಈ ವಿಗ್ರಹಗಳನ್ನು ಅಲ್ಲಿ ಸ್ಥಾಪಿಸಿದುದರಿಂದ ಈ ಕೋಣೆಯನ್ನು ರಾಮರ್‌ಮೇಡೈ ಎಂದು ಕರೆದಿರಬಹುದು. ರಾಮಾನುಜರೇ ಈ ಮೂರ್ತಿಗಳನ್ನು ಆಲಯದಲ್ಲಿ ಸ್ಥಾಪಿಸಿರಬಹುದು ಎಂದೂ ಹೇಳುವರುಂಟು.

ಶ್ರೀರಾಮನ ವಿಗ್ರಹ ಮಧ್ಯಮ ತಾಳದ ತ್ರಿಭಂಗದಲ್ಲಿದೆ. ಎಡಗೈ ಮೇಲಿದ್ದು ಬಿಲ್ಲನ್ನು ಹಿಡಿಯುವಂತೆಯೂ ಬಲಗೈ ನೆಲಮುಖವಾಗಿ ಬಾಣವನ್ನು ಹಿಡಿಯಲು ಸಿದ್ಧವಾಗಿರು ವಂತೆಯೂ ಇವೆ. ಇದು ನಿಂತ ನಿಲುವಿನ ವಿಗ್ರಹವಾಗಿದ್ದು ತಲೆಯಲ್ಲಿ ಕಿರೀಟವಿದೆ. ರಾಮಚಂದ್ರನ ಎಡಗಡೆಗೆ ಸೀತೆ ನಿಂತ ಭಂಗಿಯಲ್ಲಿದ್ದು ಬಲಗೈ ನೆಲ ಮುಖವಾಗಿಯೂ, ಎಡಗೈಯಲ್ಲಿ ಪದ್ಮವನ್ನು ಹಿಡಿದಂತೆಯೂ ಇದೆ. ರಾಮನ ವಿಗ್ರಹದಂತೆಯೇ ಲಕ್ಷ್ಮಣನ ವಿಗ್ರಹ. ಸುಗ್ರೀವನ ವಿಗ್ರಹ ನಿಂತ ನಿಲುವಿನದ್ದು ಕೈಗಳೆರಡನ್ನೂ ಮುಂದೆ ತಂದು ಜೋಡಿಸಿ ನಮಸ್ಕಾರ ಮಾಡುತ್ತಿದ್ದಾನೆ.

ಆನಂದ ನಿಲಯದಲ್ಲಿನ ರಾಮರ್‌ಮೇಡೆಯ ಅಂತರಾಳ ಮಂಟಪದಲ್ಲಿ ಅಂಗದ ಹಾಗೂ ಹನುಮಂತರ ಸುಂದರ ತಾಮ್ರ ವಿಗ್ರಹಗಳೂ ಇವೆ. ಇವುಗಳೆದುರಿಗೆ ವಿಷ್ವಕ್ಸೇನ, ಅನಂತ, ಗರುಡರ ಸುಂದರ ತಾಮ್ರ ವಿಗ್ರಹಗಳನ್ನು ಕಾಣಬಹುದು.

### 7. ಚಕ್ರತ್ತಾಳ್ವಾರ್ :

ಈ ಮೂರ್ತಿಯು ಉತ್ಸವ ಮೂರ್ತಿಯ ಮೆರವಣಿಗೆಯಲ್ಲಿ ಯಾವಾಗಲೂ ಮುಂಬರುತ್ತದೆ. ಆದರೆ ಅಂಕುರಾರ್ಪಣೆ, ತೀರ್ಥವಾರಿಗಳಂದು ಪ್ರತ್ಯೇಕವಾಗಿ ನಡೆಯುತ್ತಾನೆ. ಬ್ರಹ್ಮೋತ್ಸವದ ಅವಭೃತವೂ ಚಕ್ರತ್ತಾಳ್ವಾರಿಗೆ ನಡೆಯುವುದು.

(ಮುಂದುವರೆಯುತ್ತದೆ)



ತಿರುಚಾನೂರು ಶ್ರೀ ಪದ್ಮಾವತಿ ಅಮ್ಮನವರ ಲಕ್ಷಕುಂಕುಮಾರ್ಚನೆ
16-11-2025



24-09-2025 ರಿಂದ 02-10-2025 ರ ವರೆಗೆ
ನಡೆದ ತಿರುಮಲೆ ಸ್ವಾಮಿಯವರ ವಾರ್ಷಿಕ
ಬ್ರಹ್ಮೋತ್ಸವದ ವಾಹನ ಸೇವೆಗಳ ದೃಶ್ಯಮಾಲಿಕೆ.



ಉಭಯ ದೇವಿಯರೊಂದಿಗೆ ಶ್ರೀ ಉಗ್ರ ಶ್ರೀನಿವಾಸ ಮೂರ್ತಿ
(ಉತ್ಸವಮೂರ್ತಿ ತಿರುಮಲೆ)
ಕೈಶಿಕದ್ವಾದಶಿ (02-11-2025)

# ಧಾತ್ರಿಯೊಂದಿಗೆ ಧಾರ್ಮಿಕ ಥಳಕು ಏಕೆ?

– ಹನುಮಂತ ಮ. ದೇಶಕುಲಕರ್ಣಿ
94803 64915



ನೆಲ್ಲಿಕಾಯಿ, ಅಮಲಕ, ಧಾತ್ರಿ ಎಂದು ಕರೆಯಿಸಿಕೊಳ್ಳುವ ಸಿಹಿ ಹುಳಿ ರುಚಿಯ ನೆಲ್ಲಿಕಾಯಿ ಹೆಸರು ಕೇಳ್ತಿದ್ದಂತೆ ಅನೇಕರ ಬಾಯಲ್ಲಿ ನೀರೂರುತ್ತೆ. ನೆಲ್ಲಿಕಾಯಿ ನಾಲಿಗೆಯಲ್ಲಿನ ಸ್ವಾದ ಗ್ರಂಥಿಗಳನ್ನು ಚುರುಕುಗೊಳಿಸುವ ವಿಶೇಷ ಶಕ್ತಿಯನ್ನು ಹೊಂದಿದೆ. ಇಂತಹ ನೆಲ್ಲಿಕಾಯಿಗೆ ಆಯುರ್ವೇದ ಶಾಸ್ತ್ರದಲ್ಲಿ ವಿಶೇಷ ಮಹತ್ವವನ್ನು ನೀಡಲಾಗಿದೆ. ಅದರಲ್ಲೂ ಬೆಟ್ಟದ ನೆಲ್ಲಿಕಾಯಿಯಲ್ಲಿ ಹಲವಾರು ಔಷಧೀಯ ಗುಣಗಳಿವೆ.

ಕಾರ್ತಿಕ ಮಾಸದಲ್ಲಿ ನೆಲ್ಲಿಕಾಯಿಗೆ ಸಾಕಷ್ಟು ಪ್ರಾಶಸ್ತ್ಯ ಇದೆ. ಎಲ್ಲಿ ನೆಲ್ಲಿಕಾಯಿ ಇರುತ್ತದೆ ಅಲ್ಲಿ ಲಕ್ಷ್ಮಿಯ ಸಂಪೂರ್ಣ ಕೃಪಾಕಟಾಕ್ಷ ಇರುತ್ತದೆ ಹಾಗಾಗಿ ಪಾವನಾ ಕಾರ್ತಿಕ ಮಾಸದಲ್ಲಿ ನೆಲ್ಲಿಕಾಯಿ ದೀಪಾರಾಧನೆ ಮಾಡಿದರೆ ಸಕಲ ಸನ್ಮಂಗಳ ಉಂಟಾಗುವುದಲ್ಲದೆ ಐಶ್ವರ್ಯ ಸಹ ಪ್ರಾಪ್ತಿ ಆಗುತ್ತದೆ ಹಾಗೂ ಸಕಲ ಗ್ರಹ ದೋಷ ಕೂಡ ಕಡಿಮೆ ಆಗುತ್ತದೆ. ಕೆಲವು ಪುರಾಣಗಳ ವಿವರಿಸಿದಂತೆ ನೆಲ್ಲಿಕಾಯಿಯನ್ನು ವಿಷ್ಣು ಸ್ವರೂಪ ಎನ್ನಲಾಗುತ್ತೆ.

ಇದೇ ಕಾರಣಕ್ಕೆ ದೀಪಾವಳಿಯ ಸಂದರ್ಭದಲ್ಲಿ ಮಾರುಕಟ್ಟೆಯಲ್ಲಿ ನೆಲ್ಲಿಕಾಯಿ ಗಿಡಕ್ಕೆ ಸಿಕ್ಕಾಪಟ್ಟೆ ಬೇಡಿಕೆ ಇದೆ. ಶ್ರೀಮನ್ನಾರಾಯಣನು ಪಾಲ್ಗಡಲಿನಲ್ಲಿ ತನ್ನ ಸುಖ ಶಯನದಿಂದ ಮೇಲೆದ್ದು ತನ್ನ ನಿದ್ರಾಮುದ್ರೆಯನ್ನು ಭಕ್ತರಿಗೆ ಸಾಕ್ಷಾತ್ಕರಿಸುವ ದಿನ. ಈ ದಿನ ಸಂಜೆಯ ಸಮಯದಲ್ಲಿ ತುಳಸಿ ವಿವಾಹ ಏರ್ಪಡುವುದು. ಚಾಂದ್ರಮಾನ ಕಾರ್ತಿಕ ಮಾಸದ ಶುಕ್ಲಪಕ್ಷದ 12ನೇ ದಿನ ಅಂದರೆ ದ್ವಾದಶಿಯಂದು ವಿಷ್ಣು ಸ್ವರೂಪಿ ನೆಲ್ಲಿಕಾಯಿ ಗಿಡದೊಂದಿಗೆ ತುಳಸಿಯ ವಿವಾಹವನ್ನು ಮಾಡಲಾಗುತ್ತದೆ.

ಧಾತ್ರಿ ಮರ ಹಾಗೂ ಪೂಜೆಯು ವಿಷ್ಣು ದೇವರಿಗೆ ಸಮರ್ಪಿತವಾಗಿರುತ್ತದೆ. ವಿಷ್ಣು ದೇವರನ್ನು ಧಾತ್ರಿಯ ರೂಪದಲ್ಲಿ ಪೂಜಿಸಿದರೆ ಪಾಪ ಕರ್ಮಗಳು ತೊಳೆದು ಹೋಗುತ್ತವೆ. ಈ ಹೋಮವನ್ನು ಮಾಡಿದರೆ ಅಶ್ವಮೇಧಯಾಗ ಮಾಡಿದಷ್ಟು ಪುಣ್ಯ ಪ್ರಾಪ್ತಿಯಾಗುವುದು. ಅಲ್ಲದೆ ಜೀವನದಲ್ಲಿ ಮುಂದೆ ಬರುವಂತಹ ಕಷ್ಟಗಳು ಕೂಡಾ ನಿವಾರಣೆಯಾಗುವುದು.

ಕಾರ್ತಿಕ ಮಾಸದಲ್ಲಿ ನೆಲ್ಲಿಕಾಯಿಗೆ ಸಾಕಷ್ಟು ಪ್ರಾಶಸ್ತ್ಯವಿದೆ. ನೆಲ್ಲಿಕಾಯಿ ಇಲ್ಲದೆ ಕಾರ್ತಿಕ ಮಾಸದ ಆಧ್ಯಾತ್ಮಿಕ ಕಾರ್ಯಕ್ರಮಗಳು ನಡೆಯುವುದಿಲ್ಲ. ನೆಲ್ಲಿಕಾಯಿ ದೀಪಾರಾಧನೆ ಮಾಡುವಾಗ ಬ್ರಾಹ್ಮೀ ಮುಹೂರ್ತದಲ್ಲಿ ಅಥವಾ ಗೋಧೂಳಿ ಸಮಯದಲ್ಲಿ ದೀಪಾರಾಧನೆ ಮಾಡಿದರೆ ಬಹಳ ಶ್ರೇಷ್ಠ ಹಾಗೂ ನೆಲ್ಲಿಕಾಯಿ ದೀಪಾರಾಧನೆ ಮಾಡಿದರೆ ನಿಮ್ಮ ಮನೆಯಲ್ಲಿ ಇರುವ ನಕಾರಾತ್ಮಕ ಶಕ್ತಿ ಹೋಗಿ ಸಕಾರಾತ್ಮಕ ಶಕ್ತಿ ಉಂಟಾಗುತ್ತದೆ ಜೊತೆಗೆ ಸುಮಂಗಲಿ ಸೌಭಾಗ್ಯ ದೀರ್ಘವಾಗಿರುತ್ತದೆ.

ಧಾತ್ರಿ ಹೋಮದ ನಂತರ ಕೈಗೊಳ್ಳುವ ಭೋಜನವು ಅತ್ಯಂತ ಪವಿತ್ರವಾದದ್ದು. ಧಾತ್ರಿ ಹವನದ ಭೋಜನ ಮಾಡಿದರೆ ನಮ್ಮ ಕುಂಡಲಿಯಲ್ಲಿದ್ದ ದೋಷಗಳು ನಿವಾರಣೆಯಾಗುತ್ತವೆ. ನೂರಾರು ವಜಾಪಯಯಾಗ ಮತ್ತು ಅನೇಕ ಬಾರಿ ಗಂಗಾ ಸ್ನಾನ ಮಾಡಿದಷ್ಟು ಪುಣ್ಯ ಫಲ ಪ್ರಾಪ್ತಿಯಾಗುವುದು.

ಬೆಟ್ಟದ ನೆಲ್ಲಿಕಾಯಿ ಆಧ್ಯಾತ್ಮಿಕ ಹಾಗೂ ಆಯುರ್ವೇದದ ಮಹತ್ವವನ್ನು ಹೊಂದಿದೆ. ಇಂತಹ ಬಹುಪಯೋಗಿ ನೆಲ್ಲಿಕಾಯಿಯನ್ನು ದಿನಕ್ಕೊಂದರಂತೆ ಸೇವಿಸಿದರೆ ಆರೋಗ್ಯ ಸುಧಾರಿಸುತ್ತೆ ಅಂತಾ ಸಂಶೋಧನೆಗಳಿಂದ ದೃಢಪಟ್ಟಿದೆ. ಕೆಲವು ಪ್ರಮುಖ ಖಾಯಿಲೆಗಳಿಗೆ ರಾಮಬಾಣ. ಬೆಟ್ಟದ ನೆಲ್ಲಿಕಾಯಿಯಲ್ಲಿ ವಿಟಮಿನ್ ಸಿ ಹೇರಳವಾಗಿರುವುದರಿಂದ, ತಲೆ ಕೂದಲಿನ ಆರೈಕೆಗೆ ಇದು ರಾಮಬಾಣ. ಇದರಲ್ಲಿ ವಿಟಮಿನ್-ಎ ಹಾಗೂ ಕ್ಯಾರೋಟಿನ್ ಇರುವುದರಿಂದ ಕಣ್ಣಿನ ಆರೈಕೆಗೆ ಸಹಕಾರಿ.

ದೇಹವು ಕ್ಯಾಲ್ಸಿಯಂ ಅಂಶವನ್ನು ಸಹಕಾರಿ ರೀತಿಯಲ್ಲಿ ಹೀರಿಕೊಳ್ಳಲು ಬೆಟ್ಟದ ನೆಲ್ಲಿಕಾಯಿ ಸಹಾಯ ಮಾಡುತ್ತದೆ. ಇದರಿಂದ ಎಲುಬುಗಳು, ಹಲ್ಲುಗಳು ಹಾಗೂ ಉಗುರುಗಳ ಆರೋಗ್ಯ ಉತ್ತಮವಾಗಿರುತ್ತೆ. ಇದರಲ್ಲಿರುವ ಖನಿಜಗಳು ಹಾಗೂ ಜೀವಸತ್ವಗಳು ಮುಟ್ಟಿನ ಸೆಳೆತವನ್ನು ತಡೆಯುತ್ತೆ. ಮಧುಮೇಹವನ್ನು ನಿಯಂತ್ರಣಗೊಳಿಸಲು ಬೆಟ್ಟದ ನೆಲ್ಲಿಕಾಯಿ ಸಹಕಾರಿ.

ಮೂತ್ರಪಿಂಡವನ್ನು ಆರೋಗ್ಯಕರವಾಗಿಡಲು ಹಾಗೂ ಗರ್ಭಾಶಯದ ಸೋಂಕುಗಳನ್ನು ತಡೆಗಟ್ಟುವಲ್ಲಿ ಸಹಕಾರಿಯಾಗುತ್ತೆ. ಸ್ಟ್ರೋಕ್ ಮತ್ತು ಹೃದಯಾಘಾತದ ಸಾಧ್ಯತೆಯನ್ನು ಕಡಿಮೆಗೊಳಿಸುತ್ತೆ. ಇದರಲ್ಲಿನ ಕಬ್ಬಿಣದ ಅಂಶ ಹೊಸ ಕೆಂಪು ರಕ್ತಕಣಗಳು ಹಾಗೂ ಬಿಳಿರಕ್ತಕಣಗಳ ಸೃಷ್ಟಿಗೆ ಉತ್ತೇಜನ ನೀಡುತ್ತೆ.



# ತಿರುಮಂಗೈ ಆಳ್ವಾರ್

– ಡಾ॥ ಎನ್.ಕೆ. ರಾಮಶೇಷನ್
82771 46110

'ಆಳ್ವಾರ್ ಎಂಬ ಪದಕ್ಕೆ ಭಗವಂತನ (ಶ್ರೀಮನ್ನಾರಾಯಣ ವಿಶೇಷತಃ) ಭಕ್ತಿ ಸಾಮ್ರಾಜ್ಯವನ್ನು ಆಳುವವರು ಎಂದು ಸರಳ ಹಾಗೂ ವಿಶಿಷ್ಟವಾದ ಅರ್ಥ. ಎಲ್ಲ ಆಳ್ವಾರರಿಗೂ ಅವರವರ ಪ್ರಬಂಧ ರಚನೆಗಳಲ್ಲಿ ತಿರುಮಲೆ-ತಿರುಪತಿ ಶ್ರೀನಿವಾಸನನ್ನು **"ತಿರುವೇಂಗಡಮುಡೈಯಾನ್"** ಎಂದೇ ಸ್ಮರಿಸಿ, ವೇಕಂಟಾಚಲದ ಯುಗ ಯುಗ ಪರ್ಯಂತ ಇರುವ ವೈಭವವನ್ನು ಮನಸಾರೆ ತಮ್ಮ ಪ್ರಬಂಧಗಳಲ್ಲಿ ಹಾಡಿದ್ದಾರೆ. ಲೇಖನ ಬಹು ಕಿರಿದಾಗಿ ಇರುವ ಪ್ರಯುಕ್ತ, ವಿವರವಾಗಿ ಪ್ರಬಂಧದ ರೂಪುರೇಷೆ ತಿಳಿಸಲು ಸ್ವಲ್ಪ ಕಷ್ಟ. ಆಳ್ವಾರರಲ್ಲಿ ಭಕ್ತಿಗೆ ಪ್ರಾಧಾನ್ಯ ಭಗವಂತನಲ್ಲಯೇ ಆತ್ಮ ಸಮರ್ಪಣೆ ಮಾಡುವುದು ಪರಮ ಪುರುಷಾರ್ಥ ಏಕದೇವೋಪಾಸನೆಗೆ-ಶ್ರೀಮನ್ನಾರಾಯಣನಲ್ಲಿ ಪ್ರಪತ್ತಿ ಶರಣಾಗತಿ ಅವನೇ ಸರ್ವಸ್ವ ಜಗತ್ತಿನಲ್ಲಿ ಅಂತರ್ಯಾಮಿಯಾಗಿದ್ದು ಸಂಸಾರ ಚಕ್ರವನ್ನು ತಿರುಗಿಸುತ್ತ ಅವಲೋಕಿಸುತ್ತಾನೆ. ಈಗ ಪ್ರಪಂಚದಲ್ಲಿ ಏನೇನು ಅನುಭವಿಸುವುದೇ ಅದೆಲ್ಲವೂ ಭಗವಂತನದ್ದು ನೀನು ಮನದಿಂದ ಮಾತ್ರವಷ್ಟೆ, ತೇನವಿನಾ ತೃಣಮಪಿನಚಲತಿ ಎಂದೇ ತಿಳಿಯಬೇಕಷ್ಟೆ.

ಭಗವಂತನ, ಶ್ರೀ ಲಕ್ಷ್ಮೀ ಆಕೆಯ ಅಪಾರ ವಾತ್ಸಲ್ಯ ಇಡೀ ಸೃಷ್ಟಿಯಲ್ಲಿ ಪ್ರವರ್ತಿಸುತ್ತದೆ. ಅದಕ್ಕೆ ತಿಳಿದವರು ಹೇಳುವುದು **"ಅನ್ಯಥಾ ಶರಣಂನಾಸ್ತಿ"** ಆಳ್ವಾರರಲ್ಲಿ ಕಡೆಯವರು ತಿರುಮಂಗೈ. ಮಂಗೈ ಎಂದರೆ ಕನ್ಯೆ, ತಿರು ಎಂದರೆ ಶ್ರೇಷ್ಠ ಶ್ರೀ ಹೀಗಾಗಿ ಶ್ರೇಷ್ಠಳಾದ ಲಕ್ಷ್ಮೀದೇವಿಯ ಕೃಪೆಗೆ ಪಾತ್ರನಾಗಿ ಸಾವಿರಾರು ಪ್ರಬಂಧ ಸಾಲುಗಳನ್ನು ರಚಿಸಿರುವ ಶ್ರೇಷ್ಠ ಭಕ್ತ ಕವಿ ತಿರುಮಂಗೈ ಎನ್ನಬೇಕು. ಅವರ ಬದುಕು ಕೂಡ ರೋಚಕವಾದುದಷ್ಟೆ.

ಆಳ್ವಾರರಲ್ಲಿ ಕಳ್ಳರು ಕುಲ-ಹಿಂದೆ ಇತ್ತು ಈ ಕುಲಕ್ಕೆ ಸೇರಿದ ಆಳ್ವಾರರು ತಿರುಮಂಗೈ-ಕಲಿಯನ್ (ಶೂರ), ಪರಕಾಲನ್ (ಮೋಕ್ಷಕ್ಕೆ ದಾರಿ ತಿಳಿಸುವವ)ಮನ್ನನ್ (ಧೀರ ಯೋಧ, ಸುಂದರ) ತಮಿಳುನಾಡಿನಲ್ಲಿ ಬಹುವಾಗಿ ಹಾಡುತ್ತಾರೆ ಇವನ ಬಗ್ಗೆ. ಬೆಟ್ಟ - ಗುಡ್ಡ ಸೀಮೆ, ಕಾಡು ಇಲ್ಲೇ ವಾಸಿಸುತ್ತಿದ್ದ ಬೇಡರ ಗುಂಪಿನವ ತಿರುಮಂಗೈ, ತಂದೆ, ಚೋಳರಾಜನ ಸೇನೆಯಲ್ಲಿದ್ದು ತನ್ನ ಶೌರ್ಯ ಪರಾಕ್ರಮ ತೋರಿಸುತ್ತ, ಕ್ರಮೇಣ ಸೇನಾಧಿಪತಿಯಾಗಿದ್ದ ತಿರುಮಂಗೈ ತಾನೂ ಸಹ ಸೇನೆಗೆ ಸೇರುತ್ತ, ಕಾಲ ಕ್ರಮದಲ್ಲಿ ಅನೇಕ ಚೋಳರಾಜನ ಜೈತ್ರ ಯಾತ್ರೆಗಳಲ್ಲಿ ವಿಜಯಗಳಿಸಿ ಧೈರ್ಯದಿಂದ ಕಾದಾಡಿ, ರಾಜನ ಸನ್ಮಾನಕ್ಕೆ ಪಾತ್ರನಾಗಿದ್ದನು. ಈತನ ಸಾಮರ್ಥ್ಯಕ್ಕೆ ಮೆಚ್ಚಿದ್ದ ಚೋಳರಾಜ,ಚೋಳರಾಜ್ಯದ ತಿರುವಾಲಿ ಎಂಬ ಪ್ರದೇಶಕ್ಕೆ ಪಾಳೆಯಗಾರನನ್ನಾಗಿ ನೇಮಿಸಿದ್ದ. ಹೀಗಾಗಿ ಹುಟ್ಟು ಮುಖ್ಯವಲ್ಲ, ಸಾಧನೆಯು ಮುಖ್ಯ ಮನುಷ್ಯನ ಮನಸ್ಸನ್ನು ಜಾತಿಕುಲ ಒಡೆಯುತ್ತದೆ. ಆಂತರಿಕ ಯೋಗ್ಯತೆಗೆ, ಗುಣಗಳು, ಶೌರ್ಯಾ ತಾನೇ ಮುಖ್ಯವಾದದ್ದು?

ಕಾರ್ತಿಕೇ ರೋಹಿಣೀ ಜಾತಂಚತುಷ್ಕವಿಶಿಖಾಮಣಿಂ
ಷಟ್ ಪ್ರಬಂಧಕೃತಂ ಶಾರ್ಙ್ಗ ಮೂರ್ತಿಂ ಕಲಿಯನ್ ಆಶ್ರಯೇ ॥

ಎಂದು ಇವರನ್ನು ಕುರಿತು ಇರುವ ಶ್ಲೋಕ - ಶ್ರೀವಿಷ್ಣುವಿನ ಶಾರ್ಙ್ಗ ಎಂಬ ಧನುಸ್ಸಿನ ಅಂಶಜರು ತಿರುಮಂಗೈ ಎಂದೇ ಪ್ರತೀತಿ. ಕುಲವಿದ್ಯೆ, ಧನುರ್ವಿದ್ಯೆ ತನ್ನ ಚಿಕ್ಕಂದಿನಿಂದಲೇ ಸಮರ್ಥ ಬಿಲ್ಲುವಿದ್ಯೆ ಪರಿಣತರು, ತಿರುಮಂಗೈಯವರಿಗೆ ನಾಲ್ವರು ಆಪ್ತರು ಅನುಚಾರರು ತಾಳೂರುವಾನ್ (ಬಾಗಿಲಿಗೆ ಹಾಕಿದ ಎಂಥ ಚಿಲಕ/ತಾಳಗಳನ್ನು ಬಾಯಿಂದಲೇ ಊದಿ ತೆಗೆಯುತ್ತಿದ್ದ, ನೀರ್ ಮೇಲ್ ನಡಪ್ಪಾನೆ ನೀರಿನ ಮೇಲೂ ನಡೆಯುವ ವಿಶೇಷ ಶಕ್ತಿಯವ ನೆಳಲಿಲ್ ಮಡೈವನ್/ ನೆರಳಿನಲ್ಲಿ ಕಪ್ಪು ಛಾಯೆಯಲ್ಲಿ ಹಾಗೇ ಅದೃಶ್ಯ ಆಗುವ ವಿಶೇಷ ಶಕ್ತಿಯವ, ಇದ್ದ. ಕೋರಾವಳಕ್ಕನ್/ ಏನೇ ವಸ್ತು ಎಲ್ಲೇ ಇರಲಿ ಪತ್ತೆ ಹಚ್ಚುವುದು) ಜೊತೆಗೆ "ಆಡಲ್ ಮಾ" ಎಂಬ ಕುದುರೆ ಅಮರರ್ ಕಡಮಾಕಳಿಯಾನೆ ಬಲಶಾಲಿಯಾದ ಆನೆ ಇದೆಲ್ಲದರ ಜೊತೆಗೇ ಅಪ್ತ ಪಡೆಯು ಇತ್ತು.

ತಿರುನಗರಿಯಲ್ಲಿ ಒಂದು ಸರಸ್ಸು, ತಾವರೆ ಹೂ ಭರಿತ ಅಪ್ಸರೆಯರೇ ಆಗಾಗ್ಗೆ ಬಂದು ಜಲಕ್ರೀಡೆ ಆಡಿ ಹೋಗುವರು. ಒಮ್ಮೆ ತಿರುಮಾಮಗಳ್ ಎಂಬಾಕೆ ಬಂದು

ಹೇಗೋ ಏನೋ ಸ್ನೇಹಿತೆಯರು ಅವಳನ್ನು ಬಿಟ್ಟು ಹೋಗಿ ಬಿಟ್ಟರು,ಇವಳಿಗೂ ಭಯ! ಆ ವೇಳೆಗೆ ತಿರುನಗರಿಯ ಪಂಡಿತ ನೊಬ್ಬ ಬಂದ, ಈ ಹೆಣ್ಣನ್ನು ನೋಡಿದ ಯಾರಮ್ಮ ತಾಯಿ ಇಲ್ಲಿ ಒಂಟಿಯಾಗಿದ್ದೀಯ ಎಂದು ಕೇಳಿದ ಅವಳು ಇದ್ದ ಸಂಗ ತಿಯನ್ನು ತಿಳಿಸಿದಾಗ, ಪಂಡಿತ ಅವಳನ್ನು ಮಗಳಂತೆಯೇ ಮನೆಗೆ ಕರೆದೊಯ್ದು ಕುಮುದವಲ್ಲಿ ಎಂದು ಹೆಸರಿಟ್ಟು ಬೆಳಸಿದ. ಇದೆಲ್ಲವೂ ಕರ್ಣಾಕರ್ಣಿಕೆಯಾಗಿ ತಿರುಮಂಗೈ ತಿಳಿದ ಪಂಡಿತರ ಮನೆಗೆ ಬಂದ ಕುಮುದವಲ್ಲಿಯನ್ನು ನೋಡಿದ ನೇರ, ಪಂಡಿತರೆ, ಈಕೆಯನ್ನು ನಾನು ವಿವಾಹ ಆಗುವೆ, ಒಪ್ಪಿಗೆಯೇ? ಎಂದ. ಕುಮುದವಲ್ಲಿ ಮೊದಲು ಆತ ಶಂಖಚಕ್ರ ಲಾಂಛನ ಧರಿಸಿ ಅನಂತರ ಪ್ರತಿನಿತ್ಯ 1000 ಭಾಗವತರಿಗೆ ಊಟ ಹಾಕುವ ಮನಸ್ಸು ಇದೆಯೇ ಎಂದು ಹೇಳಲು ತಿರುಮಂಗೈ ಒಪ್ಪಿದ ಮದುವೆ ಆಯಿತು. ಆದ್ದೇನು? ಪ್ರತಿನಿತ್ಯ 1000 ಜನರಿಗೆ ಸಮಾ ರಾಧನೆ ಮಾಡುತ್ತ ಆತನ ಭಂಡಾರ ಬರಿದಾಯಿತು. ರಾಜನಿಗೆ ಕೊಡಬೇಕಾಗಿದ್ದ ಪೊಗದಿ ಕಾಣಿಕೆಯ ಹಣವನ್ನೂ ಕೊಡದೆ ಕುಪಿತನಾದ ಅರಸ ಭಟ್ಟರನ್ನು ಕಳಿಸಿದ. **"ಕಪ್ಪ ಕೊಡುವ ತನಕ ತಿರು ಮಂಗೈಯನ್ನು ಬಂಧನದಲ್ಲಿರಿಸಿರಿ"** ಎಂದು ಆಣತಿ ನೀಡಿದ.

ಇಲ್ಲಿ ಸೆರೆಮನೆಯಲ್ಲಿ ತಿರುಮಂಗೈ ದೇವರ ಸಾಮೀಪ್ಯ ಪಡೆದದ್ದು ವೇದವತೀ ನದಿಯ ಮಳಲಲ್ಲಿ ನಿಧಿ ನಿಕ್ಷೇಪ ಇದೆ. ತೆಗೆದು ಕೊ ರಾಜನಿಗೆ ಪುಗುದಿ ಹಣ ಪಾವತಿಸು ದೇವರ ಇರವು ನೆರವು ಎರಡೂ ಕೂಡ ತಿರುಮಂಗೈಗೆ ಭಕ್ತಿಯ ಹಾದಿ ಯನ್ನು ತೆರೆಸಿದವು. ನಿಧಿ ದೊರೆತು ವಿಮುಕ್ತನಾದ ಯೋಗ ಸಾಧಕನಾದ ಕುಮುದವಲ್ಲಿ ತಿರುಮಂಗೈ ಬದುಕನ್ನು ಪೂತ ಆಗಿಸಿದಳು.ಕಳ್ಳತನ ಮತ್ತೆ ಶುರು ಮಾಡಿದ ತನ್ನವಳ ಕೋರಿಕೆ ಊಟ ಹಾಕುವಿಕೆ ಮುಂದುವರಿಸಲು.

ಒಂದು ದಿನ ಎತ್ತರವಾದ ಮರವೇರಿ ಕಣ್ಣು ದೃಷ್ಟಿ ಹಾಯಿಸುತ್ತಿದ್ದಾನೆ. ಶ್ರೀಯಃ ಪತಿಯೇ ತನ್ನ ಲಕ್ಷ್ಮೀದೇವಿ ಸಹಿತ ಒಳ್ಳೆಯ ಒಡವೆ ಧರಿಸಿ ಬರುತ್ತಿರುವುದೇ ತಿರುಮಂಗೈ ಅನು ಚರರು ಅಡ್ಡ ಹಾಕಿ ದಂಪತಿಗಳನ್ನು ಎಲ್ಲ ನಗನಾಣ್ಯ ಕೊಡಿ ಎಂದು ಮೂಟೆ ಕಟ್ಟುವಷ್ಟು ಆಭರಣ ಆಯಿತು. ಆದರೆ ಕಳ್ಳ ಮಂಗೈಗೆ ಹಣದ ಮೂಟೆ ಎತ್ತಲಾಗದೆ **"ಏಯ್ ಏನು ಮಾಟ ಮದ್ದು ಮಾಡಿದ್ದೀಯಾ ಎಂದು ಗುಡುಗಿದ."**

ನನ್ನ ಹತ್ತಿರ ಬಾ ಹೇಳುವೆ ಎಂದ ವರದ ತಿರುಮಂಗೈ ಲಕ್ಷ್ಮಿ ದೇವಿಯ ಪಾದದ ಕಾಲು ಉಂಗಾರವನ್ನು ಹಲ್ಲಿನಿಂದಲೇ ಕೀಳಲು ಬಗ್ಗಿದಾಗ ಭಕ್ತ ವಾತ್ಸಲ್ಯದಿಂದ ಅಷ್ಟಾಕ್ಷರೀಮಂತ್ರ ಉಪದೇಶಿಸುವುದೇ! ಮಿಂಚು ಹೊಡೆದ ಅನುಭವ ತಿರು ಮಂಗೈಗೆ ತಲೆ ಎತ್ತಿ ನೋಡಿದರೆ ವಧೂವರರಲ್ಲಿ ಹಾಗೆಯೇ ಗರುಡಾರೂಢನಾದ ಶ್ರೀಮನ್‌ನಾರಾಯಣನ ದರ್ಶನದ ಭಾಸವಾಯಿತು. ಪರಿವರ್ತಿತನಾದ ಕಳ್ಳ ಮಹಾ ಭಾಗವತ ನಾಗಿ ಭಕ್ತರಾಗಿ, ಪ್ರಬಂಧ ಹಾಡುವ ಘಟನೆ! ನಡೆಯಿತು. ಅನಂತರ ತಿರುಮಂಗೈ ಆಳ್ವಾರ್, ಕಮುದವಲ್ಲಿ ಸಂಗಡ ದೂರದ ಮುಕ್ತಿನಾಥ ಕ್ಷೇತ್ರದ ತನಕ ತೀರ್ಥಯಾತ್ರೆ ಮಾಡಿದ. ತನ್ನ ಅನುಭವಗಳನ್ನು ಹಾಡಿದ, ಪೆರಿಯ ತಿರುಮೊಳಿ (1084 ಪದ್ಯಗಳು) ತಿರುಕ್ಕುರುಂದಾಂಡಗಂ (20ಪದ್ಯ) ತಿರುನೆಡುಂ ದಾಂಡಗಂ (20ಪದ್ಯ) 50 ಸಾಲಿನ ಒಂದೇ ಪಾಶುರ (ತಿರು ವೆಳುಕ್ಕೂರಿಕ್ಕೈ ಉಚ್ಚರಿಸಲೂ ಕಷ್ಟವೇ) ಪೆರಿಯತಿರುಮಡಲ್ (17) ಶಿರಿಯತಿರುಮಡಲ್ (40 ಪದ್ಯಗಳು) ಹೀಗೆ ಸಾವಿರಾರು ಸಾಲುಗಳ ಪ್ರಬಂಧಗಳನ್ನು ಸೃಷ್ಟಿಸಿ ಹಾಡಿದ್ದಾರೆ. ತಿರುಮಂಗೈ ಕೊಡುಗೆ ಅಪಾರ. ಹಾಗೆಯೇ ಕುಮುದವಲ್ಲಿಯ ಪಾತ್ರವನ್ನೂ ನಾವು ಮೆಚ್ಚಬೇಡವೇ? ತಮಿಳು ನಾಡನ ಮಾತ್ರವಲ್ಲ ಇಡೀ ಜಗತ್ತಿನಲ್ಲೇ ತಿರುಮಂಗೈ ಪ್ರಸಿದ್ಧರಾಗಿದ್ದಾರೆ. ಭಗವಂತನನ್ನು ಅನುಭವಿಸಿ ಹಾಡಿದ್ದಾರೆ. ನಾಲ್ಕು ಬಗೆಯ ಕವಿತಾ ರಚನೆ ಮಾಡಿ ಹಾಡಿದ್ದಾರೆ.

ಭಗವಂತನನ್ನು ಕಂಡ ತಿರುಮಂಗೈ ಕಳ್ಳ ದರೋಡೆ ಕೋರ ಕುಮುದವಲ್ಲಿಯಂತಹ ಸ್ಪರ್ಶಮಣಿ (ಪರುಷುಮಣಿ) ಸಂಪರ್ಕದಿಂದ ಆಳ್ವಾರರ ಶ್ರೇಣಿಗೆ ಏರಿದ್ದೆ ಒಂದು ಪವಾಡ ಹಾಗೂ ಆತನ ಯೌಗಿಕ ಸೃಷ್ಟಿಗೆ ಮಡಲ್ ಜಾನಪದ ಛಂದ ಸ್ಸಿನ ಆಳ್ವಾರರ ಪರಂಪರೆ ಅವರ ಸಾಧನೆ ಅಚ್ಚರಿ ಎನಿಸು ವಂಥದು. ಜಗತ್ತು ಕಾವ್ಯ ಆಳ್ವಾರರ ಪರಂಪರೆ ಅವರ ಸಾಧನೆ ಅಚ್ಚರಿ ಎನಿಸುವಂಥದು. ಜಗತ್ತು ಇರುವ ತನಕವು ತಿರು ಮಂಗೈ ಕವಿತೆ ಇರುತ್ತದೆ.

ಅವರ ಭಕ್ತಿ ಸಾಧನೆ ಇಂದಿನ ಧವತ್ತಾದ ಬದುಕಿಗೆ ನೆಮ್ಮದಿರ್ಯನ್ನು ನೀಡುತ್ತದೆ. ಓಂ ನಮೋ ನಾರಾಯಣ ಅಷ್ಟಾ ಕ್ಷರಿಯನ್ನು ಅಕ್ಷರಶಃ ಅನುಭವಿಸಿದ್ದಾರೆ ತಿರುಮಂಗೈ ಕಳ್ಳನು ನಾನು ಕಳ್ಳತನ ಮಾಡಿದ್ದೇನೆ ಕಂಡ ಕಂಡ ವಿಷಯಕ್ಕೆ ಅಲೆದಿ ದ್ದೇನೆ ದಿಟ ಆದರೂ ತಿಳಿದು ಆ ಅರಿವಿನ ಉದ್ಧಾರದ ಹಾದಿ ಸೇರಿದೆ ದೈವದ ಅನುಗ್ರಹ ಪ್ರತ್ಯಕ್ಷವಾಗಿ ಪಡೆದೆ, ಅಲ್ಲವೇ? ಒಳಗೆಲ್ಲ ಕರಗಿ, ಕೊರಲು ಸಡಿಲವಾಗಿ ಮನ ದುಂಬಿ ಕಂಬನಿ ದಟ್ಟೈಸಲು, "ನಾರಾಯಣಾ ನಾರಾಯಣಾ" ಎಂದು ರಾತ್ರಿ ಹಗಲಲ್ಲಿ ಕರೆಯುತ್ತಿದ್ದೇನೆ ಬಾ ಎನ್ನ ನಿಧಿಯೆ ಎಂದು ಹಂಬಲಿಸಿ ಹಾಡಿದ್ದಾರೆ. ಇಲ್ಲಿ ನಾವು ಉದಾ ಹರಿಸುತ್ತಿರುವುದು ಒಂದು ತುಣುಕು ಮಾತ್ರ ಸಾವಿರಾರು ಪದ್ಯಗಳ ಕಾವ್ಯಗಳನ್ನು ಈ ಕಳ್ಳ ದರೋಡೆ ಕೋರ ತಿರುಮಂಗೈ ಭಕ್ತ ಕವಿಯಾಗಿ ಭಾಗವತ ನಾಗಿ ಪ್ರಪತ್ತಿನಿಂದ ಹಾಡಿದ್ದಾರೆ. ಇವರ ನೆನಪೆ ನಮಗೆ ರೋಚಕ ಅನುಭವವನ್ನು ನೀಡುತ್ತದೆ. ಹಾಗೂ ಪ್ರಪತ್ತಿ ಮಾರ್ಗಕ್ಕೆ ಕೈ ಮರವನ್ನು ಕಲ್ಪಿಸುತ್ತದೆ.

**ಕಳೆದ ಸಂಚಿಕೆಯಿಂದ**

# ಶ್ರೀ ವೆಂಕಟಾಚಲ ಮಹಾತ್ಮ್ಯ

ತೆಲುಗು ಮೂಲ – ಆಚಾರ್ಯ ಕೆ. ಸರ್ವೋತ್ತಮ ರಾವ್
ಅನುವಾದ – ಶ್ರೀಮತಿ. ಎನ್. ಪಾರ್ವತಿ

ಈ ಉತ್ತರದಿಂದ ವಾಯುದೇವನು ಶೇಷನಿಗೆ ಬುದ್ಧಿ ಬರುವಂತೆ "ಶೇಷಾ! ನೀನು ಅಂತಃಪುರ ಪಾಲಕನೆಂದು ಬೀಗುತ್ತಿದ್ದೀಯಾ? ಅಂತಃಪುರದಲ್ಲಿ ಒಂದು ಬೆಕ್ಕು ಇದೆ ಎಂದ ಮಾತ್ರಕ್ಕೆ ಆ ಬೆಕ್ಕು ಆನೆಗಿಂತ ಹೆಚ್ಚಿನದೇ? ನನ್ನನ್ನು ಒಳಗೆ ಬಿಡುವುದಿಲ್ಲ ಎಂದಿದ್ದೀಯಾ, ಸರಿ, ನಾನು ನಿನ್ನ ಹತ್ತಿರ ಬರುವುದಿಲ್ಲ. ನೀನು ಇರುವಲ್ಲಿಯೇ ಇರು. ನಾನು ಎಲ್ಲಿದ್ದೇನೋ ಅಲ್ಲೇ ಇರುತ್ತೇನೆ. ಇದು ನನಗೆ ಅವಮಾನವೇ ಅಲ್ಲ. ಅಧಮಾ! ತುಂಬಾ ಗರ್ವಪಡಬೇಡ" ಎಂದು ಜೋರಾಗಿ ಹೇಳಿದನು.

ವಾಯುದೇವನ ಮಾತುಗಳಿಂದ ಶೇಷನು ರೊಚ್ಚಿಗೆದ್ದನು.ಅವನಲ್ಲಿದ್ದ ಆತ್ಮಾಭಿಮಾನ ಕೋಪವನ್ನು ಹೆಚ್ಚಿಸಿತು.



"ಮಾರುತ! ನೀನು ಯಾರು? ನೀನು ನನಗೆ ಆಹಾರ ಎಂಬುದನ್ನು ಮರೆತು ಬಿಡುತ್ತಿದ್ದೀಯ. ನನ್ನ ಮುಂದೆ ನಿನ್ನ ದೊಡ್ಡಸ್ತಿಕೆಯನ್ನು ತೋರಿಸಬೇಡ" ಎಂದನು. ಈ ಮಾತಿನಿಂದ ಮಾರುತನು, "ಶೇಷಾ! ನೀನು ದುರಹಂಕಾರಿ. ದೊಡ್ಡವರು-ಚಿಕ್ಕವರು ಎನ್ನದೇ, ಬಾಯಿಗೆ ಬಂದಂತೆ ಮಾತನಾಡುತ್ತಿದ್ದೀಯಾ. ನೀನೇನು? ನನ್ನ ಶಕ್ತಿ ಏನು? ಯೋಚಿಸು! ನೀನು ನನಗೆ ಸಾಟಿಯೇ ಅಲ್ಲ ಎಂಬುದನ್ನು ನೆನಪಿಡು! ನಾನು ಎಲ್ಲಾ ಜೀವಿಗಳ ಅಂತರ್ಯಾಮಿ, ಜಗದಾಧಾರನು. ನಾನು ನಿನಗಿಂತ ದೊಡ್ಡವನು."

ಆಗ, ಶೇಷನು, "ಓ ಪ್ರಭಂಜನಾ! ನನ್ನನ್ನು ಕಡಿಮೆ ಎಂದು ತಿಳಿಯಬೇಡ. ಪರ್ವತಗಳು, ಬೆಟ್ಟಗಳು ಮತ್ತು ಅಸಂಖ್ಯಾತ ಜೀವಿಗಳು ಚಲಿಸುವ ಭೂಮಿಯನ್ನು ಹೊತ್ತವನು ನಾನೇ, ನಾನೇ ಶ್ರೇಷ್ಠ. ಬ್ರಹ್ಮಾಂಡ ದೊರೆಯಾದ ಸ್ವತಃ ಭಗವಂತನನ್ನೇ ಹೊತ್ತಿರುವೆನು. ನನ್ನನ್ನು ಅತ್ಯಲ್ಪ ಎಂದು ತಿಳಿಯಬೇಡ" ಎಂದು ಹೇಳಿದನು.

ಈ ಪ್ರಸಂಗದಿಂದ ಅವರ ವಾದ-ವಿವಾದಕ್ಕೆ ವಾಯುವು ಸ್ವಸ್ತಿ ಹೇಳಲು "ಪನ್ನಗೇಂದ್ರಾ ನಾನು!! ನಿನ್ನಳೊಗೆ ಇದ್ದೇನೆ. ಆದರಿಂದಲೇ ನೀನು ಬಲವಂತನು. ನಾನಿಲ್ಲದಿದ್ದರೆ ನೀನು ಬಲಹೀನನು. ನಾನೇ ಮೂಲ ತತ್ವನು. ಯಾವುದೇ ವಿಧದಲ್ಲಿ ತುಲನೆ ಮಾಡಿದರೂ ನೀನು ನನಗಿಂತಲೂ ಅಲ್ಪನೇ" ಎಂದನು.

ಈ ಮಾತುಗಳನ್ನಾಡಿದ ಶೇಷನು "ನೀನು ಅದರ ಬಗ್ಗೆ ಯಾಕೆ ಮಾತನಾಡುತ್ತಿದ್ದೀಯಾ? ಅದನ್ನು ಬಗೆಹರಿಸಿಕೊಳ್ಳೋಣ. ನೀನು ಮತ್ತು ನಾನು ಮಲ್ಲಯುದ್ಧವನ್ನು ಮಾಡೋಣ. ಯಾರು ಬಲಶಾಲಿ ಎಂದು ನೋಡುವವರಿಗೂ ಸ್ಪಷ್ಟವಾಗುತ್ತದೆ ಬಾ ಬಾ" ಎಂದು ಕೂಗುತ್ತಿದ್ದಂತೆ ದೇವಸ್ಥಾನದಲ್ಲಿದ್ದ ಮಾಧವನು ಹೊರಗೆ ಏನೋ ನಡೆಯುತ್ತಿದೆ ನೋಡೋಣ ಎಂದು ಹೊರಗೆ ಬಂದನು.



ಹರಿಯನ್ನು ಕಂಡ ತಕ್ಷಣ ಶೇಷ ಮಾರುತರು ನಮಸ್ಕರಿಸಿದರು. ಎಲ್ಲವನ್ನೂ ವರದಿ ಮಾಡಿದರು. ಅಲ್ಲದೇ ಮಂಡಿಯೂರಿ, "ಸ್ವಾಮಿ! ನಾವು ಮಲ್ಲಯುದ್ಧ ಮಾಡಲು ನಿರ್ಧರಿಸಿದ್ದೇವೆ. ದಯವಿಟ್ಟು ನಮ್ಮನ್ನು ಆಶೀರ್ವದಿಸಿ" ಎಂದರು.

ವಿಷ್ಣುವು ಇಬ್ಬರೂ ಪಣ ತೊಟ್ಟಿರುವುದನ್ನು ಕಂಡು "ಇದು ಆಟವಲ್ಲವೇ ನೋಡೋಣ" ಎಂದು ಕೊಂಡನು. ಇವರು ಕೋರುತ್ತಿರುವ ಮಲ್ಲಯುದ್ಧದಲ್ಲಿ ಏನೋ ರಹಸ್ಯ ಅಡಗಿದೆ ಎಂದು ಅವನಿಗೆ ಅರಿವಾಯಿತು. ಅಂತಹ ಪರಿಸ್ಥಿತಿಯಲ್ಲಿ ಅವರಿಬ್ಬರನ್ನೂ ತಡೆಯುವುದು ಅಸಾಧ್ಯವಾಗಿತ್ತು. ಎಂದು ಊಹಿಸಿ, ಶೇಷ ಮತ್ತು ಮಾರುತ! ನೀವಿಬ್ಬರು ವೀರಾಗ್ರಗಣ್ಯರು. ಯಾವುದೇ ಕಾರಣವಿಲ್ಲದೆ ಮಲ್ಲಯುದ್ಧ ಮಾಡುವುದರಿಂದ ಲೋಕದಲ್ಲಿ ಅಲ್ಲೋಲ ಕಲ್ಲೋಲ ಉಂಟಾಗುತ್ತದೆ. ನನ್ನನ್ನು ಕೇಳುತ್ತಿರುವುದರಿಂದ ನಿಮಗೆ ಒಂದು ಉಪಾಯ ಹೇಳುತ್ತೇನೆ. ಕನಕನಗರದಿಂದ ಜನಿಸಿರುವುದೇ ವೆಂಕಟಾದ್ರಿ. ಆ ವೆಂಕಟಾದ್ರಿಯನ್ನು ಆದಿಶೇಷನು ಸುತ್ತಿ ತನ್ನ ಬಂಧನದಲ್ಲಿಟ್ಟುಕೊಳ್ಳಬೇಕು. ಪವನನು ತನ್ನ ಬಲದಿಂದ ವೆಂಕಟಗಿರಿಯನ್ನು ಎತ್ತಬಹುದಾದರೆ ಅವನು ಅತ್ಯಂತ ಬಲಿಷ್ಠ, ಇಬ್ಬರ ನಡುವಿನ ಬಲಪರೀಕ್ಷೆಗೆ ಇದಕ್ಕಿಂತ ಉತ್ತಮವಾದ ಉಪಾಯ ಇನ್ನೊಂದಿಲ್ಲ.

ಇಬ್ಬರೂ ಪೌರುಷ ಉಳ್ಳವರಾಗಿದ್ದರಿಂದ ಹರಿಯ ಮಾತನ್ನು ಒಪ್ಪಿದರು.

ಹರಿ ಸೂಚನೆಯಂತೆ ಆದಿಶೇಷನು ಸಾವಿರ ತಾಳೆಗರಿಗಳಿಂದ ಬಂಧಿತವಾದಂತೆ ವೆಂಕಟಾದ್ರಿ ಪರ್ವತವನ್ನು ಬಿಗಿಯಾಗಿ ಹಿಡಿದನು. ವಾಯುದೇವನು ಪರ್ವತದ ಸುತ್ತಲೂ ಸುತ್ತುವರೆದಿದ್ದ ಶೇಷನನ್ನು ಸೂಕ್ಷ್ಮವಾಗಿ ಗಮನಿಸಿದನು. ತನ್ನ ಶಕ್ತಿಯನ್ನು ಹೆಚ್ಚಿಸಿಕೊಂಡು ಮೊದಲು ಪರ್ವತವನ್ನು ಕದಲಿಸಲು ಪ್ರಯತ್ನಿಸಿದನು.

ಈ ಸಮಯದಲ್ಲಿ ಭೂಮಿಯು ಕಂಪಿಸಲಾರಂಭಿಸಿತು. ಬ್ರಹ್ಮೇಂದ್ರಾದಿಯರು ಮಾರುತ ಮೂರ್ತಿಯ ಬಳಿಗೆ ಹೋಗಿ, "ವಾಯುದೇವ! ನೀನು ಹೀಗೆ ಮಾಡುವುದು ಸರಿಯಲ್ಲ. ನಿಮ್ಮಿಬ್ಬರ ಪಣ ಹೋರಾಟವು ಮಾರಕ ಪರಿಣಾಮಗಳನ್ನು ಉಂಟು ಮಾಡುತ್ತಿದೆ. ಈ ಹೋರಾಟದಿಂದ ಕಲ್ಪದ ಅಂತ್ಯವಾಗುತ್ತದೆ. ಅದಕ್ಕಾಗಿಯೇ ನಾವು ಹೇಳುತ್ತಿದ್ದೇವೆ, ನಿಮ್ಮ ಹೋರಾಟವನ್ನು ನಿಲ್ಲಿಸಿ" ಆದರೆ ಮಾರುತ ಮೂರ್ತಿ ಅವರ ಮಾತು ಕೇಳಲಿಲ್ಲ. ಇಂದು ಏನಾದರೂ ಆಗಲಿ,ತೀರ್ಮಾನವಾಗಲೇ ಬೇಕು ಎಂದನು. ಈ ಸಮಯದಲ್ಲಿ ಹಿಂದೆ ಸರಿದರೆ ಸೋಲುತ್ತೇನೋ ಎಂದು ಯೋಚಿಸಿ ಹೋರಾಟವನ್ನು ಮುಂದುವರೆಸಿದ.

ಇದನ್ನೆಲ್ಲಾ ನೋಡಿದ ಬ್ರಹ್ಮೇಂದ್ರಾದಿಯರು ಶೇಷನಾದರೂ ತಮ್ಮ ಮಾತನ್ನು ಕೇಳಬಹುದೆಂದುಕೊಂಡು, "ಶೇಷ ನೀನು ಬಲಿಷ್ಠನು. ಶ್ರೀ ಹರಿಗೆ ನಿನ್ನ ಶಕ್ತಿ ಏನೆಂದು ತಿಳಿದಿದೆ, ಗೌರಿಮನೋಹರನಿಗೆ ತಿಳಿದಿದೆ, ಮತ್ತು ನಮಗೂ ತಿಳಿದಿದೆ" ಎಂದು ಹೊಗಳಿದನು. ಶೇಷ ಅವರ ಮಾತುಗಳನ್ನು ಕೇಳಲಿಲ್ಲ. ಆದರೆ, ಬ್ರಹ್ಮೇಂದ್ರಾದಿಯರು ಮತ್ತೊಮ್ಮೆ ಪ್ರಾರ್ಥಿಸಲು ಮುಂದಾದರು.

ಶೇಷ ! ನೀನು ಶಕ್ತಿಶಾಲಿ, ಮತ್ತು ಮೇರು ಪರ್ವತ ಕುಮಾರನಾದ ವೆಂಕಟಾದ್ರಿಯನ್ನು ನೀನು ಸುತ್ತುವರೆದಿರುವುದರಿಂದ ಮಾರುತನು ಏನನ್ನೂ ಮಾಡಲು ಸಾಧ್ಯವಿಲ್ಲ. ಮಹಾತ್ಮ, ನೀವಿಬ್ಬರೂ ಬಲಿಷ್ಠರು. ನೀವು ಸೋಲನ್ನು ಒಪ್ಪಿಕೊಳ್ಳುವುದಿಲ್ಲ.ಮಾರುತನೂ ಸಹ ಆತ್ಮಾಭಿಮಾನದಿಂದ ತನ್ನ ವಿಜಯವಾಗುವವರೆಗೂ ಬಿಟ್ಟು ಕೊಡುವುದಿಲ್ಲ. ನೀವಿಬ್ಬರೂ, ಪರಸ್ಪರ ಪ್ರತಿಜ್ಞೆಗಳನ್ನು ತ್ಯಜಿಸಿ ರಾಜಿಮಾಡಿಕೊಳ್ಳಿ ಜನರನ್ನು ಭಯಭೀತಗೊಳಿಸಬೇಡಿ.

- ಮುಂದುವರೆಯುತ್ತದೆ.



# ಆಳ್ವಾರುಗಳು ಕಂಡ ತಿರುವೇಂಗಡ

– ಎಂ. ಆರ್. ನರಸಿಂಹನ್

ಕಳೆದ ಸಂಚಿಕೆಯಿಂದ

ಪ್ರಕೃತಿಯಲ್ಲಿ ಈ ನೂರು ಪಾಶುರಗಳಲ್ಲಿ 8 ಪಾಶುರಗಳಲ್ಲಿ ಮಾತ್ರ ವೇಂಗಡದ ವಿಷಯವಿದ್ದು ನಮ್ಮಾಳ್ವಾರ್ (ಪರಾಂಕುಶ ನಾಯಿಕೆಯ)ರ ವಿರಹೋದ್ವೇಗವು ತಿರುವೇಂಗಡದ ಒಡೆಯನ ಮೇಲೆ ಹೇಗೆ ಹೊರಹೊಮ್ಮುತ್ತದೆ ಎಂಬುದರ ಅರಿವಾಗುತ್ತದೆ. ಈ ವಿಲಕ್ಷಣ ಮಂಗಳಾಶಾಸನವು ನಮ್ಮ ಚಿತ್ತವನ್ನು ಅಪಹರಿಸದೇ ಇರದು. ಇಲ್ಲಿಯವರೆಗೂ ನಾವು ಅವಲೋಕಿಸಿದ ಕಾವ್ಯಮಾರ್ಗ, ಕಾವ್ಯವಸ್ತು, ಶೈಲಿ ಇವುಗಳಿಗಿಂತ ಭಿನ್ನವಾಗಿದ್ದು ಇದೇ ಪ್ರತ್ಯೇಕವಾಗಿ ನಿಲ್ಲುತ್ತದೆ. ನಾವೀಗ ಹೊಸ ಸ್ತರ, ಹೊಸ ಪ್ರಪಂಚಕ್ಕೆ ಕಾಲಿಡುತ್ತೇವೆ. ಈ ಹಿಂದೆ ಆಳ್ವಾರ್ ತಿರು ವಂದಾದಿಗಳಲ್ಲಿ ಮುಕ್ತಕಗಳ ರೀತಿ ಅಲ್ಲೊಮ್ಮೆ ಇಲ್ಲೊಮ್ಮೆ ಈ ನಾಯಕೀ ಭಾವ ಮಿಂಚಿತ್ತು. ಆದರೆ ಅದರ ರೀತಿ ಬೇರೆ, ಇಲ್ಲಿನ ಎಂಟು ಪಾಶುರಗಳದ್ದೇ ಭಿನ್ನ ರೀತಿಯದು. ಇದು ನಮ್ಮಾಳ್ವಾರ್ ಅವರದೇ ವೈಶಿಷ್ಟ್ಯಮಯವಾದ ಶೈಲಿ-"ಗಗನಂಗಗನಾಕಾರಂ" ಎನ್ನುವಂತೆ!

ಇದನ್ನೇ ಶ್ರೀಮತಿ ಪ್ರೇಮ ನಂದಕುಮಾರ್ ಎನ್ನುವವರು ತಮ್ಮ Nammlawar's "Tiruviruttam" The Drama of the love Divine ನ ಈ ಕೆಳ ಕಂಡಂತೆ ವಿವರಿಸುತ್ತಾರೆ. Tiruviruttam is so called because of its autobiographical slat; The Vruttanta or happening that is described here is the mystic vision of the divine Vouchsafed to Nammalwar. The opening verse underlines the "all pervading" nature of the Divine, the lord Who manifests as everything on this earth. It is to this lord who Suffered as one of us that we have to pray to redeem us from false knowledge wrong conduct, body of dirt. However, our prayers Must be as the flame of aspiration symbolised by the heroine of Tiruviruttam. The heroine is the jiva, our soul struggling to reach the Divine and it

is seen to go through the different mystical states, such as aspiration,the dark night of the soul, yearning, prostration and the vision. The inner drama of the Divine is conched in the vestments of a young girl's love-lorn state. She yearns for her beloved her servant acts as an ambassador and her mother gives the necessary help for the meeting to take place the different psychic moods are projected with the help of nature imagery. The blandishments of Samsara that torture the soul seeking the Divine are symbolised by the many pronged attack of nature on the girl in love. However no where are we left in doubt about Nammalwar's intention, which is really a tryst with the Divine. Almost every verse carries reference to the Lord. We Absorb the all pervading glorius manifestation of the Divine,as we do while reading the "riks in the Rigveda" It is this realisation that leads us to the heaven of Spiritual peace."

ತಿರುವಿರುತ್ತಂನಲ್ಲಿ 8,10,15,31,60,67,81- ಈ ಏಳು ಪಾಶುರಗಳಲ್ಲಿ ತಿರುವೇಂಗಡದ ವಿಷಯವು ಬಂದಿರು ವುದಾಗಿ ಶ್ರೀ ಎನ್.ಎಸ್. ಅನಂತರಂಗಾಚಾರ್ಯರು ತಮ್ಮ ಪುಸ್ತಕ ದಲ್ಲಿ ಹೇಳಿದ್ದಾರೆ. ಟಿ.ಟಿ.ಡಿ ಅವರ ಪುಸ್ತಕದಲ್ಲಿ 50 ನೆಯ ಪಾಶುರವೊಂದನ್ನು ಸೇರಿಸಿದ್ದಾರೆ. ಅಲ್ಲಿ ಬರುವ "ಮಾಮ ಲೈಕ್ಕೇ" ಎನ್ನುವ ಸಂಬೋಧನೆಯನ್ನು ವೇಂಗಡವನ್ನೇ ಕುರಿತ ದ್ದಾಗಿ ಅರ್ಥಮಾಡುತ್ತಾರೆ.

ಇಷ್ಟು ದಿವಸಗಳು ನೋಡಿದ್ದು, ಕೇಳಿದ್ದು, ತಿಳಿದಿದ್ದು ಎಲ್ಲಾ ಸುಳ್ಳಾಯಿತು. ಅವನು ಸಂಪೂರ್ಣ ಹೃದಯವಿಹೀನನೆಂದು ಕಾಣುತ್ತದೆ. ಎಲ್ಲವೂ ಬರಿಯ ನಟನೆ, ಸೋಗುಗಳು, ಪರ್ವತ ವನ್ನು ಎತ್ತಿದ ಕೃಷ್ಣನು ಈಗ ನಿತ್ಯಸೂರಿಗಳು ಆಶ್ರಯಿಸು ವಂತಹ, ಎತ್ತರವಾದ ವೇಂಗಡದ ಶಿಖರವನ್ನು ವಾಸಸ್ಥಾನ ವನ್ನಾಗಿ ಮಾಡಿಕೊಂಡು ನಮ್ಮಂತಹವರಿಗೆ ದುರ್ಲಭನಾಗಿ ದ್ದಾನೆ. ಅವನನ್ನು ಹೊಂದಬೇಕೆಂದಿದ್ದ ನಮ್ಮ ಆಸೆ ಆಕಾಂಕ್ಷೆ ಗಳೆಲ್ಲ ಮೃಗಮರೀಚಿಕೆಯಂತೆಯೇ ಆಯಿತು. ವೇಂಗಡದ ಬೆಟ್ಟವು ಎಷ್ಟು ಕಠಿಣವೋ, ಅವನ ಮನಸ್ಸೂ ಕೂಡಾ ಅಷ್ಟೇ ಕಠಿಣವಾಯಿತಲ್ಲ! ಅಯ್ಯೋ (8) ಆಶ್ಚರ್ಯಗುಣಚೇಷ್ಟಿತನಾದ ಸರ್ವೇಶ್ವರನಿರುವ ಬಡಗು ವೇಂಗಡದ ಮೇಲಿರುವ ಲತಾ ತನ್ವಿಯರೇ ! ನನ್ನ ದುಃಖ ಅಳಲನ್ನು ಯಾರಿಗೆ ನಾನು ಹೇಳಿ ಕೊಳ್ಳಲಿ? ನೀವಾದರೂ ಕೇಳಕೂಡದೆ? ನನಗೆ ಹುಚ್ಚಾಗಿ ರುವುದು ಆ ಇನಿದಾದ ಧ್ವನಿಸಂಪತ್ತೋ ತೊಂಡೇಹಣ್ಣಿ ನಂತಹ ಪಕ್ವಬಿಂಬೋಷ್ಠವೋ ತಿಳಿಯದಲ್ಲಾ, ಅಯ್ಯೋ (10) ಸಖಿಯು ಬಂದವನನ್ನು ಗದರಿಸಿಕೊಳ್ಳುತ್ತಾಳೆ. ಆನೆಯನ್ನು ಹುಡುಕಿಕೊಂಡು ಬಂದೆಯಲ್ಲವೆ ಬೇಟೆಗಾರನೇ! ಅದು ಸಿಕ್ಕದೇ ಹೋಗಲು ನಮ್ಮ ಯಜಮಾನಿಯನ್ನೇ ನೋಡುತ್ತ ನಿಂತು ಬಿಟ್ಟೆಯಲ್ಲಾ ನಿನಗೆ ನಾಚಿಕೆ ಇಲ್ಲವೇನು? ನಮ್ಮ ಯಜ ಮಾನಿಯ ಕಣ್ಣನ್ನೇ ನೋಡುತ್ತಾ ಅದು ಮೀನೆಂದು ಭ್ರಮಿಸಿ ಹೊಗಳಲಾರಂಭಿಸಿದೆ! ಇದೇನು ನಿನ್ನ ವಿಪರೀತ ವರ್ತನೆ ನೋಡಿದವರು ಏನೆಂದು ಕೊಂಡಾರು? ಸಪ್ತ ಸಾಗರದ ನೀರನ್ನೆಲ್ಲಾ ಆಪೋಶನವನ್ನಾಗಿ ಮಾಡಿಕೊಂಡು ಕುಡಿದವನ ಕಾಲ ಮೇಘದಂತಹ ಮೈಕಾಂತಿಯುಳ್ಳ ವೇಂಗಡ ದೊಡೆ ಯನು ವಿಹರಿಸುವ ಹರ್ಮ್ಯದ ಹಿಂದಿನ ಹಿತ್ತಲಲ್ಲಿ ಅವನೇ ನಾದರೂ ಅಪ್ಪಿ ತಪ್ಪಿ ಯಾರೂ ಕಾಣಿಸಿಕೊಳ್ಳುವನೋ ಎಂದು ಕಾದು ಕಾದು ಬೇಸತ್ತೆವು, ನಾನೂ ನನ್ನ ಸಖಿಯೂ ಕೂಡ. ಅವಳಂತೂ ನಿರಾಶಳಾಗಿ ಕಂಗೆಟ್ಟಳು.

ಆಗ ಸ್ವಲ್ಪವೂ ಅವಳನ್ನು ಲಕ್ಷಿಸಲೇ ಇಲ್ಲ.ಅವಳಿಗಾದ ನಿರಾಶೆ ಯನ್ನೂ ಗಣಿಸಲಿಲ್ಲ. ಈಗ ಮಾತ್ರ ಏನೂ ತಿಳಿಯ ದವನಂತೆ ಇಲ್ಲಿಗೆ ಬಂದು ಅವಳ ಸೌಂದರ್ಯವನ್ನು ವರ್ಣಿಸಿ ಸ್ತೋತ್ರ ಮಾಡುತ್ತಿರುವೆ. ಹೀಗಿರುವಾಗ ನಿನ್ನ ಸಂಗಡ ಮಾತ ನಾಡುವುದೂ ಸರಿಯಲ್ಲ.

ಇಲ್ಲಿಂದ ಹೊರಡು ಒಂದು ಕ್ಷಣವೂ ನಿಲ್ಲಬೇಡ! (15) ಅಂದವಾದ ಮುತ್ತು ರತ್ನಗಳ ಕಾಂತಿಯಿಂದ ಮೆರೆಯುವ ಶಿಖರಗಳಿಂದ ರಾರಾಜಿಸುತ್ತಿರುವ ವೇಂಗಡದ ಮೇಲೆ ಸಂಚರಿ ಸುತ್ತಿರುವ ಮೇಘಗಳೇ! ನೀವು ಒಮ್ಮೆಯಾದರೂ ಅಲ್ಲಿರುವ ನನ್ನ ಸ್ವಾಮಿಯ ತಲೆಯ ಮೇಲೆ ಸಂಚಾರ ಮಾಡಲೇ ಬೇಕ ಲ್ಲವೇ? ಹಾಗೆ ಸಾಗುವಾಗ ನನ್ನ ಹೃದಯವಿದ್ರಾವಕವಾದ ಸಂದೇಶವನ್ನೇಕೆ ನೀವು ಅವನಿಗೆ ತಿಳಿಸಕೂಡದು? ನೀವು ನನ್ನ ಕೋರಿಕೆಯನ್ನು ನಡೆಸಿಯೇ ಕೊಡುವಿರೆಂಬ ಭರವಸೆ ನನಗುಂಟು. ಏತಕ್ಕೆಂದರೆ ನೀವು ನನ್ನ ತಲೆಯ ಮೇಲೆ ಸಾಗುವಾಗಲಲ್ಲವೆ ನಾನು ನಿಮ್ಮನ್ನು ಬೇಡಿಕೊಳ್ಳುತ್ತಿರುವುದು.

- ಮುಂದುವರೆಯುತ್ತದೆ.

ಧಾರಾವಾಹಿ

# ತಿರುಮಲೆ ಕಾಲಮಾನಾಚರಣೆಗಳು

- ಮೂಲ . ಡಾ|| ಎನ್.ಸಿ.ವಿ. ನರಸಿಂಹಾಚಾರ್ಯ
- ಅನುವಾದ : ಶ್ರೀಮತಿ



**ಕಳೆದ ಸಂಚಿಕೆಯಿಂದ**

ಪ್ರಾಚೀನ ಕಾಲದಲ್ಲಿ ಶ್ರೀರಾಮಾನುಜ ದರ್ಶನ ಪ್ರವರ್ತಕರಾಗಿ ಮಣವಾಳ ಮಹಾಮುನಿಗಳು (ವರವರ ಮುನಿಗಳು) ತಿರುಪತಿಗೆ ಸಂದರ್ಶನವನ್ನಿತ್ತು ದೇಶಾಧಿ ಪತಿಯನ್ನು ಆಶೀರ್ವಾದಿಸಿ ಆ ಸ್ಥಳದ ಮತಾಂತರ ಸ್ಥಳಿಂದ ಯಾವುದೇ ತೊಂದರೆಯುಂಟಾಗದಿರಲು ಒಬ್ಬ ಉತ್ತಮಾಶ್ರಯಿಯನ್ನು ಸ್ಥಳಪತಿಯಾಗಿ ಮಾಡಬೇಕೆಂದು ಚಿಂತಿಸಿ, ತಮ್ಮ ಶಿಷ್ಯರಾದ ರಾಜವಲ್ಲಭರಾದ ಭಗವದ್ ಕೈಕಂರ್ಯ ದುರಂಧರರಾದ ಕೋವಿದರಾದ (ಶ್ರೀರಂಗದ) ಶ್ರೀರಂಗ ನಾರಾಯಣ ಜಿಯ್ಯರು ಎಂಬು ವರು ಶ್ರೀಭಂಡಾರಕ್ಕೆ ನಿರ್ವಾಹಕರಾಗಿರಲು, ತಿರು ಪತಿಯ ಉದ್ಧಾರಕ್ಕಾಗಿಯೂ ನಿಗ್ರಹಾನುಗ್ರಹ ಸಮರ್ಥ ರಾದ ಒಬ್ಬ ಜಿಯ್ಯರನ್ನು "ಕೋಯಿಲ್ ಕೇಳ್ವಿ ತಿರು ವೇಂಗಡ ಜಿಯ್ಯರ್'' ಎಂಬ ನಾಮಧೇಯದಿಂದ ದೇಶಾಧಿಪತಿಯ ಅನುಮತಿ ಪಡೆದು ಅರ್ಚಕರೇ ಮುಂತಾದ ಪರಿಚಾರಕರನ್ನೂ, ಸ್ಥಳ ನಿರ್ವಾಹಕರನ್ನೂ, ಆಳ್ವಾರ್ ಗೋವಿಂದಜಿಯ್ಯರ್ ಎಂಬೊಬ್ಬ ಶ್ರೀವೈಷ್ಣ ವರನ್ನು ತಿರುವೇಂಗಡ ಜಿಯ್ಯರಿಗೆ ಅಧೀನರಾದ ವರನ್ನಾಗಿ ಮಾಡಿ ಇವರೆಲ್ಲರಿಗೂ ಅವರು ಶಿಕ್ಷಕ ರಾಗಿಯೂ ರಕ್ಷಕರಾಗಿಯೂ ಶ್ರೀವೇಂಕಟೇಶ್ವರನ ಸಕಲ ಸಂಪದಗಳಿಗೆ ಭಾದ್ಯರಾಗಿ ದೇಶಾಧಿಪತಿಗೆ ಭಗವದ್ಧರ್ಮೋಪದೇಶಕರಾಗಿಯೂ ನೇಮಿಸಿ ಶ್ರೀಭಗವ ದ್ರಾಮಾನುಜ ಶ್ರೀವಿಗ್ರಹ ಮುದ್ರೆಯಾಗಿ ಒಂದು ಮುದ್ರಾಂಕಿತವನ್ನು ಮಾಡಿಸಿ ಜಿಯ್ಯರು ಅದನ್ನು ಧರಿಸು ವಂತೆ ಹೇಳಿ, ಒಂದು ವಿಷ್ವಕ್ಸೇನಮುದ್ರಾ ಸೂಚಕವಾಗಿ ಭಗವದ್ರಾಮಾನುಜರ ಆಜ್ಞಾನುಸಾರವಾಗಿ ಏಕಾಂಗಿ ಪರಂಪರೆಯ ಪ್ರಾಪ್ತವಾದ ಗಂಟೆ, ಕಟಾರಿ, ಹನುಮ ಧ್ವಜಗಳನ್ನು ಅವರ ವಶಕ್ಕೆ ಕೊಟ್ಟ ಕೈಂಕರ್ಯ ಯಾತ್ರೆ ಸಂದರ್ಭದಲ್ಲಿ ಘಂಟಾನಾದ ಹನುಮದ್ಧ್ವಜ ಪುರಸ್ಸರ ವಾಗಿ ಸಂಚಾರವನ್ನು ಮಾಡಬೇಕೆಂದು ನೇಮಿಸಿದ್ದಾರೆ.

**ವಿಷ್ಣೋಃಪೂಜಾದಿಕರ್ಮಾಣಿಧರ್ಮಾಂಶ್ಚಪುರುಷಾ ಯುಷಾ**
**ನಿಯವ ಽಸ್ಥಃ ಸದಾ ಭಿಕ್ಷುಃ ಕಾರಯೇತೋಪದೇಶತಃ**
**ಯತಿಸ್ತು ವೈಷ್ಣವಂ ಕ್ಷೇತ್ರ ಮಧಿಪ್ಠಾಯ ಶುಚಿಸ್ತದಾ**

**ವ್ಯಾಕುರ್ವನ್ನಿಗಮಾಂತಾರ್ಥಾನ್ ಆಶ್ರಿತಾನಾಂ ಹಿತಂ ವದನ್**
**ಕಾಲ ಕ್ಷೇಪೇ ತ್ರಯತ್ನೇನ ಕರ್ಮಣಾ ಬ್ರಹ್ಮಚಿಂತನಾತ್॥**

(ಭಿಕ್ಷವು-ಅಂದರೆ ಸನ್ಯಾಸಿ ಪುರುಷಾಯುಷವಂತನಾಗಿ ನಿಯಮಸ್ಥನಾಗಿ ವಿಷ್ಣು ಪೂಜಾದಿ ಕರ್ಮಗಳನ್ನು ಧರ್ಮವಿಧಿಗಳನ್ನು ಉಪದೇಶಿಸಿ ಯಾವಾಗಲೂ ಆಚರಣೆ ಮಾಡತಕ್ಕದ್ದು. ಯತಿ ಸದಾ ಶುಚಿಯೈ ವೈಷ್ಣವ ಕ್ಷೇತ್ರಗಳಲ್ಲಿ ನೆಲೆಸಿ ವೇದಾಂತಾರ್ಥಗಳನ್ನು ವ್ಯಾಖ್ಯಾನಿಸುತ್ತಾ ಆಶ್ರಿತರನ್ನು ಹಿತೋಪದೇಶ ಮಾಡುತ್ತಾ ಸತ್ಕರ್ಮಗಳೊಂದಿಗೆ, ಬ್ರಹ್ಮಚಿಂತನೆಯೊಂದಿಗೆ, ಪ್ರಯತ್ನದೊಂದಿಗೆ ಕಾಲವನ್ನು ಕಳೆಯತಕ್ಕದು) ಸನ್ಯಾಸಿ ಧರ್ಮವನ್ನು ಹೇಳುವ ಜಿಯ್ಯರ್ ಸಾಂಗೋಪಾಂಗವಾಗಿ ವೇದಾಂತ ಪ್ರವಚನ ಮಾಡುತ್ತಾ ಹಲವು ಚೇತನರನ್ನು ಶ್ರೀರಾಮಾನುಜ ದರ್ಶನ ಸ್ಥಳದಲ್ಲಿರುವಂತೆ ಮಾಡಿ, ಶ್ರೀ ವೇಂಕಟೇಶ್ವರನ ಸಂಪದಗಳಭಿವೃದ್ಧಿಗಾಗಿ ದುಡಿಯುತ್ತಾ, ಶ್ರೀವೇಂಕಟಾಚಲಪತಿ, ಶ್ರೀಗೋವಿಂದರಾಜುಸ್ವಾಮಿ ಮೊದಲಾದ ದಿವ್ಯ ಶರೀರಕ್ಕಾಗಿ, ಶ್ರೀಮುಖಕ್ಕಾಗಿ (ಬಾಯಿಗೆ) ಉಚಿತವಾದ ಔಪಚಾರಿಕ ಸಾಂಸ್ಪರ್ಶಿಕ, ಅಭ್ಯವಹಾರಿಕ, ರೂಪಗಳಾದ ಉಪಚಾರಗಳನ್ನು (ಮಣವಾಳ ಮಹಾಮುನಿಗಳು) ಮಾಡಿಸುವುದು ಭಗವದ್ರಾಮಾನುಜರ ಆಜ್ಞೆಯ ಮೇರೆಗೆ ನೇಮಿಸಿದ ತಿರುವೇಂಗಡಜಿಯ್ಯರನ್ನು ಅನೇಕ ಧರ್ಮಗಳನ್ನು ಆಜ್ಞಾಪಿಸಿ ಜರುಗಿಸುತ್ತಿದ್ದರು.

**ಯಸ್ತು ಜೀರ್ಣಾನಿ ಧರ್ಮಾನಿ ವಿಷ್ಣೋರ್ಣವ್ಯಾನಿ ಚಾದರಾತ್**
**ಉದ್ಧರ ತ್ಯಗ್ರಪೂಜಾಂ ಸಂಪ್ರಾಪ್ನುಯಾ ದ್ದೇವಸನ್ನಿಧೌ**

**ಸೆಪ್ಟೆಂಬರ್ ತಿಂಗಳ ಪದಪ್ರಶ್ನೆಯ ಉತ್ತರಗಳು**

01. ನೀರು
02. ವೆಂಕಟನಾಯಕ
03. ಶ್ರೀ ವೈಷ್ಣವ
04. ವಿಜಯಭೂಮಿ
05. ಮೇ
06. ಭವಿಷ್ಣೋತ್ತರ
07. ಅಲಂಕಾರ
08. ಹೃಷಿಕೇಶರೂಪಿ
09. ಹೃದಯ
10. ವೆಂಕಟಗಿರಿ
11. ವಿಷ್ಣು
12. ಸುಪ್ರಭಾತ
13. ಮೈಸೂರು
14. ಭೀಮ
15. ಧೌಮ್ಯ ಮಹರ್ಷಿ

(ಯಾರು) ನಮೂದಿತವಾದ ಧರ್ಮಗಳನ್ನಾಗಲೀ, ನವ್ಯ ಧರ್ಮಗಳನ್ನಾಗಲೀ ಭಕ್ತಿಯಿಂದ ಆಚರಿಸುವರೋ ಅಂತಹವರು ದೈವ ಸನ್ನಿಧಿಯಲ್ಲಿ ಅಗ್ರ ಪೂಜೆಗೊಳ್ಳುವರು) ಅಂದಹಾಗೆ, ವೈಷ್ಣವಶಾಸ್ತ್ರ ಸಾರದಲ್ಲಿ ಶ್ರೀ ಭಗವದ್ರಾಮಾನುಜರು,ನಿಯಮಿಸಿದ ಹಾಗೆಯೇ ಸೇನಾಪತಿ ಜಿಯ್ಯರು. ಶ್ರೀಶೈಲಪೂರ್ಣರು ಪ್ರಬಂಧ ಗಾಯಕರಾದ ಅನಂತಚಾರ್ಯರು, ತಿರುಪ್ಪಣಿಪ್ಪಿಳ್ಳೈ-ಎಂಬ ಈ ಕ್ರಮದಂತೆ ಇವರಿಗೆ ತೀರ್ಥ ಮಂಗಳಾಶಾಸನ ಜರುಗಿಸುವುದಕ್ಕೂ ಮುಂದೇಯೇ ಉತ್ತಮಾಶ್ರಮಿಗಳಾದ ವಿಷ್ವಕ್ಸೇನ ಮುಂದ್ರಾಕಿಂತರಾಗಿರಲು ನಂತರ, ತೀರ್ಥವಾಸಿ, ದೇಶಾಂತರಿಗಳಾದ ಜಿಯ್ಯರು, ಶ್ರೀವೈಷ್ಣವರ ಆದಾದ ಮೇಲೆ ಸಕಲ ಸ್ಥಳಗಳಲ್ಲಿ ಅನೇಕ ಕೈಂಕರ್ಯಗಳನ್ನು ಮಾಡಿದವರಿಗಾಗಿ ಕಂದಾಡೈ ರಾಮಾನುಜಯ್ಯಂಗಾರರಿಗೆ ತೀರ್ಥ, ಮಂಗಳಾಶಾಸನವನ್ನು ಏರ್ಪಾಟು ಮಾಡಿ ಶ್ರೀ ವೆಂಕಟಾಚಲಪತಿ, ಭಗವದ್ರಾಮಾನುಜರ ನಿಯಮದ ಕ್ರಮದಂತೆ ಅಧ್ಯಯನೋತ್ಸವ ಆಚರಿಸುವಂತೆ ಸ್ಥಳ ವಿಲಕ್ಷಣವಾದುದರಿಂದಲೇ ಎಲ್ಲಾ ರೀತಿಯಲ್ಲೂ ಒಂದು ಪತ್ರವನ್ನು ಬರೆದು ಕೊಟ್ಟು ಶ್ರೀರಾಮಾನುಜ ಪುರದಲ್ಲಿ ಜಿಯ್ಯಾರ್ ಅವರಿಗೆ ಒಂದು ಮಠವನ್ನು ಸಂಕಲ್ಪಿಸಿ ಕೊಟ್ಟು ತಿರುವೇಂಗಡ ಜಿಯ್ಯರ ಜ್ಞಾನ ಸಂತಾನ ಪರಂಪರಾಂತರ್ಭೂತರಿಗೆ ಒಬ್ಬರನ್ನು ಶ್ರೀವೈಷ್ಣವರಲ್ಲಿ (ಒಬ್ಬರಿಗೆ)ತಿರುಮಲೆ ಸ್ಥಾನದಲ್ಲಿ ಆಯಾ ಕಾಲದಲ್ಲಿ ಉತ್ತಮಾಶ್ರಮಿಯಾದವನ್ನು ತಿರುವೇಂಗಡ ನಾಡಿಗೆ ಶ್ರೀವೇಂಕಟೇಶ್ವರೈಶ್ವರ್ಯಗಳಿಗೆ ಸಂರಕ್ಷಕರನ್ನಾಗಿ ನಿಯಮಿಸಿದ (ಶ್ರೀಮಣವಾಳ ಮಹಾಮುನಿಗಳು) ಶ್ರೀರಂಗಕ್ಕೆ ತಿರುಗಿ ಹೋದರು. ಈ ಐತಿಹ್ಯ ಮಾಲಾ ಪ್ರಬಂಧವನ್ನು ಮಲೈಕುನಿಯ ನಿನ್ರಾರ್ ಅರೈಯರ್ ಶ್ರೀ ಭವನದಲ್ಲಿ ಶ್ರೀ ಕೋಶವನ್ನು ನೋಡಿ ಬರೆದುದು.

(ಮುಂದುವರೆಯುತ್ತದೆ)

# ಜಾಗೃತ ಪವಿತ್ರ ನರಸಿಂಹ ಕ್ಷೇತ್ರ ಯಾದಗಿರಿ

– ಡಾ|| ಸುಮನ ಬದರೀನಾಥ್
94820 94855

ಯಾದಾದ್ರಿ ಅಥವಾ ಯಾದಗಿರಿ ಗುಟ್ಟವು ದಕ್ಷಿಣ ಭಾರತದ ಪ್ರಖ್ಯಾತ ನರಸಿಂಹ ಕ್ಷೇತ್ರಗಳಲ್ಲಿ ಒಂದಾಗಿದೆ. ತೆಲಂಗಾಣ ರಾಜ್ಯದ ನಲಗೊಂಡ ಜಿಲ್ಲೆಯ ಭೋಗೀರ್ ತಾಲ್ಲೂಕಿನಲ್ಲಿದೆ. ಪೂರ್ವದಲ್ಲಿ ಭೋಂಗೀರ್ ಭುವನಗಿರಿ ಎಂದು ಕರೆಯಲ್ಪಡುತ್ತಿತ್ತು. ಯಾದಗಿರಿ ಹೈದರಾಬಾದ್ ನಿಂದ ಸುಮಾರು 50 ಕಿ.ಮೀ. ದೂರದಲ್ಲಿದ್ದು ಸಂಪರ್ಕ ವ್ಯವಸ್ಥೆ ಉತ್ತಮವಾಗಿದೆ.

ಯಾದಗಿರಿ ಕ್ಷೇತ್ರದ ಮಹಿಮೆ ಸ್ಕಾಂಧ ಪುರಾಣದಲ್ಲಿ ವರ್ಣಿತವಾಗಿದೆ. ತ್ರೇತಾಯುಗದಲ್ಲಿ ವಿಭಾಂಡಕನೆಂಬ ಮಹರ್ಷಿಯ ಮಗ ಋಷ್ಯಶೃಂಗ ಮುನಿಯು ಮಹಾ ತಪಸ್ವಿಯೆಂದು ಪ್ರಸಿದ್ಧನಾಗಿದ್ದನು. ಅವನ ಮಗನೇ ಯಾದವ. ಬಾಲ್ಯದಿಂದಲೂ ಯಾದವ ಶ್ರೀಮನ್ನಾರಾಯಣನ ನರಸಿಂಹಾವತಾರದ ಭಕ್ತನಾಗಿದ್ದ. ದೇವರ ಆ ಸ್ವರೂಪದರ್ಶನ ಮಾಡಬೇಕೆಂದು ಹಂಬಲಿಸುತ್ತಿದ್ದನು. ದೇವರನ್ನು ಪ್ರತ್ಯಕ್ಷೀಕರಿಸಿಕೊಳ್ಳಲೆಂದು ತಪಗೈಯಲು ನಿರ್ಧರಿಸಿ, ಅದಕ್ಕಾಗಿ ಪ್ರಶಾಂತ ಸ್ಥಳವನ್ನು ಅರಸುತ್ತಾ ಈ ಕ್ಷೇತ್ರಕ್ಕೆ ಬಂದ. ಇಲ್ಲಿಯ ವನಸಿರಿಗೆ ಪ್ರಕೃತಿ ಸೌಂದರ್ಯಕ್ಕೆ ಪ್ರಶಾಂತತೆಗೆ ಮನ ಸೋತು ಇಲ್ಲೇ ತಪಗೈಯಲು ನಿರ್ಧರಿಸಿದ. ಅವನ ಧೃಡ ಭಕುತಿಗೆ, ಕಠಿಣ ತಪಸ್ಸಿಗೆ ಮೆಚ್ಚಿ ಒಲಿದ ಶ್ರೀಮನ್ನಾರಾಯಣ ಅವನಿಗೆ ಅವನು ಬಯಸಿದ ನರಸಿಂಹ ರೂಪದಲ್ಲೇ ದರ್ಶನ ನೀಡಿದ. ಆನಂದದಿಂದ ಯಾದವ ಬಗೆಬಗೆಯಾಗಿ ನರಸಿಂಹ ಸ್ವಾಮಿಯನ್ನು ಸ್ತೋತ್ರಮಾಡಿದ. ಭಗವಂತನು ಬೇಕಾದ ವರಗಳನ್ನು ನೀಡುವೆನೆನ್ನಲು ಯಾದವ ಅವನು ಜ್ವಾಲಾನರಸಿಂಹ, ಗಂಡಭೇರುಂಡ ನರಸಿಂಹ, ಯೋಗಾನಂದ ನರಸಿಂಹ ಸ್ವರೂಪಗಳನ್ನು ತೋರಿ ಯುಗಾಂತರದ ಜನರನ್ನು ರಕ್ಷಿಸಲು ಈ ಸ್ವರೂಪಗಳಿಂದ ಈ ಗಿರಿಯಲ್ಲೇ ನೆಲಸಬೇಕೆಂದು ಬೇಡಿಕೊಂಡ ಹಾಗೇ ಆಗಲೆಂದು ವರವಿತ್ತ ಶ್ರೀಮಹಾವಿಷ್ಣುವು ಆ ಬೆಟ್ಟದ ಮೇಲೆ ನೆಲೆಸಿದ. ಯಾದವ ತಪಸ್ಸು ಮಾಡಿದ ಬೆಟ್ಟ ಯಾದವಗಿರಿ ಎಂದು ಹೆಸರು ಪಡೆಯಿತು. ಕಾಲಾನು ಕಾಲದಲ್ಲಿ ಈ ಪ್ರದೇಶದಲ್ಲಿ ದಟ್ಟವಾದ ಅರಣ್ಯ ಬೆಳೆಯಿತು. ದೇವರ ಸ್ವರೂಪ ಆ ಅರಣ್ಯದಲ್ಲಿ ಅಡಗಿತು. ಹೀಗಿರಲು ಒಂದು ದಿನ ರಾತ್ರಿ ಬಳಿಯ ಊರಿನ ಅಧಿಕಾರಿಯೊಬ್ಬನ ಸ್ವಪ್ನದಲ್ಲಿ ಭಗವಂತನು ದರ್ಶನವಿತ್ತು ತಾನು ಆ ಬೆಟ್ಟದ ಮೇಲೆ ನೆಲಸಿರುವುದಾಗಿಯೂ,ತನಗೆ ಸೂಕ್ತ ಪೂಜಾ ವ್ಯವಸ್ಥೆ ಮಾಡಬೇಕೆಂದೂ ಆದೇಶವಿತ್ತ. ಅದರಂತೆ ಅರಸುತ್ತಾ ಬಂದ ಅಧಿಕಾರಿಗೆ ಈ ಗುಹೆ ಕಂಡು ಬಂದು, ಅವನಲ್ಲಿ ಪೂಜಾದಿಗಳ ವ್ಯವಸ್ಥೆ ಮಾಡಿದ. ಅಂದಿನಿಂದ ಈ ಕ್ಷೇತ್ರದ ಮಹಾತ್ಮೆ ಬೆಳೆಯುತ್ತಾ ಬಂದು ಇದೀಗ ದೇಶದ ಸುಪ್ರಸಿದ್ಧ ನರಸಿಂಹ ಕ್ಷೇತ್ರಗಳಲ್ಲೊಂದಾಗಿದೆ.

ಯಾದಗಿರಿ ಸುಮಾರು 300 ಅಡಿ ಎತ್ತರವಿರುವ ಸಣ್ಣ ಬೆಟ್ಟ ಬುಡದಲ್ಲಿ ವೈಕುಂಠದ್ವಾರವೆಂದು ಕರೆಯಲ್ಪಡುವ ಗೋಪುರವಿರುವ ಮಹಾದ್ವಾರವಿದೆ. ಮೇಲಕ್ಕೆ ಹೋಗಲು ವಾಹನಗಳಿಗೆ ಅನುಕೂಲವಾದ ರಸ್ತೆಯೂ ಇದೆ. ಅಷ್ಟೇನೂ ಕಡಿದಲ್ಲದ ಮೆಟ್ಟಿಲುಗಳೂ ಇವೆ. ದೇಗುಲವನ್ನು ಕಂಡೊಡನೆಯೇ ಮೈಮನಗಳು ನವಿರೇಳುತ್ತದೆ. ಕೈಗಳು ತಾನಾಗಿ ಮುಗಿಯುತ್ತವೆ. ಸಿಂಹದ್ವಾರವನ್ನು ಪ್ರವೇಶಿಸಿದೊಡನೆಯೇ





ಬಲಗಡೆಗೆ ಆಂಜನೇಯನ ಸಣ್ಣಗುಡಿಯಿದೆ. ಎಡಗಡೆಗೆ ನರಸಿಂಹಸ್ವಾಮಿಯ ದೇವಾಲಯ. ಗರ್ಭಗುಡಿ ಸುಮಾರು 306 ಅಡಿ ಉದ್ಧ 12 ಅಡಿ ಅಗಲ 7-8 ಅಡಿ ಎತ್ತರವಿರುವ ಒಂದು ಗುಹೆ, ಗುಹೆಯೇ ದೇವಸ್ಥಾನವಾದ್ದರಿಂದ ಇಲ್ಲಿ ಯಾವುದೇ ತರಹದ ಶಿಲ್ಪ ಕಲೆಯಾಗಲೀ, ಚಿತ್ರಕಲೆಯಾಗಲೀ ಕಂಡು ಬರುವುದಿಲ್ಲ. ವಿಶೇಷವೆಂದರೆ ಪಂಚ ನರಸಿಂಹನ ಸ್ವರೂಪಗಳು ಈ ದೇಗುಲದಲ್ಲಿ ಕಂಡು ಬರುತ್ತವೆ. 1. ಜ್ವಾಲಾನರಸಿಂಹ 2. ಗಂಡ ಭೇರುಂಡ ನರಸಿಂಹ 3.ಯೋಗಾನಂದ ನರಸಿಂಹ 4. ಉಗ್ರನರಸಿಂಹ ಮತ್ತು 5. ಲಕ್ಷ್ಮೀನರಸಿಂಹ. ಇದರಿಂದಾಗಿ ಯಾದಗಿರಿ ಪಂಚನರಸಿಂಹ ಕ್ಷೇತ್ರವೆಂದು ಕರೆಯಲ್ಪಟ್ಟಿದೆ. ಇಲ್ಲೊಂದು ದೀಪ ಸ್ಥಳದ ಮಹಾತ್ಮೆಯನ್ನು ಪುಷ್ಠೀಕರಿಸುತ್ತಾ ಸದಾ ಉರಿಯುತ್ತಿರುತ್ತದೆ. ಗುಹಾಂತರ ದೇವಾಲಯವಾದ್ದರಿಂದ ಎಲ್ಲ ವಿಗ್ರಹಗಳ ಸ್ವರೂಪವು ಸ್ಪಷ್ಟವಾಗಿ ಗೋಚರವಾಗುವುದಿಲ್ಲ. ಜ್ವಾಲಾ ನರಸಿಂಹನ ಸ್ವರೂಪ ಹೆಡೆ ಬಿಚ್ಚಿದ ಹಾವಿನ ರೂಪದಂತಿದೆ. ಬಾಲವೂ ಅಸ್ಪಷ್ಟವಾಗಿ ಕಾಣುತ್ತದೆ. ಪ್ರಚಲಿತ ನಂಬಿಕೆಯಂತೆ ಇಲ್ಲೊಂದು ದೈವೀ ರೂಪವಾದ ಸರ್ಪವು ಆಗಾಗ್ಗೆ ಕಾಣಿಸುವುದಂತೆ. ಎದುರುಗಡೆಗೆ ಯೋಗಾಸನದಲ್ಲಿ ಕುಳಿತಿರುವ ಯೋಗಾನಂದ ನರಸಿಂಹ ಸ್ವಾಮಿಯ ವಿಗ್ರಹವಿದೆ. ವಿಶ್ವಕ್ಕೇ ಯೋಗ ಶಿಕ್ಷಣವನ್ನು ಶಿಕ್ಷಿಸುವಂತಿದೆ. ಈ ಎಲ್ಲ ವಿಗ್ರಹಗಳ ಸ್ವರೂಪಗಳು ಸ್ಪಷ್ಟವಾಗಿ ಗೋಚರಿಸುವುದಿಲ್ಲವಾದ್ದರಿಂದ ಬೆಳ್ಳಿಯಿಂದ ಮಾಡಿದ ಲಕ್ಷ್ಮೀನರಸಿಂಹ ಸ್ವಾಮಿಯ ವಿಗ್ರಹ ನಿತ್ಯಪೂಜೆಗಾಗಿಯೂ, ಭಕ್ತರ ದರ್ಶನಕ್ಕಾಗಿಯೂ ಇಡಲ್ಪಟ್ಟಿದೆ. ಒಟ್ಟಿನಲ್ಲಿ ದೇಗುಲದ ತುಂಬಾ ಪವಿತ್ರ ದೈವಿಕ ವಾತಾವರಣ ತುಂಬಿದೆ. ಹೊರ ಬಂದರೆ ಗರ್ಭಗೃಹದ ಶಿಖರದ ಮೇಲೆ ಸುದರ್ಶನ ಚಕ್ರ ಶೋಭಿಸುತ್ತಿದ್ದು ಭಕ್ತರನ್ನು ದೇವ ದರ್ಶನಕ್ಕೆ ಕೈಬೀಸಿ ಕರೆಯುವಂತಿದೆ. ಈ

ಗೋಪುರವು ಸುಮಾರು 5 ಕೀ.ಮೀ.ದೂರದಿಂದಲೂ ಕಾಣಬಹುದಾಗಿದೆ. ಬೆಟ್ಟದ ಮೇಲಿನಿಂದ ಸುತ್ತಲಿನ ಪ್ರಕೃತಿ ಸೌಂದರ್ಯರಮಣೀಯವಾಗಿ ಕಂಗೊಳಿಸುತ್ತದೆ.

ವಿಶೇಷವೆಂದರೆ ಯಾದಗಿರಿಯ ನರಸಿಂಹದೇವರು ವೈದ್ಯ ನರಸಿಂಹನೆಂದು ಪ್ರಸಿದ್ಧನಾಗಿದ್ದಾನೆ. ಇದು ಬಹು ಜಾಗೃತ ಸ್ಥಳವೆಂದೂ, ಬಹುಕಾಲದಿಂದ ಗುಣವಾಗದಿದ್ದ ರೋಗಗಳೂ, ಇಲ್ಲಿ ಸೇವೆ ಮಾಡುವುದರಿಂದ ವಾಸಿಯಾಗುವುದೆಂದೂ ಪ್ರತೀತಿಯಿರುವುದರಿಂದ ವರ್ಷದುದ್ಧಕ್ಕೂ ಭಕ್ತರ ಮಹಾಪೂರ ಇಲ್ಲಿಗೆ ಹರಿದು ಬರುತ್ತದೆ. ದಾರುಣವಾದ ಕಾಯಿಲೆಗಳು, ಮಂತ್ರ ಯಂತ್ರ ಭಾದೆ, ದೈಹಿಕ, ಮಾನಸಿಕ, ರೋಗ ರುಜಿನಗಳು ಇಲ್ಲಿ ಸೇವೆ ಸಲ್ಲಿಸುವುದರಿಂದ ಗುಣವಾಗುವುದೆಂಬ ನಂಬಿಕೆಯಿದೆ. ಈ ಸ್ಥಳಕ್ಕೆ ಬಂದವರ ಮನೋರಥಗಳೆಲ್ಲ ಪೂರ್ಣಗೊಳ್ಳುವುದೆಂದೂ ಯಾರೂ ಬರಿಗೈಲಿ ಹಿಂತಿರುಗುವುದಿಲ್ಲವೆಂದೂ ಪ್ರತೀತಿ. ಸಪ್ತಕ, ಪಕ್ಷ, ಮಂಡಲಗಳ ಸೇವೆಯನ್ನು ಭಕ್ತರು ಕೈಗೊಳ್ಳುತ್ತಾರೆ.

ಇಲ್ಲಿ ಪಾಂಚರಾತ್ರಾಗಮದ ಪ್ರಕಾರ ಪೂಜಾದಿಗಳು ಜರಗುತ್ತವೆ. ಫಾಲ್ಗುಣ ಶುದ್ಧ ಬಿದಿಗೆಯಿಂದ ಶುದ್ಧ ದ್ವಾದಶಿಯವರೆಗೆ 10 ದಿನಗಳ ಕಾಲ ಬಹು ವಿಜೃಂಭಣೆಯಿಂದ ರಥೋತ್ಸವ, ಕಲ್ಯಾಣೋತ್ಸವಾದಿಗಳು, ಉತ್ಸವಗಳು ಜರಗುತ್ತವೆ. ನರಸಿಂಹ ಜಯಂತಿ, ಕಾರ್ತೀಕಮಾಸ, ಧನುರ್ಮಾಸಾದಿಗಳು ವಿಶೇಷವಾಗಿ ಆಚರಿಸಲ್ಪಡುತ್ತವೆ. ಆ ಕಾಲದಲ್ಲಿ ಸಾವಿರಾರು ಭಕ್ತರು ನಾಡಿನ ಎಲ್ಲೆಡೆಗಳಿಂದ ಸಾಗರದಂತೆ ಬಂದು ನೆರೆಯುತ್ತಾರೆ. ಉತ್ಸವಗಳಲ್ಲಿ ಪಾಲ್ಗೊಂಡು ಪುನೀತರಾಗುತ್ತಾರೆ. ಇದೀಗ ಯಾದಗಿರಿ ಬಹು ಅಭಿವೃದ್ಧಿಗೊಳ್ಳುತ್ತಿದೆ. ನರಸಿಂಹ ಭಕ್ತರು ಒಮ್ಮೆ ಸಂದರ್ಶಿಸಲೇ ಬೇಕಾದ ಜಾಗೃತ ಪವಿತ್ರ ಕ್ಷೇತ್ರ ಯಾದಗಿರಿಗುಟ್ಟ.



# ಅಷ್ಟಲಕ್ಷ್ಮೀಯರ ಆರಾಧನೆ

– ಜಿ. ಎಸ್.ಆರ್ . ಎಸ್. ಶ್ರೀವಲ್ಲಿ
9902173613

ಶ್ರಾವಣಮಾಸ,ಭಾದ್ರಪದ, ಆಶ್ವಯುಜ, ಕಾರ್ತೀಕ ಮಾಸಗಳು ವರ್ಷ ಶರದ್ರತು ಕಾಲವಾಗಿ ದೇಶದೆಲ್ಲೆಡೆ ಪ್ರತಿದಿನವೂ ಹಬ್ಬ,ಹರಿದಿನ,ಉತ್ಸವ,ಮೆರವಣಿಗೆಗಳ ಸಂಭ್ರಮದ ದಿನಗಳಾಗಿ ವರಮಹಾಲಕ್ಷ್ಮೀ, ರಕ್ಷಾಬಂದನ್, ಉಪಾಕರ್ಮ, ನರಕ ಚತುರ್ದಶಿ, ದೀಪಾವಳಿ, ಬಲಿಪಾಡ್ಯಮಿ (ಲಕ್ಷ್ಮೀವೈಭವಪೂಜೆ) ಹೀಗೆ ಇನ್ನಿತರ ಹತ್ತು ಹಲವಾರು ಹಬ್ಬಗಳನ್ನು ಬಲು ಆಸೆಯಿಂದ ಬಲುಶ್ರದ್ಧಾ ಭಕ್ತಿ ಸಡಗರದಿಂದ ದೇಶದ ಉದ್ದಗಲಕ್ಕೂ ವಿವಿಧ ಹೆಸರುಗಳಲ್ಲಿ ಜನ ಆಚರಿಸಿ ಸಂಭ್ರಮಿಸುವುದನ್ನು ನಾವು ಕಾಣಬಹುದು. ಈ ಪದ್ಧತಿ ಯುಗ ಯುಗಗಳಿಂದ ನಡೆದು ಬರುತ್ತಿರುವುದನ್ನು ಎಲ್ಲ ವರ್ಗದ ಸಮುದಾಯ (ಜನರು) ಆಚರಿಸಿಕೊಂಡು ಬರುತ್ತಿರುವುದು ನಮಗೆಲ್ಲಾ ತಿಳಿದ ವಿಷಯವೇ ಸರಿ. ಈ ಎಲ್ಲ ಆಚರಣೆಯಲ್ಲಿ ನಮ್ಮ ಗಮನಕ್ಕೆ ತಿಳಿದು ಬರುವುದೇನೆಂದರೆ ಈ ನಾಲ್ಕು ಮಾಸಗಳ ಆದಿ ದೇವತೆ **"ಮಹಾಲಕ್ಷ್ಮಿ"** ಕಾರಣ ಲೋಕದ ಸಮಸ್ತ ಜನಾಂಗದವರೂ ತಮ್ಮ ಸಂಭ್ರಮಗಳನ್ನಾಚರಿಸಲು ಬಲು ಮುಖ್ಯವಾಗಿ ಬೇಕಾಗಿರುವ ದ್ರವ್ಯ ಹಣ. ಇದಿಲ್ಲದಿದ್ದರೆ ಈ ಸಂಭ್ರಮ ಸಡಗರಗಳಿಗೆ ಮೆರುಗೇ ಬರುವುದಿಲ್ಲ ಮತ್ತು ಏನನ್ನು ಮಾಡಲಾಗುವುದಿಲ್ಲ. ಈ ದ್ರವ್ಯದ ದೇವತೆ ಮಾತ್ಯಾರೂ ಆಗಿರದೆ ಶ್ರೀಲಕ್ಷ್ಮೀ ಹೀಗಾಗಿ ಈ ಲಕ್ಷ್ಮಿ ಕಟಾಕ್ಷಕ್ಕೆ ಜನ ಎಲ್ಲ ವಿಧದಲ್ಲಿ ಆರಾಧಿಸುವುದು ಅನಿವಾರ್ಯವಾಗಿದೆ. ಇದರಿಂದ ಲಕ್ಷ್ಮೀದೇವಿಯನ್ನು ವಿವಿಧಜನರು, ವಿವಿಧ ಹೆಸರುಗಳಿಂದ ಆರಾಧಿಸುವ ಉಪಾಸನೆ ಮಾಡುವ ವಿಧಾನಗಳಿಂದ ಕಂಡುಕೊಂಡು ತಮ್ಮ ತಮ್ಮ ಕಾರ್ಯಗಳನ್ನು ಯೋಜನೆಗಳನ್ನು ಪೂರೈಸಿಕೊಳ್ಳುತ್ತಾರೆ. ಈ ಕ್ರಮಕ್ಕೆ ಅಷ್ಟಲಕ್ಷ್ಮಿ (ಪೂಜೆ) ಉಪಾಸನೆ ಎನ್ನಲಾಗಿದೆ. ಅದರ ವಿವರವನ್ನು ಈ ಕೆಳ ಕಂಡತೆ ನಿರೂಪಿಸಲಾಗಿದೆ.

### 1. ಶ್ರೀ ಆದಿಲಕ್ಷ್ಮಿ

ಸುಮನಸವಂದಿತಸುಂದರಿಮಾದವಿ
ಚಂದ್ರ ಸಹೋದರಿ ಹೇಮಮಯೇ।
ಮುನಿ ಗಣವಂದಿತ ಮೋಕ್ಷ ಪ್ರದಾಯಿನಿ
ಮಂಜುಳ ಭಾಷಿಣಿ ವೇದನುತೇ॥
ಪಂಕಜವಾಸಿನಿ ದೇವಸುಪೂಜಿತ
ಸದ್ಗುಣವರ಼್ಿಣಿ ಶಾಂತಿಯುತೇ
ಜಯ ಜಯ ಹೇ! ಮಧುಸೂದನಕಾಮಿನಿ
ಆದಿಲಕ್ಷ್ಮೀ ಸದಾ ಪಾಲಯಮಾಂ॥

ಆದಿಲಕ್ಷ್ಮೀ ಎಂಬುದು ಪ್ರಾಚೀನ ರೂಪ ಸಮುದ್ರ ಮಥನದ ವೇಳೆ ಜನಿಸಿದ ಆದಿಲಕ್ಷ್ಮಿಯು ಕಮಲದ ಮೇಲೆ ಆಸೀನಳಾಗಿದ್ದಾಳೆ. ಎರಡು ಹಸ್ತಗಳಲ್ಲಿ ಅಭಯಮುದ್ರೆ, ವರದ ಮುದ್ರೆಯನ್ನು ಧರಿಸಿದ್ದಾಳೆ. ಉಳಿದ ಎರಡು ಕೈಗಳಲ್ಲಿ ಕಮಲ ಮತ್ತು ಧ್ವಜವನ್ನು ಹಿಡಿದುಕೊಂಡಿದ್ದಾಳೆ. ಮೋಕ್ಷವನ್ನು ನೀಡುವ ಕಾರಣ ಆದಿಲಕ್ಷ್ಮಿ ಮೋಕ್ಷ ಪ್ರದಾಯಿನಿ ಎಂದು ಕರೆಯಲ್ಪಡುತ್ತಾಳೆ. ಲಕ್ಷ್ಮಿಯ ಈ ರೂಪವು ವೈಕುಂಠದಲ್ಲಿ ನಾರಾಯಣನೊಂದಿಗೆ ಕುಳಿತಿರುವ ಅವತಾರವಾಗಿದೆ ಎನ್ನುತ್ತಾರೆ.

### 2. ಶ್ರೀ ಧಾನ್ಯಲಕ್ಷ್ಮೀ

ಅಯಕಲಿ ಕಲ್ಮಷನಾಶಿನಿ ಕಾಮಿನಿ
ವೈದಿಕರೂಪಿಣಿ ವೇದಮಯೇ
ಕ್ಷೀರಸಮುದ್ಭವ ಮಂಗಳ ರೂಪಿಣಿ
ಮಂತ್ರನಿವಾಸಿನಿ ಮಂತ್ರನುತೆ
ಮಂಗಳದಾಯಿನಿ ಅಂಬುಜವಾಸಿನಿ
ದೇವಗಣಾಶ್ರಿತ ಪಾದಯುತೇ।
ಜಯಜಯಹೇ ಮಧುಸೂದನಕಾಮಿನಿ
ಧಾನ್ಯಲಕ್ಷ್ಮೀ ಸದಾ ಪಾಲಯಮಾಂ॥

ಮನುಷ್ಯನ ಹಸಿವು ನೀಗಿಸಲು ಬೇಕಾದ ದವಸ ಧಾನ್ಯಗಳನ್ನು ನೀಡುವ ಅಧಿದೇವತೆ ಧಾನ್ಯಲಕ್ಷ್ಮೀ. ನೆಮ್ಮದಿಯ ಸಂಕೇತವಾದ ಹಸಿರು ವಸ್ತ್ರವನ್ನು ತೊಟ್ಟ ಧಾನ್ಯಲಕ್ಷ್ಮಿಯು ಎಂಟು ಕೈಗಳಲ್ಲಿ ಎರಡು ಕಮಲ, ರಾಜದಂಡ, ಭತ್ತ, ಕಬ್ಬು, ಬಾಳೆಹಣ್ಣಿನ ಗೊನೆ ಹಿಡಿದಿದ್ದು, ಇನ್ನೆರಡು ಕೈಗಳಲ್ಲಿ ಅಭಯಮುದ್ರೆ ಮತ್ತು ವರದಮುದ್ರೆಯನ್ನು ಧರಿಸಿದ್ದಾಳೆ. ಈ ರೂಪವನ್ನು ರೈತರು ಹೆಚ್ಚಾಗಿ ಪೂಜಿಸುತ್ತಾರೆ. ಕೃತಜ್ಞತೆ ಸಲ್ಲಿಸಲು ಮೊದಲು ಧಾನ್ಯಲಕ್ಷ್ಮಿಯನ್ನು ಪ್ರಾರ್ಥಿಸಿ ಧಾನ್ಯವನ್ನು ದಾನ ಮಾಡುತ್ತಾರೆ.




**3. ಶ್ರೀ ಧೈರ್ಯ ಲಕ್ಷ್ಮೀ**

ಜಯವರವರ್ಷಿಣಿ ವೈಷ್ಣವಿ ಭಾರ್ಗವಿ
ಮಂತ್ರಸ್ವರೂಪಿಣಿ ಮಂತ್ರಮಯೇ ।
ಸುರಗಣ ಪೂಜಿತೆ ಶೀಘ್ರಫಲಪ್ರದ
ಜ್ಞಾನವಿಕಾಸಿನಿ ಶಾಸ್ತ್ರನುತೇ
ಭವಭಯಹಾರಿಣಿ ಪಾಪ ವಿಮೋಚಿನಿ
ಸಾದು ಜನಾಶ್ರಿತ ಪಾದಯುತೇ
ಜಯ ಜಯ ಹೇ ಮಧುಸೂದನಕಾಮಿನಿ
ಧೈರ್ಯಲಕ್ಷ್ಮೀ ಸದಾ ಪಾಲಯಮಾಂ॥




ಜೀವನದಲ್ಲಿ ಧೈರ್ಯವನ್ನು ಪಡೆಯಲು ಲಕ್ಷ್ಮಿಯ ಈ ಸ್ವರೂಪವನ್ನು ಪೂಜಿಸಲಾಗುತ್ತದೆ. ಧೈರ್ಯಲಕ್ಷ್ಮಿಯನ್ನು ವೀರಲಕ್ಷ್ಮಿಯೆಂದೂ ಕರೆಯುವುದುಂಟು. ಹೆಸರೇ ಸೂಚಿಸುವಂತೆ ಈಕೆ ಧೈರ್ಯವನ್ನು ಶಕ್ತಿಯನ್ನು ನೀಡುವಳು. ಕೆಂಪು ಬಣ್ಣದ ಸೀರೆಯುಟ್ಟಿರುವ ಧೈರ್ಯ ಲಕ್ಷ್ಮಿಯು ಎಂಟು ಕೈಗಳಲ್ಲಿ ಚಕ್ರ, ಶಂಖ, ಬಿಲ್ಲು, ಬಾಣ, ಖಡ್ಗ, ಸುವರ್ಣ ಪಾತ್ರೆ ಹಾಗೂ ಉಳಿದ ಎರಡು ಹಸ್ತಗಳಲ್ಲಿ ಅಭಯಮುದ್ರೆ ಮತ್ತು ಮುದ್ರೆಯನ್ನು ಹೊಂದಿದ್ದಾಳೆ. ನಮ್ಮ ಕಾರ್ಯಕ್ಷಮತೆ ಬಗ್ಗೆ ನಮ್ಮಲ್ಲಿರುವ ಅಸ್ಪಷ್ಟತೆಯನ್ನು ದೂರ ಮಾಡುತ್ತಾಳೆ.

**4. ಶ್ರೀಗಜಲಕ್ಷ್ಮಿ**

ಜಯ ಜಯ ದುರ್ಗತಿನಾಶಿನಿಕಾಮಿನಿ
ಸರ್ವಫಲಪ್ರದ ಶಾಸ್ತ್ರಮಯೇ
ರಥಗಜತುರಗಪದಾತಿ ಸಮಾವೃತ
ಪರಿಜನ ಪಂಡಿತ ಲೋಕನುತೇ
ಹರಿಹರಬ್ರಹ್ಮ ಸುಪೂಜಿತೆ ಸೇವಿತೆ
ತಾಪನಿವಾರಿಣಿ ಪಾದಯುತೇ
ಜಯ ಜಯ ಹೇ ಮಧುಸೂದನ ಕಾಮಿನಿ
ಗಜಲಕ್ಷ್ಮಿ ರೂಪೇಣ ಸದಾ ಪಾಲಯಮಾಂ॥

ಸಮುದ್ರಮಥನದ ವೇಳೆ ಗಜಲಕ್ಷ್ಮಿಯು ಎರಡು ಆನೆಗಳೊಂದಿಗೆ ಉದ್ಭವಿಸಿದಳು ಎನ್ನಲಾಗಿದೆ. ದೇವೇಂದ್ರನು ಗಜಲಕ್ಷ್ಮಿ ಕೃಪೆಯಿಂದ ತನ್ನ ಸಂಪತ್ತನ್ನು ಮರಳಿ ಪಡೆದ ನೆಂಬ ನಂಬಿಕೆಯಿದೆ. ಕೆಂಪು ಸೀರೆ ಧರಿಸಿ ಕಮಲದ ಮೇಲೆ ಕುಳಿತಿರುವ ಗಜಲಕ್ಷ್ಮಿ ಎರಡು ಕೈಗಳಲ್ಲಿ ಕಮಲಗಳು ಹಾಗೂ ಇನ್ನೆರಡರಲ್ಲಿ ಅಭಯ ವರದ ಮುದ್ರೆಯನ್ನು ಧರಿಸಿದ್ದಾಳೆ. ಅಕ್ಕ ಪಕ್ಕದಲ್ಲಿರುವ ಎರಡು ಆನೆಗಳು ಸೊಂಡಿಲಿನಲ್ಲಿ ಹಿಡಿದ ಕುಂಭಗಳಿಂದ ಹಾಲಿನ ಅಭಿಷೇಕ ಮಾಡುತ್ತಿವೆ. ಗಜಲಕ್ಷ್ಮೀ ಅಧಿಕಾರ, ಸಂಪತ್ತು, ಸಮೃದ್ಧಿಯನ್ನು ಅನುಗ್ರಹಿಸುತ್ತಾಳೆ.




**5. ಶ್ರೀ ಸಂತಾನ ಲಕ್ಷ್ಮೀ**

ಅಯಿಖಗವಾಹಿನಿ ಮೋಹಿನಿ ಚಕ್ರಿಣಿ
ರಾಗವಿವರ್ಧಿನಿ ಜ್ಞಾನಮಯೇ
ಗುಣಗಣ ವಾರಿಧಿ ಲೋಕ ಹಿತೈಷಿಣಿ
ಶಬ್ದವಿಭೂಷಿಣಿ ಭೂಷಿತಗಾನನುತೇ॥
ಸಕಲಸುರಾಸುರ ದೇವ ಮುನೀಶ್ವರ
ಮಾನಸ ವಂದಿತ ಪಾದಯುತೇ
ಜಯ ಜಯಹೇ ಮಧೂಸೂದನಕಾಮಿನಿ
ಸಂತಾನ ಲಕ್ಷ್ಮೀ ಸದಾ ಪಾಲಯಾಮಾಂ॥

ಮಕ್ಕಳಿಲ್ಲದವರು ಆರೋಗ್ಯವಂತ ಹಾಗೂ ದೀರ್ಘಾಯುಸುಳ್ಳ ಮಕ್ಕಳನ್ನು ಪಡೆಯಲು ಸಂತಾನ ಲಕ್ಷ್ಮಿಯನ್ನು ಪೂಜಿಸುತ್ತಾರೆ. ಕೆಂಪು ಮತ್ತು ಹಳದಿ ಬಣ್ಣದ ವಸ್ತ್ರವನ್ನುಟ್ಟು ಆರು ಕೈಗಳನ್ನು ಹೊಂದಿರುವ ಈ ದೇವಿಯು ಎರಡು ಕೈಗಳಲ್ಲಿ ಕುಂಭಗಳನ್ನು ಇನ್ನೆರಡು ಕೈಗಳಲ್ಲಿ ಖಡ್ಗ ಗುರಾಣಿಗಳನ್ನು ಮತ್ತು ಅಭಯಮುದ್ರೆಯನ್ನು ಹೊಂದಿದ್ದಾಳೆ. ಇನ್ನೊಂದು ಕೈಯಿಂದ ಮಡಿಲಲ್ಲಿರುವ ಮಗುವನ್ನು ಹಿಡಿದುಕೊಂಡಿದ್ದಾಳೆ. ಮಗು ಕಮಲವನ್ನು ಹಿಡಿದಿದೆ. ಹೆಚ್ಚಾಗಿ ದಂಪತಿಗಳು ಸಂತಾನ ಲಕ್ಷ್ಮಿಯನ್ನು ಪೂಜಿಸುತ್ತಾರೆ.

**6. ಶ್ರೀ ವಿಜಯಲಕ್ಷ್ಮೀ**

ಜಯಕಮಲಾಸಿನಿ
ಸದ್ಗತಿದಾಯಿನಿ
ಜ್ಞಾನವಿಕಾಸಿನಿ
ಜ್ಞಾನಮಯೆ






ಅನುದಿನಮರ್ಚಿತ ಕುಂಕುಮನೂಪುರ
ಭೂಷಿತ ವಾಸಿತ ವಾದ್ಯನುತೇ
ಕನಕದಾರಸ್ತುತಿ ವೈಭವವಂದಿತೆ
ಶಂಕರ ದೇಶಿಕ ಮಾನ್ಯಪದೇ ।
ಜಯ ಜಯ ಹೇ ಮಧುಸೂದನಕಾಮಿನಿ
ವಿಜಯಲಕ್ಷ್ಮೀ ಸದಾ ಪಾಲಯಮಾಂ॥




ವಿಜಯವನ್ನು ನೀಡುವ ಈ ಮಹಾಲಕ್ಷ್ಮಿಯ ಸ್ವರೂಪವನ್ನು ವಿಜಯಲಕ್ಷ್ಮಿ ಎಂದು ಕರೆಯಲಾಗುತ್ತದೆ. ಮಾಡುವ ಕಾರ್ಯದಲ್ಲಿ ಗೆಲುವು ಸಾಧಿಸಬೇಕೆಂದರೆ ವಿಜಯಲಕ್ಷ್ಮಿಯನ್ನು ಆರಾಧಿಸಬೇಕು. ಕೆಂಪುಸೀರೆ ಉಟ್ಟ ಈ ಲಕ್ಷ್ಮಿಯು ಕಮಲದಲ್ಲಿ ಆಸೀನಳಾಗಿದ್ದು ಎಂಟು ಕೈಗಳಲ್ಲಿ ಶಂಖ, ಚಕ್ರ, ಖಡ್ಗ ಗುರಾಣಿ ಪಾಶ, ಕಮಲ ಹಾಗೂ ಇನ್ನೆರಡು ಕೈಗಳಲ್ಲಿ ಅಭಯ ವರದ ಮುದ್ರೆಗಳನ್ನು ಹೊಂದಿದ್ದಾಳೆ. ಬಾಳಲ್ಲಿ ಅಡೆ ತಡೆಗಳನ್ನು ನಿವಾರಿಸಿ ಆಂತರಿಕ ಧೈರ್ಯ ಶಕ್ತಿಯನ್ನು ಬೆಳೆಸಿ ಕೊಳ್ಳಲು ಲಕ್ಷ್ಮಿಯ ಈ ಸ್ವರೂಪವನ್ನು ಪೂಜಿಸುತ್ತಾರೆ.

**7. ಶ್ರೀ ವಿದ್ಯಾಲಕ್ಷ್ಮೀ**

ಪ್ರಣತ ಸುರೇಶ್ವರಿ ಭಾರತಿ ಭಾರ್ಗವಿ
ಶೋಕವಿನಾಶಿನಿ ರತ್ನಮಯೇ
ಮಣಿಮಯ ಭೂಷಿತ ಕರ್ಣವಿಭೂಷಿಣಿ
ಶಾಂತಿ ಸಮಾನ್ಯತ ಹಾಸ್ಯಮುಖೇ
ನವನಿಧಿದಾಯಿನಿ ಕಲಿಮಲಹಾರಿಣಿ
ಕಾಮಿತಫಲಪ್ರದ ಹಸ್ತಯುತೇ
ಜಯಜಯಹೇ ಮಧುಸೂಧನಕಾಮಿನಿ
ವಿದ್ಯಾಲಕ್ಷ್ಮೀ ಸದಾ ಪಾಲಯಾಮಾಂ॥

ವಿದ್ಯೆಯ ಅಧಿದೇವತೆಯನ್ನಾಗಿ ಸರಸ್ವತಿ ದೇವಿಯನ್ನು ಆರಾಧಿಸುತ್ತಾರೆ. ಆದರೆ ಮಹಾಲಕ್ಷ್ಮಿಯ ಒಂದು ರೂಪವಾದ ವಿದ್ಯಾಲಕ್ಷ್ಮಿಯು ಭಕ್ತಾದಿಗಳಿಗೆ ವಿದ್ಯೆ, ಬುದ್ಧಿ, ಪ್ರಾಪ್ತಿಯಾಗುವಂತೆ ಹರಸುತ್ತಾಳೆ. ಕಮಲದಲ್ಲಿ ಆಸೀನಳಾಗಿರುವ ವಿದ್ಯಾಲಕ್ಷ್ಮಿಯು ವಿದ್ಯೆಯ ಜ್ಞಾನದ ಅಧಿದೇವತೆ ಬಿಳಿ ಬಣ್ಣದ ಸೀರೆಯುಟ್ಟು ಎರಡು ಕೈಗಳಲ್ಲಿ ಕಮಲಗಳು ಇನ್ನೆರಡು ಕೈಗಳಲ್ಲಿ ಅಭಯ ವರದ ಮುದ್ರೆಯನ್ನು ಧರಿಸಿದ್ದಳು ವಿದ್ಯಾ ರಂಗದಲ್ಲಿ ಯಶಸ್ವಿಯಾಗಲು ಲಕ್ಷ್ಮಿ ದೇವಿಯ ಈ ಅವತಾರವನ್ನು ಆರಾಧಿಸುತ್ತಾರೆ.




**8. ಧನಲಕ್ಷ್ಮೀ**

ಧಿಮಿ ಧಿಮಿ ಧಿಂಧಿಮಿ ಧಿಂಧಿಮಿ
ಧಿಂದಿಮಿದುಂದುಭಿನಾದ ಸಂಪೂರ್ಣಮಯೇ
ಘಮ ಘಮ ಘಂಘಮ ಘಂಘಮ ಘಂಘಮ
ಶಂಖ ನಿನಾದ ಸುವಾದ್ಯನುತೇ
ವೇದ ಪುರಾಣೇತಿಹಾಸ ಸುಪೂಜಿತೇ
ವೈದಿಕ ಮಾರ್ಗ ಪ್ರದರ್ಶಯುತೇ
ಜಯ ಜಯಹೇ ಮಧುಸೂದನ ಕಾಮಿನಿ
ಧನಲಕ್ಷ್ಮೀ ರೂಪೇಣ ಸದಾ ಪಾಲಯಮಾಂ॥

ಧನ ಅಂದರೆ ಸಂಪತ್ತು ಇದರ ಅಧಿದೇವತೆಯಾದ ಧನಲಕ್ಷ್ಮಿಯು ಸಮೃದ್ಧಿಯ ಸಂಕೇತವೂ ಹೌದು. ಧನಲಕ್ಷ್ಮಿಯನ್ನು ಐಶ್ವರ್ಯಲಕ್ಷ್ಮಿ ಎಂದೂ ಕರೆಯುತ್ತಾರೆ. ಇವಳನ್ನು ಪೂಜಿಸುವುದರಿಂದ ಸಮೃದ್ಧಿ, ಸಂಪತ್ತು, ಸಂತೋಷ ಪ್ರಾಪ್ತವಾಗುತ್ತದೆ. ಕೆಂಪು ಸೀರೆಯುಟ್ಟ ಧನಲಕ್ಷ್ಮಿಯು ಆರು ಕೈಗಳಲ್ಲಿ ಶಂಖ, ಚಕ್ರ, ಧನಸ್ಸು, ಕಲಶ, ಕಮಲವನ್ನು ಹಿಡಿದು ಕೊಂಡಿರುತ್ತಾಳೆ. ಆರನೇ ಕೈಯಲ್ಲಿ ಅಭಯ ಮುದ್ರೆಯಿದ್ದು ಚಿನ್ನದ ನಾಣ್ಯಗಳನ್ನು ಸುರಿಸುತ್ತಿರುತ್ತಾಳೆ.ಭಾರತದ ವಿವಿದೆಡೆ ಧನ ಲಕ್ಷ್ಮಿ ದೇವಾಲಯಗಳಿವೆ.

ಹೀಗೆ ಅಷ್ಟಲಕ್ಷ್ಮಿ ವೃತ್ತಾಂತವಾಗಿರಲು ಅನೇಕ ನಗರಗಳಲ್ಲಿ ವಿಶೇಷವಾಗಿ ಅಷ್ಟ ಲಕ್ಷ್ಮಿ ದೇವಾಲಯಗಳಿರುವುದನ್ನು ಸಹ ನೋಡಬಹುದಾಗಿದೆ. ಇದಕ್ಕೆ ಕಾರಣ ಲೋಕದ ಜನರೆಲ್ಲಾ ಹಲವು ಬಗೆಯ ಲಕ್ಷ್ಮೀ ಕಟಾಕ್ಷಕ್ಕೆ ಸದಾ ಹಂಬಲಿಸುತ್ತಿರುತ್ತಾರೆ. ಏಕೆಂದರೆ ಸಂಪತ್ತು, ಐಶ್ವರ್ಯವೆಂಬುದಿಲ್ಲದಿದ್ದರೆ ಜೀವನವೇ ಶೂನ್ಯವೆಂದೆನ್ನಲಾಗಿದೆ.



# ತಿರುಮಲ ತಿರುಪತಿ ದೇವಸ್ಥಾನಗಳು, ತಿರುಪತಿ

## ತಿರುಮಲೆಯಲ್ಲಿ ಭಕ್ತರು ಮಾಡಬೇಕಾದವು :

- ☑ ತಿರುಮಲೆಗೆ ಬರುವ ಮುನ್ನ ನಿಮ್ಮ ಇಷ್ಟ ಅಥವಾ ಕುಲದೈವವನ್ನು ಪೂಜಿಸಿರಿ.
- ☑ ಶ್ರೀ ವೆಂಕಟೇಶ್ವರ ಸ್ವಾಮಿಯನ್ನು ದರ್ಶಿಸುವ ಮೊದಲು ಸ್ವಾಮಿಪುಷ್ಕರಿಣಿಯಲ್ಲಿ ಸ್ನಾನಮಾಡಿ, ಅಲ್ಲಿಯೇ ಇರುವ ಶ್ರೀ ವರಾಹಸ್ವಾಮಿಯನ್ನು ದರ್ಶಿಸಿರಿ.
- ☑ ಆಲಯದ ಒಳಗಡೆ ಗಂಭೀರ ಮೌನವನ್ನು ಪಾಲಿಸಿರಿ ಮತ್ತು ಮನಸ್ಸಿನಲ್ಲಿ "ಓಂ ನಮೋ ವೇಂಕಟೇಶಾಯ" ಎಂದು ಜಪಿಸಿರಿ.
- ☑ ಆಲಯದ ಒಳಗಡೆ ಸ್ವಾಮಿಯಲ್ಲಿ ಮನಸ್ಸನ್ನು ಕೇಂದ್ರೀಕರಿಸಿ.
- ☑ ತಿರುಮಲೆಯಲ್ಲಿ ಪಾಪನಾಶಿನಿಯಲ್ಲೂ, ಆಕಾಶಗಂಗೆಯಲ್ಲೂ ಸ್ನಾನಮಾಡಿರಿ. ಮತ್ತು ಅಂಜನಾದ್ರಿ ಆಂಜನೇಯ ಸ್ವಾಮಿಯವರ ದರ್ಶನ ಪಡೆಯಿರಿ.
- ☑ ತಿರುಮಲೆಗೆ ಬಂದಾಗ ಸನಾತನ ಸಂಪ್ರಾದಯಗಳನ್ನು, ಆಚಾರ ವ್ಯವಹಾರಗಳನ್ನು ಗೌರವಿಸಿ.
- ☑ ತಮ್ಮ ಕಾಣಿಕೆಗಳನ್ನು ಹುಂಡಿಯಲ್ಲಿ ಮಾತ್ರವೇ ಸಮರ್ಪಿಸಿ.
- ☑ ತಿರುಮಲೆಯನ್ನು ಶುಭ್ರವಾಗಿ ಶುದ್ಧವಾಗಿ ಇಡಲು ಸಹಕರಿಸಿ.ಬಯೋಡಿಗ್ರೇಡಬಲ್ ಪ್ಲಾಸ್ಟಿಕ್ ಕವರಗಳನ್ನು ಮಾತ್ರವೇ ಬಳಸಿರಿ.

## ತಿರುಮಲೆಯಲ್ಲಿ ಭಕ್ತರು ಮಾಡಬಾರದವು :

- ☒ ನಾಲ್ಕು ಮಾಢಬೀಧಿಗಳಲ್ಲಿ ಪಾದರಕ್ಷೆಗಳನ್ನು ಧರಿಸಿ ಓಡಾಡಬಾರದು.
- ☒ ತಮ್ಮೊಂದಿಗೆ ಹೆಚ್ಚಿನ ಹಣ, ಆಭರಣಗಳನ್ನು ತರಬೇಡಿ.
- ☒ ದೇವರನ್ನು ಸೇವಿಸುವುದರ ಹೊರತು ಬೇರೆ ಯಾವ ಕಾರಣಕ್ಕೂ ತಿರುಮಲೆಗೆ ಬಾರದಿರಿ.
- ☒ ದೇವರ ದರ್ಶನಕ್ಕಾಗಿ ನೂಕುನುಗ್ಗುಲು ಮಾಡದಿರಿ.
- ☒ ಸಂಪ್ರದಾಯದಂತೆ ಆಲಯ ಪ್ರವೇಶ ನಿಷೇಧವಿದ್ದಲ್ಲಿ ಆಲಯ ಪ್ರವೇಶ ಮಾಡದಿರಿ.
- ☒ ತಿರುಮಲೆಯಲ್ಲಿ ಹೂವು ಮುಡಿಯದಿರಿ.ಎಲ್ಲ ಹೂವುಗಳೂ ದೇವರಿಗೇ.
- ☒ ನೀರು, ವಿದ್ಯುತ್‌ಗಳು ಪೋಲು ಮಾಡದಿರಿ.
- ☒ ಅಪರಿಚಿತರಿಗೆ ನಿಮ್ಮ ಕೋಣೆಯ ಬೀಗದ ಕೈಗಳನ್ನು ನೀಡದಿರಿ, ಅವರನ್ನು ನಿಮ್ಮ ಕೊಠಡಿಗೆ ಸೇರಿಸದಿರಿ.
- ☒ ಪ್ಲಾಸ್ಟಿಕ್ ನೀರಿನ ಬಾಟಲ್‌ಗಳನ್ನು ಮತ್ತು ಕವರ್‌ಗಳನ್ನು ಬಳಸಬಾರದು.

## ತಿರುಮಲೆಯಲ್ಲಿ ಭಕ್ತರು ನಿಷೇಧಿತ ಪದಾರ್ಥಗಳು : ( ನಿಷೇಧಿಸಿದವು)

- ✕ ತಿರುಮಲೆಯಲ್ಲಿ ಧೂಮಪಾನ,ಮಧ್ಯಪಾನ,ಮಾಂಸಾಹಾರ ಮೊದಲಾದವುಗಳನ್ನು ನಿಷೇಧಿಸಲಾಗಿದೆ.
- ✕ ಸ್ವಾಮಿಯವರ ದರ್ಶನಕ್ಕಾಗಿ, ವಸತಿಗಾಗಿ, ಪ್ರತ್ಯೇಕ ಪ್ರವೇಶಕ್ಕಾಗಿ ದಳ್ಳಾಳಿಗಳನ್ನು ಆಶ್ರಯಿಸಬೇಡಿರಿ.
- ✕ ಬೀದಿವ್ಯಾಪಾರಿಗಳಿಂದ ನಕಲೀ ಪ್ರಸಾದ ಕೊಳ್ಳಬೇಡಿ.
- ✕ ದೇವಾಲಯದಲ್ಲಿ ಉಗುಳುವುದು ಮುಂತಾದವುಗಳನ್ನು ಮಾಡಬಾರದು.
- ✕ ಅನ್ಯಮತ ಪ್ರಚಾರ ನಿಷೇಧಿಸಲಾಗಿದೆ.
- ✕ ವಿವಿಧ ರಾಜಕೀಯ ಸಭೆ, ಬ್ಯಾನರು, ಧರಣಿ, ರಾಸ್ತಾರೋಕೋ, ಹರತಾಳ - ಮೊದಲಾದವುಗಳನ್ನು ನಿಷೇಧಿಸಲಾಗಿದೆ.
- ✕ ಯಾವುದೇ ರೂಪದಲ್ಲಿ ಜೂಜಾಡುವುದನ್ನು ನಿಷೇಧಿಸಲಾಗಿದೆ.
- ✕ ಆಲಯದಲ್ಲಿ ಸೆಲ್‌ಫೋನ್, ಕ್ಯಾಮರಾ, ಮತ್ತಿತರ ವಿದ್ಯುತ್ ಚಾಲಿತ ಉಪಕರಣಗಳನ್ನು ನಿಷೇಧಿಸಲಾಗಿದೆ.
- ✕ ಜಂತುವಧೆ ನಿಷೇಧ.
- ✕ ಭಿಕ್ಷುಕರನ್ನು ಪ್ರೋತ್ಸಾಹಿಸದಿರಿ.

**ಕಾರ್ಯನಿರ್ವಹಣಾಧಿಕಾರಿ**



# ನವೆಂಬರ್ 2025 ತಿಂಗಳ ರಾಶಿ ಫಲಗಳು



**ಶ್ರೀಮಾತಾ ಅನುಗ್ರಹ**

### ಮೇಷ

ನವಮಾಧಿಪತಿಯು ಚತುರ್ಥದಲ್ಲಿ ಉಚ್ಚನಾಗಿ ಸಂಚರಿಸುತ್ತಿರುವುದರಿಂದ ವಾಹನ ಯೋಗ ,ಮನೆ ಕಟ್ಟುವ ಯೋಗ ಉಂಟಾಗುತ್ತದೆ. ರಾಶಿಯ ಅಧಿಪತಿಯು ಅಷ್ಟಮದಲ್ಲಿ ಸಂಚರಿಸುತ್ತಿದ್ದು ರೋಗಾಧಿಪತಿಯೊಂದಿಗೆ ಕೂಡಿರುವುದರಿಂದ ಆರೋಗ್ಯದಲ್ಲಿ ಎಚ್ಚರಿಕೆ ವಹಿಸುವುದು ಅಗತ್ಯ. ವಿದ್ಯಾರ್ಥಿಗಳಿಗೆ ಶ್ರಮಕ್ಕೆ ತಕ್ಕ ಫಲ ವಿದೆ.

### ವೃಷಭ

ಅಷ್ಟಮಾಧಿಪತಿಯು ತೃತೀಯದಲ್ಲಿದ್ದು ಉಚ್ಚನಾಗಿ ಸ್ಥಿತನಾಗಿರುವುದರಿಂದ ವಿಪರೀತ ರಾಜಯೋಗ ಉಂಟಾಗಿದೆ. ಸರ್ಕಾರಿ ಕೆಲಸ ಕಾರ್ಯಗಳಲ್ಲಿ ಯಶಸ್ಸು, ಆರೋಗ್ಯದಲ್ಲಿ ಸುಧಾರಣೆ. ಮೇಲಧಿಕಾರಿಗಳಿಂದ ಅನುಕೂಲ ಪ್ರಯಾಣದಿಂದ ಲಾಭ. ತಾಯಿಯ ಆರೋಗ್ಯದ ಬಗ್ಗೆ ಗಮನ ಕೊಡಿ.

### ಮಿಥುನ

ಭೋಗ ವಸ್ತುಗಳನ್ನು ಕೊಳ್ಳುವಿರಿ. ವಿಭಾಗೀಯ ಪರೀಕ್ಷೆಗಳನ್ನು ಸಮರ್ಪಕವಾಗಿ ಪೂರೈಸುವಿರಿ. ಮನೆಯಲ್ಲಿ ಶುಭಕಾರ್ಯಗಳು ಜರುಗುವುವು. ಶತ್ರುಗಳನ್ನು ಸದೆಬಡೆಯುವಿರಿ. ಆರೋಗ್ಯದಲ್ಲಿ ಅಭಿವೃದ್ಧಿ ಸಂಪತ್ ಸಮೃದ್ಧಿ ಉಂಟಾಗುತ್ತದೆ. ವಿದ್ಯಾರ್ಥಿಗಳಿಗೆ ಶುಭ ಸಮಯ.

### ಕರ್ಕಾಟಕ

ನಿಮ್ಮ ಆಸೆಗಳು ಫಲಿಸುತ್ತವೆ. ಅನೇಕ ಮೂಲಗಳಿಂದ ಧನ ಲಾಭವಾಗುತ್ತದೆ. ಭೋಗ ಜೀವನವನ್ನು ನಡೆಸುವಿರಿ. ವಾಹನ ಸೌಖ್ಯ. ಬಂಧು ಬಾಂಧವರಿಂದ ಸಹಾಯ ಸಿಗುತ್ತದೆ. ಎಲ್ಲರಿಂದಲೂ ಪ್ರಶಂಸೆಗೆ ಒಳಗಾಗುವಿರಿ. ದೇವರ ಪೂಜೆ ಪುನಸ್ಕಾರಗಳಲ್ಲಿ ಹೆಚ್ಚು ಒಲವು ತೋರುವಿರಿ.

### ಸಿಂಹ

ಹೊಸ ವಸ್ತ್ರ ಖರೀದಿ ಮಾಡುವಿರಿ. ಆರೋಗ್ಯದಲ್ಲಿ ಅಭಿವೃದ್ಧಿ, ಶತ್ರುಗಳನ್ನು ಜಯಿಸುವಿರಿ. ಸಾಲದಿಂದ ಮುಕ್ತರಾಗುವಿರಿ. ಹೋರಾಟದಲ್ಲಿ ಜಯ ಕಾಣುವಿರಿ. ಮಕ್ಕಳಿಂದ ಆದಾಯ. ವಿದ್ಯಾರ್ಥಿಗಳಿಗೆ ಶುಭದಾಯಕ. ಕೌಟುಂಬಿಕ ಜೀವನ ಚೆನ್ನಾಗಿರುವುದು. ಆಸ್ತಿ ಮಾಡುವಿರಿ.

### ಕನ್ಯೆ

ನೀವು ಧೈರ್ಯದಿಂದ ಮುನ್ನುಗ್ಗಿ ಕೆಲಸದಲ್ಲಿ ಜಯ ಕಾಣುವಿರಿ. ಲೋಹ ಪದಾರ್ಥಗಳ ವ್ಯಾಪಾರ ಚೆನ್ನಾಗು ವುದು. ಸರ್ಕಾರದಿಂದ ಸಹಾಯ ಸಿಗುತ್ತದೆ. ರಿಯಲ್ ಎಸ್ಟೇಟ್‌ನಿಂದ ಲಾಭ ಪಡೆಯುವಿರಿ. ಸಹೋದರರರೊಂದಿಗೆ ಉತ್ತಮ ಬಾಂಧವ್ಯ. ಸಹೋದ್ಯೋಗಿಗಳಿಂದ ಅನುಕೂಲ. ಒಳ್ಳೆಯ ವಿದ್ಯಾಭ್ಯಾಸ. ನೂತನ ವಸ್ತ್ರಾಭರಣ ಕೊಂಡುಕೊಳ್ಳುವಿರಿ.

### ತುಲಾ

ಅವಿವಾಹಿತರಿಗೆ ವಿವಾಹ ಭಾಗ್ಯ. ಸಂತಾನಾಪೇಕ್ಷಿಗಳಿಗೆ ಸಂತಾನ. ವಿದ್ಯೆಯಲ್ಲಿ ಪ್ರಗತಿ. ಭೋಗ ಭಾಗ್ಯಗಳು ಲಭಿಸುವುದು. ವ್ಯಾಪಾರದಲ್ಲಿ ಅಭಿವೃದ್ಧಿ. ದ್ರವ ಪದಾರ್ಥಗಳ ಮಾರಾಟದಲ್ಲಿ ಲಾಭ. ಅಲಂಕಾರ ವಸ್ತುಗಳ ಮಾರಾಟದಿಂದಖು ಲಾಭ.

### ವೃಶ್ಚಿಕ

ಆರೋಗ್ಯದಲ್ಲಿ ಚೇತರಿಕೆ. ಶುಭ ಕಾರ್ಯ ಮನೆಯಲ್ಲಿ ಜರುಗುವುದು. ಕೈಕೊಂಡ ಕೆಲಸ ಕಾರ್ಯಗಳು ನೆರವೇರುವುದು. ಸರ್ಕಾರದಿಂದ ಸಹಾಯ ಸಿಗುವುದು. ಧಾರ್ಮಿಕ ಕಾರ್ಯಗಳಲ್ಲಿ ಆಸಕ್ತಿ. ಪಿತ್ರಾರ್ಜಿತ ಆಸ್ತಿ ಲಾಭ. ಸ್ನೇಹಿತರಿಂದ ಸಹಕಾರ ಸಿಗುವುದು. ವಸ್ತ್ರಾಭರಣಗಳ ಖರೀದಿ, ತೀರ್ಥ ಸ್ನಾನ ಮಾಡುವ ಯೋಗ ಇರುತ್ತದೆ.

### ಧನಸ್ಸು

ಧನಾಗಮನವಾಗುವುದು. ಮಿತ್ರರಿಂದ ಸಹಾಯ ಸಿಗುವುದು. ಕೈ ಹಾಕಿದ ಕೆಲಸಗಳು ಕೈಗೂಡುವುದು. ಸಂಗೀತಗಾರರಿಗೆ ಸುಸಮಯ. ಸ್ತ್ರೀಯಿಂದ ಲಾಭ. ವ್ಯಾಪಾರದಲ್ಲಿ ಲಾಭ. ವಿದ್ಯೆಯಲ್ಲಿ ಯಶಸ್ಸು. ರಾಜಕಾರಣಿಗಳಿಗೆ ಅನುಕೂಲಕರ ಸಮಯ ಮಹಿಳೆಯರಿಗೆ ಶುಭದಾಯಕ.

### ಮಕರ

ಆರೋಗ್ಯದಲ್ಲಿ ಅಭಿವೃದ್ಧಿ. ಹಣಕಾಸು ಸಮೃದ್ಧಿ. ಕುಟುಂಬದವರೊಂದಿಗೆ ಸಂತೋಷದಿಂದ ಕಾಲ ಕಳೆಯುವಿರಿ. ಸಂಗಾತಿಯೊಂದಿಗೆ ಸಂಬಂಧ ಉತ್ತಮ ವಾಗಿರುವುದು. ವಿದ್ಯಾವಂತ ಸ್ನೇಹಿತರು ಸಿಗುವರು. ವಿದ್ಯಾರ್ಥಿಗಳಿಗೆ ಸುಸಮಯ. ಭೂಮಿಯಿಂದ ಲಾಭ. ಸಹೋದರರಿಗೆ ಸಹಾಯ ಮಾಡುವಿರಿ.

### ಕುಂಭ

ನೂತನ ವಸ್ತ್ರಾಭರಣಗಳನ್ನು ಹೊಂದುವಿರಿ. ಆರೋಗ್ಯ ಚೆನ್ನಾಗಿ ಆಗುವುದು. ಅಂದುಕೊಂಡದ್ದಕ್ಕಿಂತ ಹೆಚ್ಚಾಗಿ ಪಡೆಯುವಿರಿ. ನಿರ್ದಿಷ್ಟ ಆದಾಯ ಬರುವಂತಾಗುವುದು. ಮನೆಯಲ್ಲಿ ಶುಭ ಕಾರ್ಯಗಳು ನೆರವೇರುವುದು. ಹೃದಯ ಸಂಬಂಧಿ ಸಮಸ್ಯೆಗಳು ಉಂಟಾಗದಂತೆ ಎಚ್ಚರಿಕೆವಹಿಸಿ.

### ಮೀನ

ಕೈಗೊಂಡ ಕಾರ್ಯಗಳು ಫಲಿತಗೊಳ್ಳುತ್ತವೆ. ಉದ್ಯೋಗದಲ್ಲಿ ಸ್ಥಾನಮಾನಲಭಿಸುತ್ತದೆ. ವ್ಯಾಪಾರದಲ್ಲಿ ಅಭಿವೃದ್ಧಿಯಾಗುತ್ತದೆ. ಮನೆಯಲ್ಲಿ ಶುಭಕಾರ್ಯ ಜರುಗುತ್ತದೆ. ಮಕ್ಕಳ ಭಾಗ್ಯಲಭಿಸುತ್ತದೆ. ನ್ಯಾಯ ಹಾಗೂ ಬುದ್ಧಿವಂತಿಕೆ ಕೆಲಸಗಳನ್ನು ಮಾಡುವಿರಿ. ಧಾರ್ಮಿಕ ವ್ಯವಹಾರಗಳಿಗೆ ದಾನ ಮಾಡುವಿರಿ. ಆಕಸ್ಮಿಕ ಧನ ಲಾಭವಾಗುವುದು.



# ನಿಮ್ಮ ಸಂದೇಹಗಳಿಗೆ ನಮ್ಮ ಉತ್ತರಗಳು

– ಡಾ॥ ಅನಸೂಯ ಎಸ್. ರಾಜೀವ್

**1.ಆಕಾಶದಲ್ಲಿ ಅಸಂಖ್ಯಾತ ನಕ್ಷತ್ರಗಳಿದ್ದರೂ 27 ನಕ್ಷತ್ರಗಳನ್ನು ಮಾತ್ರ ಗಣನೆಗೆ ತೆಗೆದುಕೊಳ್ಳಲು ಕಾರಣವೇನು?**

**ಉತ್ತರ :** ನಮ್ಮ ಬ್ರಹ್ಮಾಂಡದಲ್ಲಿ ಸುಮಾರು ಇನ್ನೂರಕ್ಕಿಂತಲೂ ಹೆಚ್ಚು ನಕ್ಷತ್ರಪುಂಜಗಳಿವೆ. ಅವುಗಳಲ್ಲಿ ಕೇವಲ ಹನ್ನೆರಡು ನಕ್ಷತ್ರಪುಂಜಗಳು ಅಂದರೆ ಇಪ್ಪತ್ತೇಳು ಮಾತ್ರ ಪ್ರತಿಯೊಬ್ಬ ಮಾನವನಿಗೆ ತಿಳಿದಿರುತ್ತದೆ. ಸೂರ್ಯನ ಕಾಂತಿ ಮಾರ್ಗದ 90 ಡಿಗ್ರಿ ಮೇಲೆ 90 ಡಿಗ್ರಿ ಕೆಳಗೆ ಎರಡು ಚಿಕ್ಕ ಚಿಕ್ಕ ವೃತ್ತಾಕಾರಗಳು ಕಾಣಸಿಗುತ್ತವೆ. ಈ ವೃತ್ತವು ಸೂರ್ಯನ ಕಕ್ಷೆಗೆ ಸಮಾನಾಂತರವಾಗಿರುತ್ತದೆ. ಚಂದ್ರ ಮತ್ತು ಉಳಿದ ಗ್ರಹಗಳು ಈ ಸಮಾನಾಂತರ ರೇಖೆಗಳಲ್ಲಿಯೇ ಚಲಿಸುತ್ತವೆ. ಈ ಸಮಾನಾಂತರ ವೃತ್ತಗಳಿಂದುಟಾಗಿರುವ ಒಂದು ಊಹಾ ರೇಖೆಗೆ ಕಾಂತಿ ಮಾರ್ಗದ 8 ಡಿಗ್ರಿ ಅಕ್ಕ ಪಕ್ಕದಲ್ಲಿ ರಾಶಿ ಚಕ್ರ ಎಂದು ಕರೆಯುತ್ತಾರೆ. ಎಷ್ಟೊಂದು ನಕ್ಷತ್ರ ಪುಂಜಗಳಿದ್ದರೂ ಹನ್ನೆರಡು ರಾಶಿಗಳನ್ನು ಮಾತ್ರ ನಾವು ಗಣನೆಗೆ ತೆಗೆದುಕೊಳ್ಳಲು ಕಾರಣವೆಂದರೆ ಗ್ರಹಗಳು ಮತ್ತು ಸೂರ್ಯಚಂದ್ರರು ಈ ಹನ್ನೆರಡು ರಾಶಿಗಳ ಊಹಾ ರೇಖೆಯ ಮೇಲೆ ಮಾತ್ರ ಹಾದು ಹೋಗುತ್ತದೆ.

**2. ಹನ್ನೆರಡು ಮಾಸಗಳಿವೆ. ಚೈತ್ರಮಾಸದಿಂದ ಫಾಲ್ಗುಣ ಮಾಸದವರೆಗೆ ಆಯಾ ಹೆಸರುಗಳು ಹೇಗೆ ಬಂದಿತು?**

**ಉತ್ತರ :** ನಕ್ಷತ್ರಗಳಿಂದಲೇ ಮಾಸಕ್ಕೆ ಹೆಸರು. ಪ್ರತಿ ಮಾಸದ ಹುಣ್ಣಿಮೆಯಂದು ಯಾವ ನಕ್ಷತ್ರ ಬರುವುದೋ ಆ ನಕ್ಷತ್ರದ ಹೆಸರಿನಿಂದಲೇ ಆ ಮಾಸವನ್ನೂ ಕರೆಯಲಾಗುತ್ತದೆ. ಹುಣ್ಣಿಮೆಯಂದು, ಚಿತ್ತಾ ನಕ್ಷತ್ರವು ಬರುವುದರಿಂದ ಚೈತ್ರಮಾಸವೆಂದೂ, ವಿಶಾಖನಕ್ಷತ್ರವೂ ಬಂದಾಗ ವೈಶಾಖ ಮಾಸವೆಂತಲೂ, ಜ್ಯೇಷ್ಠ ನಕ್ಷತ್ರವು ಬಂದಾಗ ಜ್ಯೇಷ್ಠ ಮಾಸವೆಂತಲೂ, ಪೂರ್ವಾಷಾಢ ನಕ್ಷತ್ರವೂ ಬಂದಾಗ ಅಷಾಢ ಮಾಸವೆಂತಲೂ, ಶ್ರವಣ ನಕ್ಷತ್ರವು ಬರುವುದರಿಂದ ಶ್ರಾವಣ ಮಾಸವೆಂತಲೂ, ಪೂರ್ವಾಭಾದ್ರ ನಕ್ಷತ್ರವು ಬರುವುದರಿಂದ ಭಾದ್ರಪದ ಮಾಸವೆಂತಲೂ, ಅಶ್ವಿನಿ ನಕ್ಷತ್ರವು ಬರುವುದರಿಂದ ಆಶ್ವೀಜಮಾಸವೆಂತಲೂ, ಕೃತ್ತಿಕಾ ನಕ್ಷತ್ರವು ಬರುವುದರಿಂದ ಕಾರ್ತೀಕ ಮಾಸವೆಂತಲೂ,ಮೃಗಶಿರಾ ನಕ್ಷತ್ರವು ಬರುವುದರಿಂದ ಮಾರ್ಗಶಿರ ಮಾಸವೆಂತಲೂ, ಪುಷ್ಯ ನಕ್ಷತ್ರವು ಬರುವುದರಿಂದ ಪುಷ್ಯ ಮಾಸವೆಂತಲೂ, ಮಖಾ ನಕ್ಷತ್ರವು ಬರುವುದರಿಂದ ಮಾಘ ಮಾಸವೆಂತಲೂ, ಉತ್ತರ ಫಲ್ಗುಣಿ ನಕ್ಷತ್ರ ಬಂದಾಗ ಫಾಲ್ಗುಣ ಮಾಸವೆಂದೂ ಹೆಸರು ಬಂದಿದೆ.

**3.ಅಷ್ಟವಿಧ ವಿವಾಹ ಪದ್ಧತಿ ಭಾರತದಲ್ಲಿ ಸ್ವೀಕೃತವಾದುದು. ಅವು ಯಾವುವು?**

**ಉತ್ತರ :** 1. ಬ್ರಾಹ್ಮ ವಿವಾಹ: ವಧೂವರರಿಗೆ ಪರಸ್ಪರ ಒಪ್ಪಿಗೆ ಇದ್ದು ಕನ್ಯಾದಾನ ಮಾಡುವುದಕ್ಕೆ ಬ್ರಾಹ್ಮ ವಿವಾಹ ಎಂದು ಹೆಸರು.

2. ದೈವವಿವಾಹ: ಯಜ್ಞಯಾಗ ಮುಂತಾದ ಧಾರ್ಮಿಕ ಕರ್ಮಗಳಲ್ಲಿ ಋತ್ವಿಜನಿಗೆ ಕನ್ಯಾದಾನ ಮಾಡುವುದು ದೈವ ವಿವಾಹ.

3. ಪ್ರಜಾಪತ್ಯ ವಿವಾಹ-ವಧೂವರರಿಗೆ ಒಪ್ಪಿಗೆ ಇದ್ದು ಹಿರಿಯರು ಅನುಮತಿ ನೀಡಿ ಗೃಹಸ್ಥ ಧರ್ಮವನ್ನು ಪಾಲಿಸುವಂತೆ ಮಾಡಿಸುವುದೇ ಪ್ರಜಾಪತ್ಯ ವಿವಾಹ.

4.ಆರ್ಷ ವಿವಾಹ-ವರನಿಗೆ ಗೋ ವೃಷಭಗಳನ್ನು ದಾನ ಕೊಟ್ಟು ಕನ್ಯಾದಾನ ಮಾಡುವುದು ಆರ್ಷ ವಿವಾಹ.

5. ಗಾಂಧರ್ವ ವಿವಾಹ-ಹೆಣ್ಣು ಗಂಡು, ಪರಸ್ಪರ ಪ್ರೀತಿಸಿ ಅನುರಕ್ತರಾಗಿ ವಿವಾಹವಾಗುವುದು ಗಾಂಧರ್ವ ವಿವಾಹ.

6. ಅಸುರ ವಿವಾಹ - ಹೆಣ್ಣಿನ ತಂದೆಗೂ , ಹೆಣ್ಣಿಗೂ ಸಾಕಷ್ಟು ಧನಕನಕಗಳನ್ನು ನೀಡಿ ಮದುವೆಯಾಗುವುದಕ್ಕೆ ಅಸುರ ವಿವಾಹ ಎಂದು ಹೆಸರು.

7.ಪೈಶಾಚಿಕ ವಿವಾಹ-ನಿದ್ರೆ ಮಾಡುತ್ತಿರುವ ಕನ್ಯೆಯನ್ನೂ ಅಪಹರಿಸಿ ಮದುವೆಯಾಗುವುದೇ ಪೈಶಾಚಿಕ ವಿವಾಹ.

8. ರಾಕ್ಷಸ ವಿವಾಹ-ಬಲಾತ್ಕಾರದಿಂದ ಮದುವೆಯಾಗುವುದೇ ರಾಕ್ಷಸ ವಿವಾಹ.

# ನಿಜವಾದ ದಾನಿ ಎಂದರೆ ಯಾರು?

– ಎ, ಆರ್. ರಘುರಾಮ
99161 38436

ಜಾನಶ್ರುತಿ ಎಂಬ ಮಹಾರಾಜನಿದ್ದ. ಅವನಿಗೆ ಒಂದೇ ಅಪೇಕ್ಷೆ. ತನ್ನ ರಾಜ್ಯದಲ್ಲಿ ಯಾರೂ ಉಪವಾಸ ಇರಬಾರದು ಎಂಬುದು. ಸರಿ ಇದಕ್ಕಾಗಿ ಆತ ಅನ್ನದಾನ ಸೇವೆಗೆ ಮುಂದಾದ. ರಾಜಧಾನಿ,ನಗರ, ಪಟ್ಟಣ ಸೇರಿದಂತೆ ರಾಜ್ಯದ ಗಡಿವರೆಗೂ ಸ್ಥಳಗಳನ್ನು ಗುರುತಿಸಿ ಛತ್ರ, ಗುಡಿ, ಮಠ, ಮಂದಿರ, ವನಗಳ ತಾಣದಲ್ಲಿ ಅನ್ನದಾನ ಕೇಂದ್ರಗಳನ್ನು ತೆರೆದ. ಸುಮಾರು ವರ್ಷ ಅನ್ನದಾನ ಸಾಗಿತು.

ರಾಜ್ಯದಲ್ಲಿ ಯಾರಿಗೂ ಹಸಿವೆ ಎಂಬುದೇ ಇರಲಿಲ್ಲ. ಎಲ್ಲರೂ ಸಂತುಷ್ಟರಾಗಿದ್ದರು. ಈತನ ಕೀರ್ತಿ ನೆರೆ ಹೊರೆ ರಾಜ್ಯಗಳಿಗೆ, ವಿಶ್ವದ ವಿವಿಧ ಮೂಲೆಗಳಿಗೆ ಹಬ್ಬಿತ್ತು. ಮಾತ್ರವಲ್ಲ, ಸ್ವರ್ಗಲೋಕದಲ್ಲೂ ಜಾನಶ್ರುತಿ ರಾಜನ ಅನ್ನದಾನ ಸೇವೆ ಬಗ್ಗೆ ಚರ್ಚೆಗಳು ನಡೆದವು. ಆತ ಅನ್ನದಾನ ಶೂರ!

ಜಾನಶ್ರುತಿಗೆ ಹೆಮ್ಮೆಯೋ ಹೆಮ್ಮೆ. ನನ್ನ ಸಮ ಯಾರೂ ಇಲ್ಲ ಎಂದು ಒಂದಿಷ್ಟು ಜಂಭವೂ ಆತನನ್ನು ಆವರಿಸಿತ್ತು. ಆತ ಒಂದು ದಿನ ಅರಮನೆ ಉಪ್ಪರಿಗೆಯಲ್ಲಿ ಕುಳಿತು ಅಲ್ಲಿಂದಲೇ ರಾಜಧಾನಿಯ ಅನ್ನದಾನ ಛತ್ರಗಳ ಸೇವೆಯನ್ನು ನೋಡುತ್ತಾ ಇದ್ದ. ಎಲ್ಲರೂ ರಾಜನನ್ನು ಸ್ಮರಿಸುತ್ತಾ ಊಟ ಮಾಡುತ್ತಿದ್ದರು. ಇವನೇ ಶಾಶ್ವತವಾಗಿ ರಾಜನಾಗಿ ಇರಲಿ. ಅವನ ವಂಶ "ಉತ್ತ ರೋತ್ತರ ಬೆಳಗಲಿ, ಅನ್ನದಾತಾ ಸುಖೀಭವ" ಎಂದೆಲ್ಲಾ ಹೇಳಿ ಕೊಂಡು ಪ್ರಸಾದ ಸ್ವೀಕಾರ ಮಾಡುತ್ತ ಇದ್ದರು.

ಉಪ್ಪರಿಗೆಯ ಜಾಲಂಧ್ರ (ಕಿಟಕಿ) ಬಳಿ ಎರಡು ಪಾರಿವಾಳ ಬಂದವು. ಗಂಡು ಪಾರಿವಾಳ ಹೆಣ್ಣು ಪಕ್ಷಿಗೆ ಹೇಳಿತು. ಮುಂದೆ ಮುಂದೆ ಹಾರಬೇಡ. ಅಲ್ಲಿ ಜಾನಶ್ರುತಿ ಅನ್ನದಾನ ಮಾಡಿದ ಕೀರ್ತಿಯು ಸ್ವರ್ಗಕ್ಕೆ ಹೋಗುತ್ತಿದೆ. ಆ ಕೀರ್ತಿ ತಾಪಕ್ಕೆ ನೀನು ಸಿಲುಕಿ ಸುಟ್ಟು ಹೋಗುವೆ! ಹೆಣ್ಣು ಪಾರಿವಾಳ ಉತ್ತರಿಸಿತು. ಜಾನಶ್ರುತಿಯ ಅನ್ನದಾನ ಹೊಗಳಬೇಡ. ಆತ ದಾನಮಾಡುವ ಅನ್ನ ಬಂದದ್ದು ಭತ್ತದಿಂದ. ಶ್ರಮವಹಿಸಿ ಬೆಳೆದವನು ಕೃಷಿಕ. ಅದಕ್ಕೆ ಭೂಮಿ ತಾಯಿಯೇ ನೆಲೆ,ಗಾಳಿ, ಬೆಳಕು, ಶಾಖ ಇತ್ಯಾದಿಗಳಿಂದ ಫಸಲು ಬಂತು. ಎಲ್ಲವೂ ದೇವರ ಸೃಷ್ಟಿ. ಇದರಲ್ಲಿ ಜಾನಶ್ರುತಿ ಕೊಡುಗೆ ಏನು? ಪುಣ್ಯ ಅವನೊಬ್ಬನಿಗೇ ಹೇಗೆ? ಎಂದಿತು. ಮಹಾರಾಜ ಬೆವರಿದ! ರಾಜಧಾನಿ ಆಚೆ ಸಂತೆ ಬಳಿ ರಾಮ ಎನ್ನುವ ಶ್ರಮಿಕನಿದ್ದಾನೆ. ಆತ ಬ್ರಹ್ಮಜ್ಞಾನಿಯೂ ಹೌದು. ಅವನು ದಿನವೂ ಎತ್ತಿನಗಾಡಿ ಬಳಸಿ ದಿನಸಿ ಸಾಮಾನು ಸಾಗಣೆ ಮಾಡುತ್ತಾನೆ. ಕೂಲಿ ಹಣದಲ್ಲಿ ಜೀವನ ಮಾಡುತ್ತಿದ್ದಾನೆ. ಅಂಥವನಿಗೆ ಈ ಅನ್ನದಾನದ ಪುಣ್ಯ ಹೋಗುತ್ತಿದೆ ಎಂದಿತು. ರಾಜ ಗಲಿಬಿಲಿಗೊಂಡ. ಹರಿವಾಣದಲ್ಲಿ ಚಿನ್ನದ ನಾಣ್ಯ ಆಭರಣ, ಪೀತಾಂಬರ ಫಲ-ಪುಷ್ಪ ಇರಿಸಿಕೊಂಡು ರಾಮ ಇದ್ದಲ್ಲಿಗೆ ಹೊರಟ. ಗಾಡಿ ಕೆಳಗೆ ಮಲಗಿದ್ದ ಆತನಿಗೆ ರಾಜ ನಮಿಸಿದ. ಬ್ರಹ್ಮಜ್ಞಾನವನ್ನು ನನಗೆ ತಿಳಿಸು ಎಂದು ಬೇಡಿದ. ರಾಮನು ಮೊದಲು ಚಿನ್ನದ ಹರಿವಾಣ ಝಾಡಿಸಿ ಒದ್ದ. ರಾಜನೇ ಬ್ರಹ್ಮ ಜ್ಞಾನ ಎಂಬುದು ಬಂಗಾರ, ಬೆಳ್ಳಿಗೆ ಮರುಳಾಗಿ ದೊರೆಯದು. ಭಕ್ತಿ-ಶ್ರದ್ಧೆ ಇದ್ದರೆ ಮಾತ್ರ ಲಭ್ಯ. ರಾಜ ದಂಗಾದ ಮಹಾ ಅನ್ನದಾನಿ ಎಂಬ ಅಹಂಕಾರ ಅಡಗಿತು. ಸಾಮಾನ್ಯ ಶ್ರಮಿಕ ರಾಮನಿಂದ ಬ್ರಹ್ಮಜ್ಞಾನದ ವಿವರ ತಿಳಿದ. ನಂತರ ಮೋಕ್ಷವೂ ದೊರಕಿತು. ಛಾಂದೋಗ್ಯ ಉಪನಿಷತ್ತಿನಲ್ಲಿ ಬರುವ ಈ ಕತೆ ಅಹಂಕಾರ ತ್ಯಜಿಸಬೇಕು ಎಂಬ ಸಂದೇಶ ನೀಡುತ್ತದೆ.

**ವೃಕ್ಷೋ ರಕ್ಷತಿ ರಕ್ಷಿತಃ**

**ಗಿಡವೊಂದ ನೆಡುವವನು**
**ದೇವರಾ ಸೇವಕನು**
**ನೆನೆವರವನನು ಜನರು**
**ಅವನೆಂದು ನೋಡದರು**

# ಪುಟಾಣಿ ಮಕ್ಕಳಿಗಾಗಿ

ಈ ಗೊಂಬೆಗೆ
ಚುಕ್ಕಿಯನ್ನು
ಸೇರಿಸಿ ಹಾಗೂ
ಬಣ್ಣವನ್ನು ತುಂಬಿರಿ.



ಬಣ್ಣವನ್ನು
ತುಂಬಿರಿ.



## ಮಾರ್ಗ ಅನ್ವೇಷಣೆ

ಮಕ್ಕಳೇ, ಅಲ್ಲಿರುವ
ಹೆಂಗಸರು ಯಾವ
ಹಾದಿಯಲ್ಲಿ ಹೋಗಿ

ದೀಪವನ್ನು ದೇವರ ಬಳಿ
ಇಡುತ್ತಾರೆ. ಎಂದು ಕಂಡು
ಹಿಡಿಯಿರಿ ನೋಡೋಣ !







## ಈ ಚಿತ್ರವನ್ನು ಗಮನಿಸಿ

ಈ ಚಿತ್ರದಲ್ಲಿ ಯಾವುದು ವಿಭಿನ್ನವಾಗಿದೆ ಎಂದು ಕಂಡು
ಹಿಡಿಯಿರಿ ಮಕ್ಕಳೆ ನೋಡೋಣ

# ರಸ ಪ್ರಶ್ನೆಗಳು

01. ಚಂದ್ರನು ಕೃತ್ತಿಕಾ ನಕ್ಷತ್ರದಲ್ಲಿರುವುದರಿಂದ ಈ ಮಾಸವನ್ನು ಏನೆಂದು ಕರೆಯುತ್ತಾರೆ? ..........
02. ಶ್ರೀಕಾಂತನ ಶ್ರೀರಮಣನ ಪತ್ನಿ ಯಾರು? ..........
03. ಲಕ್ಷ್ಮೀದೇವಿಯು ಯಾರ ಪುತ್ರಿಯಾಗಿ ಆವಿರ್ಭವಿಸಿದಳು?..........
04. ತೊಂಡಮಾನ ಚಕ್ರವರ್ತಿ ವೆಂಕಟೇಶ್ವರನ ಅರ್ಚನೆಗಾಗಿ ಪ್ರತಿದಿನ ಯಾವ ಪುಷ್ಪಗಳನ್ನು ಮಾಡಿಸುತ್ತಿದ್ದನು? ..........
05. ದ್ವೈತ ಸಿದ್ಧಾಂತದ ಪ್ರವರ್ತಕರಾದ ಶ್ರೀ ಶ್ರೀ ಮಧ್ವಾಚಾರ್ಯರ ಮೊದಲನೇ ಶಿಷ್ಯರು ಯಾರು? ..........
06. ಕುರುಕುಲ ಪಿತಾಮಹ ಎಂದು ಯಾರನ್ನು ಕರೆಯುತ್ತಾರೆ?..........
07. ಹುಲ್ಲಹಳ್ಳಿಯ ವರದರಾಜಸ್ವಾಮಿಯ ದೇವಾಲಯದ ಸಮೀಪ ಯಾವ ಮಂದಿರವಿದೆ?..........
08. ಮೂಲಮೂರ್ತಿಗೆ ಯಾವಾಗ ಅಭಿಷೇಕ ಮಾಡಲಾಗುತ್ತದೆ? ..........
09. ನೆಲ್ಲಿಕಾಯಿಗೆ ಯಾವ ಶಾಸ್ತ್ರದಲ್ಲಿ ವಿಶೇಷ ಮಹತ್ವವನ್ನು ನೀಡಲಾಗಿದೆ? ..........
10. ಮಂಗ್ಯ ಎಂದರೆ ಏನು? ..........
11. ಆದಿಶೇಷನು ಸಾವಿರ ತಾಳೆಗರಿಗಳಿಂದ ಬಂಧಿತವಾದಂತೆ ಯಾವ ಪರ್ವತವನ್ನು ಬಿಗಿಯಾಗಿ ಹಿಡಿದನು? ..........
12. ಋಷ್ಯಶೃಂಗ ಮುನಿಯ ಮಗ ಯಾರು? ..........
13. ನಾಲ್ಕು ಮಾಸಗಳ ಅದಿದೇವತೆ ಯಾರು?..........
14. ನಮ್ಮ ಬ್ರಹ್ಮಾಂಡದಲ್ಲಿ ಎಷ್ಟು ನಕ್ಷತ್ರಪುಂಜಗಳಿವೆ? ..........
15. ಹೆಣ್ಣು ಗಂಡು, ಪರಸ್ಪರ ಪ್ರೀತಿಸಿ ಅನುರಕ್ತರಾಗಿ ವಿವಾಹವಾಗುವುದನ್ನು ಏನೆಂದು ಕರೆಯುತ್ತಾರೆ? ..........

## ಸೂಚನೆಗಳು

**40 ಕ್ವಿಜ್**

1. ಈ ಕ್ವಿಜ್ 10-15 ವರ್ಷ ವಯಸ್ಸಿನ ಮಕ್ಕಳು ಹಿಂದೂವಾಗಿರಬೇಕು.
2. ಈ ಕ್ವಿಜ್‌ನಲ್ಲಿ ಪಾಲ್ಗೊಳ್ಳುವ ಮಕ್ಕಳ ತಂದೆ ತಾಯಿ ತಪ್ಪದೇ ಸಪ್ತಗಿರಿ ಮಾಸಪತ್ರಿಕೆಯ ಚಂದಾದಾರರಾಗಿರಬೇಕು.
3. ಕ್ವಿಜ್ ಪ್ರಶ್ನಾಪತ್ರಿಕೆಯಲ್ಲಿ ತಪ್ಪದೇ ತಮ್ಮ ಚಂದಾ ಸಂಖ್ಯೆ, ಹೆಸರು, ವಿಳಾಸ, ಪಿನ್‌ಕೋಡ್, ಫೋನ್ ನಂಬರ್ ಸ್ಪಷ್ಟವಾಗಿ ಬರೆಯಬೇಕು.
4. ಕ್ವಿಜ್ ಉತ್ತರಗಳನ್ನು ಪ್ರಶ್ನೆಯ ಕೆಳಗೆ ನಿರ್ದೇಶಿಸಿದ ಸ್ಥಳದಲ್ಲಿಯೇ ಬರೆದು ಕಳುಹಿಸಬೇಕು.
5. ಕ್ವಿಜ್ ಉತ್ತರದ ಜೆರಾಕ್ಸ್ ಅನ್ನು ತೆಗೆದುಕೊಂಡು ಕಳುಹಿಸಿದವರು ಖಚಿತವಾಗಿ ಚಂದಾನಂಬರ್‌ನ್ನು ಕಳುಹಿಸಬೇಕು. ಒಬ್ಬ ಚಂದಾದಾರರು ಒಂದು ಉತ್ತರವನ್ನು ಮಾತ್ರವೇ ಕಳುಹಿಸ ತಕ್ಕದ್ದು.
6. ಉತ್ತರ ಬರೆಯುವಾಗ ಅಳಿಸುವುದು,ತಿದ್ದುವುದು ಮಾಡಬಾರದು.
7. ನಿಮ್ಮ ಉತ್ತರಗಳನ್ನು ನಮಗೆ ಕಳುಹಿಸಬೇಕಾದ ಕೊನೆಯ ದಿನಾಂಕ ಇದೇ ತಿಂಗಳ 25 ರ ಒಳಗೆ ಕಳುಹಿಸಬೇಕು.
8. ಈ ಕ್ವಿಜ್‌ನಲ್ಲಿ ಎಲ್ಲಾ ಉತ್ತರಗಳನ್ನು ಸರಿಯಾಗಿ ಬರೆದ ಮೂರು ಮಕ್ಕಳನ್ನು ಮಾತ್ರವೇ ವಿಜೇತರಾಗಿ ಲಕ್ಕಿ ಡಿಫ್ ಮುಖಾಂತರ ಆಯ್ಕೆ ಮಾಡಲಾಗುತ್ತದೆ.
9. ವಿಜೇತರಾದ ಮಕ್ಕಳ ಹೆಸರನ್ನು ಮುಂದಿನ ತಿಂಗಳ ಸಪ್ತಗಿರಿ ಮಾಸ ಪತ್ರಿಕೆಯಲ್ಲಿ ಪ್ರಕಟಿಸಲಾಗುತ್ತದೆ.
10. ತಿ.ತಿ.ದೇ. ಪ್ರಧಾನ ಸಂಪಾದಕರ ಕಾರ್ಯಾಲಯದಲ್ಲಿ ಕೆಲಸ ಮಾಡುವ ಉದ್ಯೋಗಿಗಳ ಮಕ್ಕಳು ಈ ಕ್ವಿಜ್‌ನಲ್ಲಿ ಪಾಲ್ಗೊಳ್ಳಬಾರದು.
11. ಕ್ವಿಜ್‌ಗೆ ಸಂಬಂಧಿಸಿದ ಯಾವ ಸಮಾಚಾರವನ್ನು ಫೋನ್ ಮುಖಾಂತರ ನೀಡಲಾಗುವುದಿಲ್ಲ.

**ನಿಮ್ಮ ಉತ್ತರಗಳನ್ನು ಕಳುಹಿಸಬೇಕಾದ ವಿಳಾಸ**

ಪ್ರಧಾನ ಸಂಪಾದಕರು
ಸಪ್ತಗಿರಿ ಮಾಸಪ್ರತಿಕೆ
ತಿ.ತಿ.ದೇ. ಪ್ರೆಸ್,
2 ನೇ ಅಂತಸ್ತು
ಕೆ.ಟಿ. ರಸ್ತೆ,
ತಿರುಪತಿ : 517 507
ಆಂಧ್ರ ಪ್ರದೇಶ್

| | |
|---|---|
| ಹೆಸರು : | ವಿಳಾಸ : |
| ಚಂದಾ ಸಂಖ್ಯೆ : | |
| ತಂದೆಯ ಹೆಸರು : | |
| ತಾಯಿಯ ಹೆಸರು: | ದೂರವಾಣಿ ಸಂಖ್ಯೆ : |

ಅಲಮೇಲು ಮಂಗಮ್ಮ ದೇವಸ್ಥಾನ ಎಲ್ಲಿದೆ?

ಪದ್ಮಾವತಿ ಅಮ್ಮನವರು ಎಲ್ಲಿ ಉದ್ಭವಿಸಿದರು?

ಪದ್ಮಾವತಿ ಅಮ್ಮನವರು ಯಾರ ಅಂಶ?

ವಿಷ್ಣುವಿಗೆ ಅತ್ಯಂತ ಪ್ರಿಯವಾದ ಸತಿಮಣಿ ಯಾರು?

ಪದ್ಮಾವತಿ ಅಮ್ಮನವರ ವಾಹನ ಸೇವೆ ಯಲ್ಲಿ ಅತ್ಯಂತ ಮುಖ್ಯವಾದ ವಾಹನ ಯಾವುದು?

ಪದ್ಮಾವತಿದೇವಿ ಯಾರಿಗೆ ಸಾವಿರ ದಳಗಳ ಮಧ್ಯೆ ದೊರೆತರು?

ಶ್ರೀನಿವಾಸನಿಗೆ ಪದ್ಮಾವತಿ ದೇವಿ ಮೊದಲು ಎಲ್ಲಿ ಕಾಣಿಸಿದರು?

ಪದ್ಮಾವತಿ ಅಮ್ಮನವರ ಬ್ರಹ್ಮೋತ್ಸವಗಳಲ್ಲಿ ಅತ್ಯಂತ ವಿಶೇಷ ಸೇವೆ ಯಾವುದು



ಈ ಚಕ್ರದಲ್ಲಿರುವ ಪ್ರಶ್ನೆಗಳಿಗೆ ಉತ್ತರವನ್ನು ಅದೇ ಬಣ್ಣದಲ್ಲಿರುವ ಬಾಕ್ಸ್‌ನಲ್ಲಿಯೇ ಬರೆಯಿರಿ

1) ತಿರುಚಾನೂರು 2) ಪದ್ಮ ಸರೋವರ 3) ಲಕ್ಷ್ಮೀದೇವಿ 4) ಪದ್ಮಾವತಿ ಅಮ್ಮನವರು 5) ಗಜವಾಹನ 6) ಆಕಾಶ ರಾಜ 7) ಅರಣ್ಯದಲ್ಲಿ 8) ಪಂಚಮಿತೀರ್ಥ

ಮಕ್ಕಳೇ! ಈ ಚಿತ್ರದಲ್ಲಿರುವ ರಬ್ಬರ್‌ನಲ್ಲಿರುವ ಅಂಕೆಗಳನ್ನು ಕೂಡಿದರೆ ಹಾಗೂ ಕಳೆದರೆ ಸರಿಯಾದ ಉತ್ತರದೊಂದಿಗೆ ಯಾವ ಪೆನ್ಸಿಲ್ ಬಾಕ್ಸ್‌ನಲ್ಲಿ ಸರಿ ಹೊಂದುತ್ತದೆ ಎಂದು ಕಂಡು ಹಿಡಿಯಿರಿ ನೋಡೋಣ!

1: 12-2
2: 13+7
3: 25+2
4: 16-4
5: 35+2

i: 37
ii: 27
iii: 10
iv: 18
v: 12
vi: 20

1) iii 2) vi 3) ii 4)v 5) i



ಮಕ್ಕಳೇ ಚೆನ್ನಾಗಿದ್ದೀರಾ ನಾನು ಎಂದರೆ ಎಲ್ಲರಿಗೂ ಬಹಳ ಪ್ರಿಯ ಲಕ್ಷ್ಮಿದೇವಿ ನನ್ನ ಮೇಲೆ ಕುಳಿತು ಕೊಳ್ಳುತ್ತಾರೆ. ಹಾಗೂ ನನ್ನನ್ನು ದೇವರ ಪೂಜೆಗೆ ಉಪಯೋಗಿಸುತ್ತಾರೆ. ನಾನು ಯಾರು ಎಂದು ಹೇಳಿ ನೋಡೋಣ!

ಪುಟಾಣಿಗಳೇ ನಾನು ಮೇಲೆ ಹೇಳಿದ ಮತ್ತು ಮೇಲಿರುವ ಚಿತ್ರವನ್ನು ನೋಡಿ ನಾನು ಯಾರು ಎಂದು ಕಂಡು ಹಿಡಿಯಿರಿ ನೋಡೋಣ!

ತಾವರೆ ಹೂ

# ಚಿತ್ರಕಥೆ

# ಚಿನ್ನದ ಮಳೆ


ಕಥೆ : ತೆಲುಗು ಮೂಲ : ಡಿ. ಶ್ರೀನಿವಾಸ ದೀಕ್ಷಿತರು
ಅನುವಾದ : ಬಿ. ಪಿ.
ಚಿತ್ರಗಳು : ಕೆ.ದ್ವಾರಕನಾಥ






ದೇಶಿಕರ ಬಾಯಿಂದ ಶ್ರೀಸ್ತುತಿ ಧಾರಾಕಾರವಾಗಿ ಹೊರ ಬರುತ್ತಿತ್ತು ಅಮ್ಮನವರ ಕಣ್ಣುಗಳಲ್ಲಿ ಹೊಳಪು....
ಯೋಗಾರಂಭ ತ್ವರಿತ ಮನಸಾ... ಅಮ್ಮಾ! ಈ ಬ್ರಹ್ಮಚಾರಿಯನ್ನು ಅನುಗ್ರಹಿಸು....
ಪಾಹಿಮಾಂ ದೇವೀ!
ಶ್ರೀ ಸ್ತುತಿಯು ಪೂರ್ತಿಯಾಯ್ತು 25 ಶ್ಲೋಕಗಳು...ಆಕಾಶದಿಂದ.. ಚಿನ್ನದ ಮಳೆ.... ಧಾರಾಕಾರವಾಗಿ.....
ಆಚಾರ್ಯಾ ! ಅಮ್ಮ ಕರುಣಿಸಿದಳು. ನಿಮ್ಮ ಅನುಗ್ರಹ ಅಪಾರವಾದುದು....
ಎಲ್ಲಾ ಅಮ್ಮನ ದಯೆ !
ಆಚಾರ್ಯಾ! ಪಾದಾಭಿವಂದನೆಗಳು ಬಂಗಾರದ ನಾಣ್ಯಗಳು.. ಸುವರ್ಣ ಕಾಂತಿಗಳು ಬಂಗಾರ...
ಮಗು! ದುರಾಸೆ ಬೇಡ ನಿನ್ನ ದಾರಿದ್ರ್ಯ ಕಳೆಯಿತು. ಬಂಗಾರವನ್ನು ತೆಗೆದುಕೋ! ಇದು ನಿನಗೆ ಪ್ರಾಪ್ತಿಯಾಗಿದ್ದು!
ಹಾಗೆಯೇ ಆಚಾರ್ಯಾ !
ಇನ್ನು ಗೃಹಸ್ಥಾಶ್ರಮವನ್ನು ಸ್ವೀಕರಿಸು!
ಬ್ರಹ್ಮಚಾರಿ ತೆಗೆದುಕೊಂಡು ಉಳಿದಿದ್ದ ಬಂಗಾರವೆಲ್ಲಾ ಮಾಯವಾಯಿತು!
ಸರ್ವೇ ಜನಾಃ ಸುಖಿನೋ ಭವಂತು
ಬ್ರಹ್ಮಚಾರಿ ಭಕ್ತಿಯಿಂದ ದೇಶಿಕರ ಕಾಲಿಗೆ ನಮಸ್ಕರಿಸಿ
ವೇದಾಂತದೇಶಿಕಂ ಜೈ ಜೈ !

ತಿರುಮಲೆ ತಿರುಪತಿ ದೇವಸ್ಥಾನಗಳು, ತಿರುಪತಿ

# ಸಪ್ತಗಿರಿ

(ಆಧ್ಯಾತ್ಮಿಕ ಮಾಸಪತ್ರಿಕೆ)

## ಚಂದಾ ನಮೂನೆ ಪತ್ರ

1. ಹೆಸರು ಮತ್ತು ವಿಳಾಸ :

(ಬಿಡಿ ಬಿಡಿ ಅಕ್ಷರಗಳಲ್ಲಿ ಅರ್ಥವಾಗುವಂತೆ ಇಂಗ್ಲೀಷಿನಲ್ಲಿ ಬರೆಯಿರಿ. ಪಿನ್ ಕೋಡ್ ತಪ್ಪದೇ ನಮೂದಿಸಿ)

(ಪಿನ್ ಕೋಡ್ ತಪ್ಪದೇ ನಮೂದಿಸಿ)

(ಸೆಲ್ ನಂಬರ್)

2. ಬೇಕಾಗುವ ಭಾಷೆ :

☐ ಕನ್ನಡ ☐ ತೆಲುಗು ☐ ತಮಿಳು

☐ ಹಿಂದೀ ☐ ಇಂಗ್ಲೀಷು ☐ ಸಂಸ್ಕೃತ

3. ವಾರ್ಷಿಕ ಚಂದಾ : ☐ ರೂ.240/-

4. ಆಜೀವಚಂದಾ : ☐ ರೂ.2,400/- ( 12 ವರ್ಷ),

5. ವಿದೇಶಿ ವಾರ್ಷಿಕ ಚಂದಾ : ☐ ರೂ.1030/-

6. ಚಂದಾ ನವೀಕರಣ :

(ಅ) ಚಂದಾ ನಂಬರು :

(ಆ) ಭಾಷೆ :

7. ಸಲ್ಲಿಸಿದ ಹಣ :

ಡಿ.ಡಿ. ಸಂಖ್ಯೆ/ ಈ.ಎಂ.ಓ/ಐ.ಪಿ.ಓ./ಅಟ್‌ಪರ್ ಚೆಕ್ಕು ಮಾತ್ರವೇ

ಸ್ಥಳ :

ದಿನಾಂಕ : ಚಂದಾದಾರರ ಸಹಿ

1. ಸಪ್ತಗಿರಿ ವಾರ್ಷಿಕ ಚಂದಾ ರೂ.240/-ಆಜೀವಚಂದಾ (12 ವರ್ಷ) ರೂ.2,400/-ಗಳು ಅನ್‌ಲೈನ್‌ಗಾಗಿ (https://ttdevasthanams.ap.gov. in), ಡಿ.ಡಿ. ಸಂಖ್ಯೆ/ಈ.ಎಂ.ಓ/ಐ.ಪಿ.ಓ./ ಅನ್ನು ಪ್ರಧಾನ ಸಂಪಾದಕರು, ಸಪ್ತಗಿರಿ,ತಿ.ತಿ.ದೇ.ತಿರುಪತಿ.ಅವರ ಹೆಸರಿನಲ್ಲಿ ತೆಗೆಯಬೇಕು.
2. ಸಪ್ತಗಿರಿ ಚಂದಾದಾರರಾಗಿ ಸೇರ ಬಯುಸುವವರು/ತಮ್ಮ ಚಂದಾ ನವೀಕರಿಸುವವರು ಈ ಕೂಪನ್‌ನಲ್ಲಿ ಅಥವಾ ಬಿಳಿ-ಹಾಳೆಯಲ್ಲಿ ಮೇಲೆ ತಿಳಿಸಿದಂತೆ ವಿವರಗಳನ್ನು ಬರೆದು ಕಳುಹಿಸಬೇಕು.
3. ಎಂ.ಓ.ಕಳುಹಿಸುವವರು ಅದರಲ್ಲಿ ನಿಮ್ಮ ಚಂದಾ ವಿವರಗಳನ್ನು ಬರೆದು ಈ ಕೆಳಗಿನ ವಿಳಾಸಕ್ಕೆ ಕಳುಹಿಸಿ.
4. ನಮ್ಮ ವಿಳಾಸ-ಪ್ರಧಾನಸಂಪಾಕರು,ಸಪ್ತಗಿರಿ ಕಾರ್ಯಾಲಯ,ತಿ.ತಿ.ದೇ., ಪ್ರೆಸ್. ಎರಡನೇ ಅಂತಸ್ತು, ಕೆ.ಟಿ.ರೋಡ್ದು, ತಿರುಪತಿ -517507.
5. ಸಪ್ತಗಿರಿ ಚಂದಾ ವಿವರಣೆಗಾಗಿ ಪೋನ್‌ನಂಬರ್ : 0877-2264359, 0877-2264543

ತಿರುಮಲೆ ತಿರುಪತಿ ದೇವಸ್ಥಾನಗಳು, ತಿರುಪತಿ

## ಆಧ್ಯಾತ್ಮಿಕ ಮಾಸಪತ್ರಿಕೆ ಸಪ್ತಗಿರಿ

- 'ಸಪ್ತಗಿರಿ' ತಿ.ತಿ.ದೇ.,ಆಧ್ಯಾತ್ಮಿಕ ಮಾಸಪತ್ರಿಕೆಯನ್ನು ಪ್ರಕಟಿಸಲಾಗಿದೆ.
- 'ಸಪ್ತಗಿರಿ' ಪತ್ರಿಕೆಯಲ್ಲಿ ಅನೇಕ ಆಧ್ಯಾತ್ಮಿಕ ವೈಶಿಷ್ಟಗಳನ್ನು ಪ್ರಕಟಿಸುತ್ತಿದೆ.
- 'ಸಪ್ತಗಿರಿ' ಪತ್ರಿಕೆಯು ತೆಲುಗು,ತಮಿಳು,ಕನ್ನಡ,ಹಿಂದಿ,ಇಂಗ್ಲೀಷ್ ಮತ್ತು ಸಂಸ್ಕೃತ ಭಾಷೆಗಳಲ್ಲಿ ಪ್ರಕಟವಾಗಿದೆ.
- 'ಸಪ್ತಗಿರಿ' ಪತ್ರಿಕೆಯ ವಾರ್ಷಿಕ ಚಂದಾ ರೂ. 240/-
- 'ಸಪ್ತಗಿರಿ' ಪತ್ರಿಕೆಯ ಆಜೀವ ಚಂದಾ (12 ವರ್ಷಗಳು ಮಾತ್ರ) ರೂ.2400/-
- 'ಸಪ್ತಗಿರಿ' ವಿದೇಶಿ ವಾರ್ಷಿಕ ಚಂದಾ ರೂ. 1030/-
- 'ಸಪ್ತಗಿರಿ' ಪತ್ರಿಕೆಯ ಚಂದಾ ಓದುಗರು ಡಿ.ಡಿ./ಇ.ಎಂ.ಓ./ಐ.ಪಿ.ಓ./ Online (ttdevasthanams.ap.gov.in) ಮೂಲಕ ಮಾಡಬಹುದು.
- 'ಸಪ್ತಗಿರಿ' ಪತ್ರಿಕೆಯ ಚಂದಾದಾರರು ಯಾವುದೇ ರಾಷ್ಟ್ರೀಯ ಬ್ಯಾಂಕ್ ಮುಖಾಂತರ ಪ್ರಧಾನ ಸಂಪಾದಕರು,ಸಪ್ತಗಿರಿ ಮಾಸಪತ್ರಿಕೆ, ತಿ.ತಿ.ದೇ., ತಿರುಪತಿ. ನೀವು ಡಿ.ಡಿ.ಅಂಚೆ ಮೂಲಕ, ಪ್ರಧಾನ ಸಂಪಾದಕರು,ಸಪ್ತಗಿರಿ ಕಾರ್ಯಾಲಯ, 2ನೇ ಅಂತಸ್ತು, ತಿ.ತಿ.ದೇ.,ಪ್ರೆಸ್ ಬಿಲ್ಡಿಂಗ್, ತಿರುಪತಿ - 517 507 ಎಂಬ ವಿಳಾಸಕ್ಕೆ ಕಳುಹಿಸಬಹುದು.
- ಚಂದಾದಾರರು ತಮ್ಮ ವಿಳಾಸ, ಪಿನ್‌ಕೋಡ್, ಸೆಲ್‌ಫೋನ್ ಸಂಖ್ಯೆ ಮತ್ತು ನಿಮಗೆ ಬೇಕಾದ ಪತ್ರಿಕೆಯ ಭಾಷೆಯನ್ನು ಸ್ಪಷ್ಟವಾಗಿ ಬರೆಯಬೇಕು.
- 'ಸಪ್ತಗಿರಿ' ಪತ್ರಿಕೆಯು ಸರಿಯಾದ ಸಮಯಕ್ಕೆ ತಲುಪದಿದ್ದರೆ ಅಥವಾ ವಿಳಾಸ ಬದಲಾದರೆ ಈ, ಇ-ಮೇಲ್ (Chiefeditortpt@gmail.com) ಅನ್ನು ಸಂಪ್ರದಿಸ ಬೇಕು.
- ಹೆಚ್ಚಿನ ವಿವರಗಳಿಗೆ ಸಂಪರ್ಕಿಸಬೇಕಾದ ದೂರವಾಣಿ ಸಂಖ್ಯೆ : 0877-2264359, 0877-2264360
- ಹೆಚ್ಚಿನ ವಿವರಗಳಿಗೆ ಪ್ರಧಾನ ಸಂಪಾದಕರು, ಸಪ್ತಗಿರಿ ಕಾರ್ಯಾಲಯ, 2ನೇ ಅಂತಸ್ತು, ತಿ.ತಿ.ದೇ., ಪ್ರೆಸ್ ಬಿಲ್ಡಿಂಗ್,ತಿರುಪತಿ - 517 507 ಈ ವಿಳಾಸವನ್ನು ಸಂಪರ್ಕಿಸುವ ಮೂಲಕ ಪಡೆಯಬಹುದು.
- ನೇರವಾಗಿ ಸಂಪರ್ಕಿಸಲು ಬಯಸುವವರು ಪ್ರಧಾನ ಸಂಪಾದಕರ ಕಾರ್ಯಾಲಯದ ಕೆಲಸದ ವೇಳೆ ಬೆಳ್ಳಿಗೆ 10.00 ಗಂಟೆಯಿಂದ ಸಂಜೆ 5.00 ಗಂಟೆಯ ವರೆಗೆ) ಯಲ್ಲಿ ಸಂಪರ್ಕಿಸಬಹುದು.

Printed by Sri Sri. R.V. Vijay Kumar, B.A., B.Ed, and and Published by Dr. V. G. Chokkalingam, M.A., Ph.D. on behalf of Tirumala Tirupati Devasthanams and Printed and Published at Tirumala Tirupati Devasthanams Press, 2nd Floor, K.T.Road, Tirupati - 517 507. Editor : Dr. V. G. Chokkalingam, M.A., Ph.D.



25-09-2025 ರಂದು ತಿರುಮಲೆಯಲ್ಲಿ ಭಕ್ತರಿಗಾಗಿ ನೂತನ ವಸತಿ ಸಮುದಾಯ ವೆಂಕಟಾದ್ರಿನಿಲಯ (ಪಿ.ಎ.ಸಿ) ವನ್ನು ಭಾರತದ ಉಪರಾಷ್ಟ್ರಪತಿ ಗೌ॥ ಶ್ರೀ. ಸಿ.ಪಿ. ರಾಧಾಕೃಷ್ಣನ್ ರವರೊಂದಿಗೆ ಸೇರಿ ಪ್ರಾರಂಭಿಸುತ್ತಿರುವ ಆಂಧ್ರಪ್ರದೇಶದ ಮುಖ್ಯಮಂತ್ರಿಗಳಾದ ಗೌ॥ ಶ್ರೀ ನಾರಾಚಂದ್ರಬಾಬು ನಾಯುಡು ರವರು ಈ ಕಾರ್ಯಕ್ರಮದಲ್ಲಿ ತಿ.ತಿ.ದೇ. ಅಧ್ಯಕ್ಷರು ಮತ್ತು ಇತರ ಉನ್ನತಾಧಿಕಾರಿಗಳು ಪಾಲ್ಗೊಂಡರು.



25-09-2025 ರಂದು ತಿರುಮಲೆ ವೈಕುಂಠಂ ಕ್ಯೂ ಕಾಂಪ್ಲೆಕ್ಸ್‌ನಲ್ಲಿ ಐ.ಸಿ.ಸಿ. ಸೆಂಟರ್ ಅನ್ನು ಪ್ರಾರಂಭಿಸುತ್ತಿರುವ ಆಂಧ್ರಪ್ರದೇಶದ ಮುಖ್ಯ ಮಂತ್ರಿಗಳಾದ ಗೌ॥ ಶ್ರೀ. ನಾರಾಚಂದ್ರಬಾಬು ನಾಯುಡು ರವರು ಮತ್ತು ಇತರ ಉನ್ನತಾಧಿಕಾರಿಗಳು ಪಾಲ್ಗೊಂಡರು.



24-09-2025 ರಂದು ತಿರುಮಲೆ ಸ್ವಾಮಿಯವರಿಗೆ ರೂ. 3.86 ಕೋಟಿ ಬೆಲೆಯುಳ್ಳ ಸ್ವರ್ಣ ಯಜ್ಞೋಪವೀತವನ್ನು ತಿ.ತಿ.ದೇ., ಆಡಳಿತ ಮಂಡಳಿಯ ಅಧ್ಯಕ್ಷರು ಶ್ರೀ ಬಿ.ಆರ್. ನಾಯುಡುರವರು, ಆಡಳಿತ ಮಂಡಳಿಯ ಸದಸ್ಯರಾದ ಶ್ರೀಮತಿ. ಪನಬಾಕ ಲಕ್ಷ್ಮಿ, ಶ್ರೀ ಭಾನುಪ್ರಕಾಶ್ ರೆಡ್ಡಿ, ಶ್ರೀ ನರೇಶ್‌ಕುಮಾರ್, ಶ್ರೀ ಶಾಂತಾರಾಮ್ ರವರ ನೇತೃತ್ವದಲ್ಲಿ ದಾತರಾದ ಶ್ರೀ ಪುವ್ವಾಡ ಮಸ್ತಾನ್‌ರಾವ್ ಶ್ರೀಮತಿ. ಕುಂಕುಮ ರೇಖಾ ದಂಪತಿಗಳಿಂದ ಸ್ವೀಕರಿಸುತ್ತಿರುವ ದೃಶ್ಯ.



18-09-2025 ರಂದು ಮಾತೃಶ್ರೀ ತರಿಗೊಂಡ ವೆಂಗಮಾಂಬ ಅನ್ನಪ್ರಸಾದ ಕೇಂದ್ರದಲ್ಲಿ ತಿ.ತಿ.ದೇ., ಕಾರ್ಯನಿರ್ವಹಣಾಧಿಕಾರಿ ಶ್ರೀ ಅನಿಲ್ ಕುಮಾರ್ ಸಿಂಘಾಲ್, ಐ.ಎ.ಎಸ್., ರವರು ತನಿಖೆ ನಿರ್ವಹಿಸಿ, ಭಕ್ತರೊಂದಿಗೆ ಮಾತನಾಡುತ್ತಿರುವ ದೃಶ್ಯ ಮಾಲಿಕೆ.



13-09-2025 ರಂದು ತಿ.ತಿ.ದೇ., ಆಡಳಿತ ಮಂಡಳಿಯ ಎಕ್ಸ್ ಅಫಿಷಿಯಾ ಸದಸ್ಯರಾಗಿ ಪ್ರಮಾಣ ಸ್ವೀಕರಿಸಿದ ಶ್ರೀ ದತ್ತಿ ಇಲಾಖೆಯ ಕಾರ್ಯದರ್ಶಿ ಡಾ॥ ಎಂ. ಹರಿಜವಹರ್‌ಲಾಲ್, ಐ.ಎ.ಎಸ್., ರವರು ಇವರಿಗೆ ತಿ.ತಿ.ದೇ., ಹೆಚ್ಚುವರಿ ಕಾರ್ಯನಿರ್ವಹಣಾಧಿಕಾರಿ ಶ್ರೀ. ಸಿ ಹಚ್. ವೆಂಕಯ್ಯ ಚೌದರಿ, ಐ.ಆರ್.ಎಸ್., ರವರು ಸ್ವಾಮಿಯವರ ಚಿತ್ರಪಟವನ್ನು ನೀಡುತ್ತಿರುವ ದೃಶ್ಯ.



13-09-2025 ರಂದು ತಿ.ತಿ.ದೇ., ಆಡಳಿತ ಮಂಡಳಿಯ ಸದಸ್ಯರಾಗಿ ಪ್ರಮಾಣ ಸ್ವೀಕರಿಸಿದ ಶ್ರೀ ಸುದರ್ಶನ್ ವೇಣು ರವರಿಗೆ ತಿ.ತಿ.ದೇ., ಹೆಚ್ಚುವರಿ ಕಾರ್ಯ ನಿರ್ವಹಣಾಧಿಕಾರಿ ಶ್ರೀ ಸಿ ಹೆಚ್. ವೆಂಕಯ್ಯಚೌದರಿ ಐ.ಆರ್.ಎಸ್., ರವರು ಸ್ವಾಮಿಯವರ ಚಿತ್ರಪಟವನ್ನು ನೀಡುತ್ತಿರುವ ದೃಶ್ಯ.



SAPTHAGIRI (KANNADA) SPIRITUAL ILLUSTRATED MONTHLY Published by Tirumala Tirupati Devasthanams Printing on 25-10–2025 and Posting at Tirupati RMS.Regd. with the Registrar of Newspapers for India under RNI. No. APKAN/2021/80589. Postal Regd.No.TRP/156/2024-2026 "Licenced toPost Without Prepayment No. PMGK/RNP/WPP-04(6)/2024-2026" Posting on 1th of Every Month

ತಿರುಚಾನೂರು
ಶ್ರೀ ಪದ್ಮಾವತಿ ಅಮ್ಮನವರ ಪುಷ್ಪಯಾಗ
26-11-2025